ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಗುರುವಾರ, ಜನವರಿ 30, 2025

ಸಂಪುಟ : 51 ಸಂಚಿಕೆ : 258 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com

# ಕುಂಭಮೇಳ : ಕಾಲ್ತುಳಿತ, ಪವಿತ್ರ ಸ್ನಾನಕ್ಕೆ ತೆರಳಿದ್ದ 30 ಜನ ಸಾವು



**60 ಜನರಿಗೆ ಗಾಯ**

ಮಹಾಕುಂಭ ನಗರ, ಜ. 29 - ಇಲ್ಲಿ ನಡೆಯುತ್ತಿರುವ ಮಹಾಕುಂಭ ಮೇಳದ ವೇಳೆ ಬುಧವಾರ ಬೆಳಗಿನ ಜಾವ ಕಾಲ್ತುಳಿತ ಸಂಭವಿಸಿ 30 ಜನರು ಸಾವನ್ನಪ್ಪಿದ್ದಾರೆ ಹಾಗೂ 60 ಜನರು ಗಾಯಗೊಂಡಿದ್ದಾರೆ.

ಮೌನಿ ಅಮಾವಾಸ್ಯೆ ಹಿನ್ನೆಲೆಯಲ್ಲಿ ಕೋಟ್ಯಂತರ ಜನರು ಸೇರಿದ ಸಂದರ್ಭದಲ್ಲಿ ಪವಿತ್ರ ಸ್ನಾನಕ್ಕಾಗಿ ಜನ ನೂಕುನುಗಲು ನಡೆಸಿದಾಗ ಈ ಅವಘಡ ಸಂಭವಿಸಿದೆ.

ಸ್ನಾನದ ಪವಿತ್ರ ಗಳಿಗೆ ಬೆಳಗಿನ ಜಾವ 3 ಗಂಟೆಗೆ ಆರಂಭವಾಗಿತ್ತು. ಈ ಹಿನ್ನೆಲೆಯಲ್ಲಿ ಪವಿತ್ರ ಸ್ನಾನಕ್ಕಾಗಿ ಜನರು ಒಮ್ಮೆಲೇ ಧಾವಿಸಿದಾಗ ಕಾಲ್ತುಳಿತ ಸಂಭವಿಸಿದೆ ಎಂದು ಪ್ರತ್ಯಕ್ಷ ದೃಶ್ಯಗಳು ತಿಳಿಸಿದ್ದಾರೆ.

ಸಂಪ್ರದಾಯದಂತೆ ಅಖಾಡಗಳು ಈ ವೇಳೆ ಪವಿತ್ರ ಸ್ನಾನ ನಡೆಸಬೇಕಿತ್ತು. ಆದರೆ ನೂಕು ನುಗ್ಗಲಿನ ಹಿನ್ನೆಲೆಯಲ್ಲಿ ಪವಿತ್ರ ಸ್ನಾನವನ್ನು ಅಖಾಡಗಳು ಮಧ್ಯಾಹ್ನಕ್ಕೆ ಮುಂದೂಡಿದವು.

ಬೆಳಗಿನ ಜಾವ ಮಂಗಳ ಸ್ನಾನಕ್ಕಾಗಿ ಮಂತ್ರಗಳು ಹಾಗೂ ಶ್ಲೋಕಗಳನ್ನು ಧ್ವನಿವರ್ಧಕಗಳ ಮೂಲಕ ಮೊಳಗಿಸಲಾಗುತ್ತಿತ್ತು. ಈ ಸಂದರ್ಭದಲ್ಲೇ ಆಂಬ್ಯೂಲೆನ್ಸ್‌ಗಳ ಸೈರನ್ ಧ್ವನಿಯೂ ಕೇಳಿ ಬಂತು. ಪೊಲೀಸರು ನೆರವಿಗಾಗಿ ಸ್ಥಳಕ್ಕೆ ಧಾವಿಸಿದರು. ಗಾಯಗೊಂಡವರನ್ನು ಮೇಳದ (2ನೇ ಪುಟಕ್ಕೆ)

## ರಾಜ್ಯದ ಗಾಯಾಳುಗಳ ಕರೆ ತರಲು ತಂಡ: ಸಿಎಂ

ಬೆಂಗಳೂರು,ಜ. 29- ಪ್ರಯಾಗ್‌ರಾಜ್‌ನ ಮಹಾಕುಂಭ ಮೇಳದಲ್ಲಿ ಕಾಲ್ತುಳಿತಕ್ಕೆ ಸಿಲುಕಿ ಗಾಯಗೊಂಡಿರುವ ಕರ್ನಾಟಕದವರನ್ನು ಕ್ಷೇಮವಾಗಿ ರಾಜ್ಯಕ್ಕೆ ಕರೆ ತರಲು ಅಧಿಕಾರಿಗಳನ್ನು ನಿಯೋಜಿಸಿರುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಈ ಸಂಬಂಧ ಟ್ವೀಟ್ ಮಾಡಿರುವ ಅವರು, ಮಹಾಕುಂಭದಲ್ಲಿ ಪಾಲ್ಗೊಂಡಿರುವ ಕನ್ನಡಿಗರು ಸ್ವಲ್ಪ ಜಾಗರೂಕತೆಯಿಂದಿರಿ ಎಂಬ ಕಿವಿಮಾತು ಹೇಳಿದ್ದಾರೆ.

ಮೇಳದಲ್ಲಿ ಮುಂಜಾನೆ ಸಂಭವಿಸಿದ ಕಾಲ್ತುಳಿತದಲ್ಲಿ ಹಲವರು ಸಾವೀಗೀಡಾಗಿರುವ ಸುದ್ದಿ ತಿಳಿದು ದುಃಖವಾಗಿದೆ, ಮೃತರ ಆತ್ಮಕ್ಕೆ ಶಾಂತಿ ಸಿಗಲೆಂದು ಪ್ರಾರ್ಥಿಸುತ್ತೇನೆ, ಗಾಯಗೊಂಡವರು ಶೀಘ್ರ ಗುಣಮುಖರಾಗಲೆಂದು ಹಾರೈಸುವುದಾಗಿ ಹೇಳಿದ್ದಾರೆ.

## ತಾಯಿ-ಮಗಳು ಸೇರಿ ಬೆಳಗಾವಿಯ ನಾಲ್ವರ ಸಾವು



ಕುಂಭಮೇಳದಲ್ಲಿ ಸಂಭವಿಸಿದ ಕಾಲ್ತುಳಿತದಲ್ಲಿ ಬೆಳಗಾವಿಯ ತಾಯಿ, (2ನೇ ಪುಟಕ್ಕೆ)

# ವೈದ್ಯಕೀಯ ಪಿಜಿ ಕೋರ್ಸ್‌ಗಳಲ್ಲಿ ಸ್ಥಾನೀಯ ಮೀಸಲಾತಿ ಕಲ್ಪಿಸುವುದು ಸಂವಿಧಾನ ಬಾಹಿರ



ನವದೆಹಲಿ, ಜ. 29 - ಮಹತ್ವದ ತೀರ್ಪೊಂದನ್ನು ನೀಡಿರುವ ಸುಪ್ರೀಂ ಕೋರ್ಟ್, ವೈದ್ಯಕೀಯ ಸ್ನಾತಕೋತ್ತರ ಕೋರ್ಸ್‌ಗಳಲ್ಲಿ ರಾಜ್ಯಗಳು ಸ್ಥಾನೀಯ ಮೀಸಲಾತಿ ಕಲ್ಪಿಸುವುದು ಸಂವಿಧಾನ ಬಾಹಿರ ಎಂದು ಹೇಳಿದೆ.

ನ್ಯಾಯಮೂರ್ತಿಗಳಾದ ಹೃಷಿಕೇಶ್ ರಾಯ್, ಸುಧಾಂಶು ಧುಲಿಯ ಹಾಗೂ ಎಸ್.ವಿ.ಎನ್. ಭಟ್ಟಿ ಅವರನ್ನು ಒಳಗೊಂಡ ಪೀಠ ಈ ತೀರ್ಪು ನೀಡಿದೆ.

ರಾಜ್ಯಗಳು ಈ ರೀತಿಯ ಮೀಸಲಾತಿ ಕಲ್ಪಿಸಲು ಅವಕಾಶ ನೀಡಿದರೆ ಅದು ಹಲವು ವಿದ್ಯಾರ್ಥಿಗಳ ಮೂಲಭೂತ ಹಕ್ಕುಗಳ ಉಲ್ಲಂಘನೆಯಾಗುತ್ತದೆ ಎಂದು ನ್ಯಾಯಾಲಯ ಹೇಳಿದೆ.

ನಾವೆಲ್ಲರೂ ಭಾರತ ಎಂಬ ಪ್ರಾಂತ್ಯದ ನಿವಾಸಿಗಳಾಗಿದ್ದೇವೆ. ನಾವೆಲ್ಲರೂ ಭಾರತದ ವಾಸಿಗಳು. ಇದು ನಾಗರಿಕರನ್ನು ಒಗ್ಗೂಡಿಸುವ ಸೂತ್ರವಾಗಿದೆ. ದೇಶದಲ್ಲಿ ಎಲ್ಲಿ ಬೇಕಾದರೂ ನೆಲೆಸುವ ಹಕ್ಕು ಇರುವ ಹಾಗೆಯೇ ದೇಶಾದ್ಯಂತ ಎಲ್ಲೇ ಆದರೂ ವ್ಯಾಪಾರ ಮತ್ತು ವಹಿವಾಟು ಇಲ್ಲವೇ ವೃತ್ತಿಯನ್ನು ನಿರ್ವಹಿಸುವ ಅಧಿಕಾರ ಇದೆ ಎಂದು ಪೀಠ ಹೇಳಿದೆ. ಎಂಬಿಬಿಎಸ್ ಕೋರ್ಸ್‌ಗಳಲ್ಲಿ ಮಾತ್ರ ನಿರ್ದಿಷ್ಟ ರಾಜ್ಯಗಳಲ್ಲಿ ಇರುವವರಿಗೆ ಸ್ವಲ್ಪ ಮಟ್ಟಿಗೆ ಮೀಸಲಾತಿ ಕಲ್ಪಿಸಲು ಅವಕಾಶ ಇದೆ. ಆದರೆ ಸ್ನಾತಕೋತ್ತರ ಹಂತದಲ್ಲಿ ಅರ್ಹತೆಯ ಆಧಾರದ ಮೇಲೆ ಪ್ರವೇಶ ನೀಡಬೇಕಿದೆ ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ.

ಚಂಡೀಘಡದ ಸರ್ಕಾರಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ಪಿಜಿ ಕೋರ್ಸ್‌ಗೆ ಪ್ರವೇಶ ನೀಡುವುದಕ್ಕೆ ಸಂಬಂಧಿಸಿದಂತೆ ನ್ಯಾಯಾಲಯ ಈ ತೀರ್ಪು ನೀಡಿದೆ.

# ದಾವಣಗೆರೆ ಅರ್ಬನ್ ಬ್ಯಾಂಕಿಗೆ 2ನೇ ಬಾರಿಗೆ ಅತ್ಯುನ್ನತ ರಾಷ್ಟ್ರೀಯ ಸಹಕಾರಿ ಬ್ಯಾಂಕ್ ಪ್ರಶಸ್ತಿ



ದಾವಣಗೆರೆ, ಜ. 29- ಭಾರತದ ಸಹಕಾರ ಬ್ಯಾಂಕ್‌ಗಳಲ್ಲೇ ಅತ್ಯುನ್ನತ ಸಹಕಾರಿ ಬ್ಯಾಂಕ್‌ಗಳಲ್ಲೊಂದು ಎಂಬ ರಾಷ್ಟ್ರೀಯ ಪ್ರಶಸ್ತಿಗೆ, ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಸತತ 2ನೇ ಬಾರಿಗೆ ಭಾಜನವಾಗಿದೆ.

ಏವೀಸ್ ಪಬ್ಲಿಕೇಷನ್ (ಕೊಲ್ಲಾಪುರ) ಸಂಸ್ಥೆಯು ಪ್ರತಿ ವರ್ಷ ಭಾರತ ದೇಶದಲ್ಲಿನ ಸಹಕಾರ ಬ್ಯಾಂಕುಗಳನ್ನು ಮೂರು ವರ್ಗಗಳಲ್ಲಿ ವಿಂಗಡಿಸಿ, ಪ್ರತಿ ವರ್ಗದಲ್ಲಿ ಅತ್ಯುನ್ನತ ಸಹಕಾರಿ ಬ್ಯಾಂಕ್ ಎಂದು ಗುರುತಿಸಿ ನೀಡುವ ಪ್ರಶಸ್ತಿಗೆ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಆಯ್ಕೆಯಾಗಿದೆ.

ಏವೀಸ್ ಪಬ್ಲಿಕೇಷನ್ ಸಂಸ್ಥೆಯು ವಿಂಗಡಿಸಿರುವ ಮೂರು ವರ್ಗಗಳ ಪೈಕಿ 500 ರಿಂದ 550 ಕೋಟಿ ರೂ. ಠೇವಣಿ ಹೊಂದಿರುವ ವಿಭಾಗಕ್ಕೆ ದಾವಣಗೆರೆ ಅರ್ಬನ್ ಬ್ಯಾಂಕ್‌ಗೆ ಪ್ರಶಸ್ತಿ ನೀಡಿದೆ.

ಈ ಬ್ಯಾಂಕ್ 2023-24ನೇ ಸಾಲಿನಲ್ಲಿ 546 ಕೋಟಿ ರೂ. ಠೇವಣಿ ಹೊಂದಿತ್ತು. ಈ ಹಿನ್ನೆಲೆಯಲ್ಲಿ ಮಹಾರಾಷ್ಟ್ರ ರಾಜ್ಯದ ಪೂನಾ ಸಮೀಪದ ಲೋನಾವಾಲದಲ್ಲಿ ಏವೀಸ್ ಪಬ್ಲಿಕೇಷನ್ ಇಂದು ಏರ್ಪಡಿಸಿದ್ದ ರಾಷ್ಟ್ರೀಯ ಸಹಕಾರ ಸಮ್ಮೇಳನ - 2024 ರಲ್ಲಿ ಅತ್ಯುನ್ನತ ಸಾಧನೆಗೈದ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿಗೆ ಬ್ಯಾಂಕೋ ಬ್ಲೂ ರಿಬ್ಬನ್ 2024 ಪ್ರಶಸ್ತಿ ನೀಡಿ ಗೌರವಿಸಿದೆ.

ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಉಪಾಧ್ಯಕ್ಷ ಟಿ.ಎಸ್. ಜಯರುದ್ರೇಶ್, ನಿರ್ದೇಶಕರುಗಳಾದ ಅಜ್ಜಂಪುರ ಶೆಟ್ರು ವಿಜಯಕುಮಾರ್, ಕಂಚಿಕೆರೆ ಮಹೇಶ್, ಮಲ್ಲಿಕಾರ್ಜುನ ಕಣವಿ ಅವರುಗಳು ಈ ಸಮಾರಂಭದಲ್ಲಿ ಪಾಲ್ಗೊಂಡು, ಬ್ಯಾಂಕಿನ ಪರವಾಗಿ ಅತಿಥಿ ಗಣ್ಯರಿಂದ ಪ್ರಶಸ್ತಿ ಸ್ವೀಕರಿಸಿದರು.

**ಸಂತಸ :** ಈ ಬ್ಯಾಂಕ್ 2022-23ನೇ ಸಾಲಿನಲ್ಲೂ ಇದೇ ರಾಷ್ಟ್ರೀಯ ಪ್ರಶಸ್ತಿಯನ್ನು ಮೊದಲ ಬಾರಿಗೆ ಪಡೆದಿದ್ದನ್ನು (5ನೇ ಪುಟಕ್ಕೆ)

# ಮೈಕ್ರೋ ಫೈನಾನ್ಸ್ ಹಾವಳಿ ತಡೆಗೆ ಡಿಸಿಗೆ ಹೆಚ್ಚಿನ ಅಧಿಕಾರ

ಬೆಂಗಳೂರು,ಜ.29- ಮೈಕ್ರೋ ಫೈನಾನ್ಸ್ ಕಂಪನಿಗಳಿಂದ ಸಾಲ ಪಡೆಯುವವರ ಹಿತಾಸಕ್ತಿ ರಕ್ಷಣೆಗೆ ಸುಗ್ರೀವಾಜ್ಞೆಯನ್ನು ಸಚಿವ ಸಂಪುಟ ಸಭೆಯಲ್ಲಿ ಮಂಡಿಸಿ, ಶೀಘ್ರದಲ್ಲೇ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅಂಗೀಕಾರಕ್ಕೆ ಕಳುಹಿಸಲಾಗುವುದು ಎಂದು ಗೃಹ ಸಚಿವ ಡಾ.ಜಿ. ಪರಮೇಶ್ವರ್ ಇಂದಿಲ್ಲಿ ತಿಳಿಸಿದ್ದಾರೆ.

ನಾಳೆ ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಕರಡು ಸುಗ್ರೀವಾಜ್ಞೆಗೆ ಅನುಮೋದನೆ ಪಡೆಯಲಾಗುವುದು ಎಂದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾನೂನು ಸಚಿವ ಎಚ್.ಕೆ.ಪಾಟೀಲ್, ಕಂದಾಯ ಸಚಿವ ಕೃಷ್ಣ ಭೈರೇಗೌಡ ಅವರೊಂದಿಗೆ ಸಭೆಯಲ್ಲಿ ಕರಡು ಸುಗ್ರೀವಾಜ್ಞೆ ಕುರಿತು ಚರ್ಚಿಸಿ ಅಂತಿಮಗೊಳಿಸಲಾಗುವುದು ಎಂದರು.

ಮೈಕ್ರೋ ಫೈನಾನ್ಸ್ ಕಂಪನಿಗಳ ಹಾವಳಿ ತಡೆಗೆ ಎಲ್ಲಾ ಜಿಲ್ಲಾಧಿಕಾರಿಗಳು ಮತ್ತು ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ, ಸಾಲ ವಸೂಲಿಯಿಂದ ಕಿರುಕುಳಕ್ಕೆ ಒಳಗಾದವರಿಗಾಗಿ ಸಹಾಯವಾಣಿ ಸಂಖ್ಯೆ (5ನೇ ಪುಟಕ್ಕೆ)

# 3027 ಕೋಟಿ ರೂ. ವಿಕೋಪ ನೆರವು

ನವದೆಹಲಿ, ಜ. 29 - ಕೇಂದ್ರ ಗೃಹ ಸಚಿವ ಅಮಿತ್ ಶಾ ನೇತೃತ್ವದ ಉನ್ನತ ಹಂತದ ಸಮಿತಿಯು ಹಲವು ರಾಜ್ಯಗಳ ವಿಕೋಪ ನಿರ್ವಹಣೆಗಾಗಿ 3027.86 ಕೋಟಿ ರೂ. ಬಿಡುಗಡೆ ಮಾಡಲು ಒಪ್ಪಿಗೆ ನೀಡಿದೆ. ಕರ್ನಾಟಕ ಸೇರಿದಂತೆ 12 ರಾಜ್ಯಗಳಿಗೆ ಈ ನೆರವು ಬಿಡುಗಡೆ ಮಾಡಲಾಗಿದೆ. ಕಾಡ್ಗಿಚ್ಚು ನಿರ್ವಹಣೆ ಸಲುವಾಗಿ ಕರ್ನಾಟಕ ಸೇರಿದಂತೆ 19 ರಾಜ್ಯಗಳಿಗೆ 818.92 ಕೋಟಿ ರೂ ಬಿಡುಗಡೆ ಮಾಡಲು ಸಮಿತಿ ಒಪ್ಪಿಗೆ ನೀಡಿದೆ.

# ದಾಖಲೆಗಳಿಲ್ಲದ ನಿವೇಶನಕ್ಕೆ 'ಬಿ' ಖಾತಾ

## ದಾವಣಗೆರೆ ಸೇರಿ ಕೆಲ ಪಾಲಿಕೆ ವ್ಯಾಪ್ತಿಯಲ್ಲಿ 'ಬಿ' ಖಾತಾ ನೀಡುವಂತೆ ಆದೇಶ

ಬೆಂಗಳೂರು,ಜ.29- ಬೆಂಗಳೂರು ಮಹಾ ನಗರ ಪಾಲಿಕೆ ಹೊರತುಪಡಿಸಿ ರಾಜ್ಯದ ಉಳಿದ ನಗರಪಾಲಿಕೆ ಹಾಗೂ ಸ್ಥಳೀಯ ಸಂಸ್ಥೆಗಳ ಪ್ರದೇಶ ವ್ಯಾಪ್ತಿಯಲ್ಲಿ ಯಾವುದೇ ದಾಖಲೆಗಳಿಲ್ಲದ ನಿವೇಶನಗಳಿಗೆ 'ಬಿ' ಖಾತಾ ನೀಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಆದೇಶ ಮಾಡಿದ್ದಾರೆ.

**ಎಲ್ಲ ಅಕ್ರಮ ನಿವೇಶನಗಳನ್ನು ಸಕ್ರಮಗೊಳಿಸಿ, ಇನ್ನು ಮುಂದೆ ರಾಜ್ಯದಲ್ಲಿ ಅನಧಿಕೃತ ಬಡಾವಣೆಗಳು ತಲೆ ಎತ್ತದಂತೆ ನೋಡಿಕೊಳ್ಳಲು ಸಿಎಂ ಸೂಚನೆ**

ಒಂದು ಬಾರಿಗೆ ಅನ್ವಯವಾಗುವಂತೆ ಈ ಆದೇಶ ಹೊರಡಿಸಿ, ಎಲ್ಲ ಅಕ್ರಮ ನಿವೇಶನಗಳನ್ನು ಸಕ್ರಮಗೊಳಿಸಿ ಇನ್ನು ಮುಂದೆ ರಾಜ್ಯದ ಯಾವುದೇ ಭಾಗದಲ್ಲಿ ಅನಧಿಕೃತ ಬಡಾವಣೆ ತಲೆ ಎತ್ತದಂತೆ ನೋಡಿಕೊಳ್ಳಿ ಎಂದು ಮುಖ್ಯಕಾರ್ಯದರ್ಶಿ ಹಾಗೂ ಕಂದಾಯ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಗೃಹ ಕಚೇರಿ ಕೃಷ್ಣಾದಲ್ಲಿ ಕಂದಾಯ ಇಲಾಖೆ ಪ್ರಗತಿ ಪರಿಶೀಲನೆ ಸಭೆಯಲ್ಲೇ ಈ ಆದೇಶ ಮಾಡಿದ ಮುಖ್ಯಮಂತ್ರಿ ಅವರು, ಬರುವ ಏಪ್ರಿಲ್ ಅಂತ್ಯದ ವೇಳೆಗೆ ಎಲ್ಲಾ ಅನಧಿಕೃತ ನಿವೇಶನಗಳಿಗೂ ದಾಖಲೆ ನೀಡಿ ಎಂದಿದ್ದಾರೆ. ಬೆಂಗಳೂರು ನಗರ ಹೊರತುಪಡಿಸಿ ಮೈಸೂರು, ಶಿವಮೊಗ್ಗ, ದಾವಣಗೆರೆ, ಮಂಗಳೂರು, ಹುಬ್ಬಳ್ಳಿ-ಧಾರವಾಡ ಸೇರಿದಂತೆ ರಾಜ್ಯದ ಎಲ್ಲಾ ನಗರಪಾಲಿಕೆಗಳು ಹಾಗೂ ನಗರಸಭೆ ವ್ಯಾಪ್ತಿಯಲ್ಲಿನ ನಿವೇಶನಗಳಿಗೆ 'ಬಿ' ಖಾತಾ ನೀಡಿ.

ಮೂರು ತಿಂಗಳ ಅವಧಿಯೊಳಗೆ ಸ್ಥಳೀಯ ಸಂಸ್ಥೆಗಳ ಆಸ್ತಿಗಳಿಗೆ ದಾಖಲೆ ನೀಡಿದ ನಂತರ ಪಂಚಾಯತ್ ವ್ಯಾಪ್ತಿಯಲ್ಲಿನ ನಿವೇಶನಗಳಿಗೂ ದಾಖಲೆ ನೀಡಿ ಎಂದು ಆದೇಶಿಸಿದರು.

ಬೆಂಗಳೂರು ಹೊರತುಪಡಿಸಿ ಉಳಿದ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ 55 ಲಕ್ಷ ನಿವೇಶನಗಳಿದ್ದು, ಇವುಗಳಲ್ಲಿ 22 ಲಕ್ಷ ನಿವೇಶನಗಳಿಗೆ 'ಇ' (2ನೇ ಪುಟಕ್ಕೆ)

# 2 ಸಾವಿರ ಕೋಟಿ ರೂ. ಸೈಬರ್ ವಂಚನೆಯಲ್ಲಿ ತೊಡಗಿದ್ದ ತಂಡ ಬಯಲು

**ಕರ್ನಾಟಕದಲ್ಲಿ ವಂಚಿಸಿದವ ರಾಜಸ್ಥಾನದಲ್ಲಿ ವಶಕ್ಕೆ**

ಜೈಪುರ, ಜ. 29 - 2000 ಕೋಟಿ ರೂ.ಗಳ ಸೈಬರ್ ವಂಚನೆ ಮಾಡಿದ ಆರೋಪದ ಮೇಲೆ ವ್ಯಕ್ತಿಯೊಬ್ಬನನ್ನು ರಾಜಸ್ಥಾನದ ಶ್ರೀಗಂಗಾ ನಗರದಲ್ಲಿ ಬಂಧಿಸಲಾಗಿದೆ.

ಸೈಬರ್ ವಂಚನೆ ನಡೆಸುತ್ತಿದ್ದ ತಂಡದ ವಿರುದ್ಧ ಹಲವು ದೂರುಗಳು ದಾಖಲಾಗಿದ್ದವು. ಈ ತಂಡ ದೇಶಾದ್ಯಂತ ವಿಶೇಷವಾಗಿ ಕರ್ನಾಟಕದಲ್ಲಿ ಪ್ರಮುಖವಾಗಿ ಕಾರ್ಯ ನಿರ್ವಹಿಸುತ್ತಿತ್ತು ಎಂದು ಪೊಲೀಸರು ಹೇಳಿದ್ದಾರೆ.

ಕರ್ನಾಟಕದ ನಿವಾಸಿ ಕಾಂತಪ್ಪ ಬಾಬು ಚವಾಣ್ ಎಂಬುವವರು ಇಲ್ಲಿನ ಪುರಾನಿ ಆಬಾದಿ ಠಾಣೆಯಲ್ಲಿ ಅಜಯ್ ಆರ್ಯ ಹಾಗೂ ಆತನ ಸಹಚರರ ವಿರುದ್ಧ ದೂರು ದಾಖಲಿಸಿದ್ದರು ಎಂದು ಗಂಗಾನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಗೌರವ ಯಾದವ್ ತಿಳಿಸಿದ್ದಾರೆ.

ಅಜಯ್ ಆರ್ಯ ತಂಡದವರು ಕರ್ನಾಟಕದಲ್ಲಿನ ಕ್ಯಾಂಪ್‌ಮೋರ್ ಎಫ್‌ಎಕ್ಸ್ ಕಂಪನಿಯಲ್ಲಿ ಸಾವಿರಾರು ಜನರಿಂದ ಲಕ್ಷಾಂತರ (2ನೇ ಪುಟಕ್ಕೆ)

# ಕೌಶಲ್ಯ, ನಾಗರಿಕ ಸೇವಾ ತರಬೇತಿಗೆ ಒತ್ತು

## ರಾಷ್ಟ್ರೀಯ ರಸ್ತೆ ಸುರಕ್ಷತಾ ಮಾಸಾಚರಣೆ ಕಾರ್ಯಕ್ರಮದಲ್ಲಿ ಸಂಸದೆ ಡಾ.ಪ್ರಭಾ



ದಾವಣಗೆರೆ, ಜ. 29 - ಕರ್ನಾಟಕದ ಮಧ್ಯಭಾಗದಲ್ಲಿರುವ ದಾವಣಗೆರೆಯಲ್ಲಿ ಮಕ್ಕಳ ಕೌಶಲ್ಯಾಭಿವೃದ್ಧಿ ಹಾಗೂ ನಾಗರಿಕ ಸೇವೆ (ಸಿವಿಲ್ ಸರ್ವೀಸ್) ತರಬೇತಿಗೆ ಆದ್ಯತೆ ನೀಡುವುದಾಗಿ ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಹೇಳಿದ್ದಾರೆ.

ಜಿಲ್ಲಾಡಳಿತ, ಪೊಲೀಸ್ ಇಲಾಖೆ, ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ವಾಹನ ಚಾಲನಾ ತರಬೇತಿ ಶಾಲೆ ಮಾಲೀಕರ ಸಂಘದ ಸಂಯುಕ್ತಾಶ್ರಯದಲ್ಲಿ ನಗರದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಬುಧವಾರ ಆಯೋಜಿಸಲಾಗಿದ್ದ ರಾಷ್ಟ್ರೀಯ ರಸ್ತೆ ಸುರಕ್ಷತಾ ಮಾಸಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕೇಂದ್ರ ಸರ್ಕಾರದಿಂದ ಸ್ಥಾಪಿಸಲಾಗುವ ಕೌಶಲ್ಯ ಅಭಿವೃದ್ಧಿ ತರಬೇತಿ ಕೇಂದ್ರವನ್ನು ದಾವಣಗೆರೆಯಲ್ಲಿ ಸ್ಥಾಪಿಸುವ ಚಿಂತನೆ ಇದೆ. ಪ್ರಸ್ತುತ ಬೆಂಗಳೂರಿನಲ್ಲಿ ಬಿಟ್ಟರೆ ರಾಜ್ಯದ ಯಾವ ಜಿಲ್ಲೆಯಲ್ಲೂ ಕೇಂದ್ರ ಕೌಶಲ್ಯ ತರಬೇತಿ ಕೇಂದ್ರವಿಲ್ಲ. ಮಧ್ಯ ಕರ್ನಾಟಕವಾದ ದಾವಣಗೆರೆಯಲ್ಲಿ ಈ ಕೇಂದ್ರ ಸ್ಥಾಪಿಸಿದರೆ ಹೆಚ್ಚು ಅನುಕೂಲವಾಗುತ್ತದೆ. ಈ ಹಿನ್ನೆಲೆಯಲ್ಲಿ ಇದಕ್ಕೆ ಬೇಕಾದ ಜಾಗ ಹಾಗೂ ಮೂಲ ಸೌಕರ್ಯಗಳನ್ನು ಒದಗಿಸುವುದಾಗಿ ಕೇಂದ್ರ ಸಚಿವರಿಗೆ ಹೇಳಿದ್ದೇವೆ. ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದು ತಿಳಿಸಿದರು.

ನಾಗರಿಕ ಸೇವೆ (ಸಿವಿಲ್ ಸರ್ವೀಸ್) ಗೆ ಹೆಚ್ಚಿನ ಆದ್ಯತೆ ನೀಡುವ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿಯೇ ಪ್ರವೇಶ ಪರೀಕ್ಷೆ ನಡೆಸಿ, 300 ಆಸಕ್ತ (4ನೇ ಪುಟಕ್ಕೆ)

ಎರಡನೇ ವರ್ಷದ ಪುಣ್ಯಸ್ಮರಣೆ



ದಿ|| ಶ್ರೀ ಎಸ್.ಎಸ್. ಜಯಣ್ಣನವರು

ಜನನ : 12.02.1945 ಲಿಂಗೈಕ್ಯ : 30.01.2023

ನೀವು ನಮ್ಮನ್ನಗಲಿ ಎರಡು ವರ್ಷಗಳಾದವು
ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲೇ ಮುನ್ನಡೆಯುತ್ತಾ
ಸದಾ ನಿಮ್ಮ ಸ್ಮರಣೆಯಲ್ಲಿರುವ...

ಮಕ್ಕಳು, ಸೊಸೆಯಂದಿರು
ಅಳಿಯಂದಿರು ಹಾಗೂ ಮೊಮ್ಮಕ್ಕಳು

# ಕುಂಭಮೇಳದಲ್ಲಿ ಕಾಲ್ತುಳಿತ, ಪವಿತ್ರ ಸ್ನಾನಕ್ಕೆ ತೆರಳಿದ್ದ 30 ಸಾವು

**(1ನೇ ಪುಟದಿಂದ)** ಸ್ಥಳದಲ್ಲಿರುವ ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಬೆಳಗಿನ ಜಾವ 1ರಿಂದ 2 ಗಂಟೆಯ ನಡುವೆ ಅಖಾಡಗಳು ಈ ಮಾರ್ಗದಲ್ಲಿ ಅಮೃತ ಸ್ನಾನಕ್ಕೆ ತೆರಳಲು ವ್ಯವಸ್ಥೆ ಮಾಡಲಾಗಿತ್ತು. ಕೆಲ ಭಕ್ತರು ತಡೆಗಳನ್ನು ದಾಟಿ ಮುನ್ನುಗ್ಗಿದರು. ಆಗ ಹಲವರಿಗೆ ತೀವ್ರ ಗಾಯಗಳಾದವು. ತಕ್ಷಣವೇ ಅವರನ್ನು ಆಸ್ಪತ್ರೆಗೆ ದಾಖಲಿಸಲಾಯಿತು ಎಂದು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ತಿಳಿಸಿದ್ದಾರೆ.

ಕಾಲ್ತುಳಿತ ಘಟನೆಯ ಹಿನ್ನೆಲೆಯಲ್ಲಿ ಅಖಾಡಗಳು ಪವಿತ್ರ ಸ್ನಾನದ ಸಮಯವನ್ನು ಮುಂದೂಡಿದವು. ಮಧ್ಯಾಹ್ನದ ನಂತರ ಪವಿತ್ರ ಸ್ನಾನ ಕೈಗೊಳ್ಳಲು ಎಲ್ಲಾ ಅಖಾಡಗಳು ಸರ್ವಸಮ್ಮತಿಯಿಂದ ನಿರ್ಧರಿಸಿದರು ಎಂದು ಮುಖ್ಯಮಂತ್ರಿ ಹೇಳಿದ್ದಾರೆ.

ನಾವು ಕರ್ನಾಟಕದಿಂದ 60 ಜನ ಎರಡು ಬಸ್‌ಗಳಲ್ಲಿ ಬಂದಿದ್ದೆವು. ಒಂಬತ್ತು ಜನರು ಪವಿತ್ರ ಸ್ನಾನಕ್ಕೆ ಬಂದಿದ್ದೆವು. ಆಗ ಗುಂಪು ನೂಕಾಟ ನಡೆಸಿತು. ನಾವು ಗುಂಪಿನಲ್ಲಿ ಸಿಕ್ಕಿ ಕೆಳಗೆ ಬಿದ್ದೆವು. ತಪ್ಪಿಸಿಕೊಳ್ಳಲು ಯಾವುದೇ ದಾರಿ ಇರಲಿಲ್ಲ ಎಂದು ಸರೋಜಿನಿ ಎಂಬ ಮಹಿಳೆ ತಿಳಿಸಿದ್ದಾರೆ.

ಮಧ್ಯಾಹ್ನ 2.30ರ ನಂತರ ಅಖಾಡಗಳ ಮೆರವಣಿಗೆ ಪುನರಾರಂಭಿಸಲಾಯಿತು. ಅಖಾಡಗಳು ಸಂಗಮದ ಕಡೆ ತೆರಳುವಾಗ ಹೆಲಿಕಾಪ್ಟರ್ ಮೂಲಕ ಪುಷ್ಪವೃಷ್ಟಿ ಮಾಡಲಾಯಿತು.

ಕಾಲ್ತುಳಿತಕ್ಕೆ ಸಿಲುಕಿ ಬೆಳಗಾವಿ ನಗರದ ನಾಲ್ವರು ಸಾವನ್ನಪ್ಪಿರುವ ಮಾಹಿತಿ ದೊರೆತಿದೆ ಎಂದು ಕರ್ನಾಟಕದ ಕಾಂಗ್ರೆಸ್ ಶಾಸಕ ಆಸಿಫ್ ಸೇಟ್ ಹೇಳಿದ್ದಾರೆ.

ಸಂಪ್ರದಾಯದ ಪ್ರಕಾರ ಸನ್ಯಾಸಿ, ಭೈರಾಗಿ ಹಾಗೂ ಉದಾಸೀನ ಎಂಬ ಮೂರು ಪಂಥಗಳ ಅಖಾಡಗಳು ಭವ್ಯ ಮೆರವಣಿಗೆಯಲ್ಲಿ ಬಂದು ಸಂಗಮ ಘಾಟ್‌ನಲ್ಲಿ ಸ್ನಾನ ಮಾಡಬೇಕಿತ್ತು. ತ್ರಿವೇಣಿ ಸಂಗಮವು ಹಿಂದೂಗಳ ಅತ್ಯಂತ ಪವಿತ್ರ ಸ್ಥಳ ಎಂದು ಭಾವಿಸಲಾಗಿದೆ. ಮೌನಿ ಅಮಾವಾಸ್ಯೆಯ ದಿನದಂದು ತ್ರಿವೇಣಿ ಸಂಗಮದಲ್ಲಿ ಸ್ನಾನ ಮಾಡುವುದರಿಂದ ಜನರ ಪಾಪಗಳು ತೊಳೆದು ಮೋಕ್ಷ ದೊರೆಯುತ್ತದೆ ಎಂಬ ನಂಬಿಕೆ ಇದೆ.

ಕೋಟ್ಯಾಂತರ ಜನರು ಮೌನಿ ಅಮಾವಾಸ್ಯೆಯಂದು ಬರಲಿರುವ ಹಿನ್ನೆಲೆಯಲ್ಲಿ ಜನರು ಶಿಸ್ತು ಕಾಯ್ದುಕೊಳ್ಳುವಂತೆ ಕುಂಭಮೇಳದ ಅಧಿಕಾರಿಗಳು ಮಂಗಳವಾರ ಸಲಹೆ ನೀಡಿದ್ದರು.

ಯಾತ್ರಿಗಳು ಸಂಗಮ ಘಾಟ್‌ಗೆ ತೆರಳಲು ಸರದಿಯಲ್ಲಿ ಬರಬೇಕು. ಸುಗಮ ಸಂಚಾರಕ್ಕೆ ಅಗತ್ಯ ನಿಯಮಗಳನ್ನು ಪಾಲಿಸಬೇಕು ಎಂದು ತಿಳಿಸಲಾಗಿತ್ತು.

ಇಲ್ಲಿನ ಎಲ್ಲಾ ಘಾಟ್‌ಗಳು ಏಕರೂಪವಾಗಿ ಪವಿತ್ರವಾಗಿವೆ. ಹೀಗಾಗಿ ನೂಕುನುಗ್ಗಲು ತಪ್ಪಿಸಿ ಘಾಟ್‌ಗಳಲ್ಲಿ ಸ್ನಾನ ಮಾಡುವಂತೆಯೂ ಜನರಿಗೆ ತಿಳಿಸಲಾಗಿತ್ತು.

## ಇತ್ತೀಚೆಗೆ ನಡೆದ ಕಾಲ್ತುಳಿತ ಅವಘಡಗಳು

**ಜನವರಿ 2025 : ದೇಶದ ಅತ್ಯಂತ ಶ್ರೀಮಂತ ಹಾಗೂ ಹೆಚ್ಚು ಭಕ್ತರು ಭೇಟಿ ನೀಡುವ ಆಂಧ್ರಪ್ರದೇಶದ ತಿರುಪತಿ ತಿಮ್ಮಪ್ಪನ ದೇವಾಲಯದಲ್ಲಿ ನೂಕುನುಗ್ಗಲು ಸಂಭವಿಸಿ ಆರು ಜನ ಸಾವನ್ನಪ್ಪಿದ್ದರು ಹಾಗೂ 35 ಜನ ಗಾಯಗೊಂಡಿದ್ದರು.**

**ಜುಲೈ 2024 : ಉತ್ತರ ಪ್ರದೇಶದ ಹತ್ರಾಸ್ ಜಿಲ್ಲೆಯಲ್ಲಿ ಪ್ರವಚನ ಕೇಳಲು ಸಾವಿರಾರು ಜನರು ನೆರೆದಿದ್ದಾಗ ನೂಕುನುಗ್ಗಲು ಸಂಭವಿಸಿ 121 ಜನ ಮೃತಪಟ್ಟಿದ್ದರು.**

**ಜನವರಿ 2022 : ಜಮ್ಮು ಮತ್ತು ಕಾಶ್ಮೀರದ ವೈಷ್ಣೋದೇವಿ ದೇವಾಲಯದಲ್ಲಿ ದೊಡ್ಡ ಸಂಖ್ಯೆಯಲ್ಲಿ ಭಕ್ತರು ದೇವಾಲಯ ಪ್ರವೇಶಿಸಲು ಧಾವಂತ ನಡೆಸಿದಾಗ ಕನಿಷ್ಠ 12 ಜನ ಸಾವನ್ನಪ್ಪಿದ್ದರು.**

**ನವೆಂಬರ್ 2013 : ಮಧ್ಯಪ್ರದೇಶದ ರತನ್‌ಘುಡ್ ದೇವಾಲಯದಲ್ಲಿ ನವರಾತ್ರಿ ಸಂದರ್ಭದಲ್ಲಿ 1.50 ಲಕ್ಷ ಜನ ಸೇರಿದಾಗ ಸಂಭವಿಸಿದ ಕಾಲ್ತುಳಿತದಲ್ಲಿ 115 ಜನ ಸಾವನ್ನಪ್ಪಿದ್ದರು.**

**ಫೆಬ್ರವರಿ 2013 : ಉತ್ತರ ಪ್ರದೇಶದ ಕುಂಭಮೇಳದಲ್ಲಿ ಸಂಭವಿಸಿದ ಕಾಲ್ತುಳಿತದಲ್ಲಿ ಕನಿಷ್ಠ 36 ಭಕ್ತರು ಸಾವನ್ನಪ್ಪಿದ್ದರು. ಮೃತರಲ್ಲಿ 27 ಮಹಿಳೆಯರು ಸೇರಿದ್ದರು.**

**ಮಾರ್ಚ್ 2010 : ಉತ್ತರ ಪ್ರದೇಶದ ಹಿಂದೂ ದೇವಾಲಯದಲ್ಲಿ ವಿತರಿಸಲಾಗುತ್ತಿದ್ದ ಉಚಿತ ಆಹಾರ ಮತ್ತು ಬಟ್ಟೆ ಪಡೆಯಲು ಜನ ದೊಡ್ಡ ಸಂಖ್ಯೆಯಲ್ಲಿ ಧಾವಿಸಿದಾಗ ಕನಿಷ್ಠ 63 ಜನ ಸಾವನ್ನಪ್ಪಿದ್ದರು. ಇವರಲ್ಲಿ ಅರ್ಧದಷ್ಟು ಮಕ್ಕಳಿದ್ದರು.**

**ಸೆಪ್ಟೆಂಬರ್ 2008 : ರಾಜಸ್ಥಾನದ ಚಾಮುಂಡಗರ್ ಎಂಬಲ್ಲಿ ನವರಾತ್ರಿ ಉತ್ಸವದ ವೇಳೆ ಉಂಟಾದ ಕಾಲ್ತುಳಿತದಲ್ಲಿ 250 ಜನ ಸಾವನ್ನಪ್ಪಿದ್ದರು.**

**ಆಗಸ್ಟ್ 2008 : ಹಿಮಾಚಲ ಪ್ರದೇಶದ ಬೆಟ್ಟದ ಮೇಲಿರುವ ನೈನಾದೇವಿ ದೇವಾಲಯದಲ್ಲಿ ಭೂಕುಸಿತದ ಗಾಳಿ ಸುದ್ದಿ ಕಾರಣದಿಂದ ಕಾಲ್ತುಳಿತ ಉಂಟಾಗಿ 145 ಯಾತ್ರಿಗಳು ಸಾವನ್ನಪ್ಪಿದ್ದರು.**

**ಜನವರಿ 2005 : ಮಹಾರಾಷ್ಟ್ರದ ವಾಲ್ ನಗರದಲ್ಲಿರುವ ಮಧುರಾದೇವಿ ದೇವಾಲಯದಲ್ಲಿ ಕಾಲ್ತುಳಿತ ಉಂಟಾಗಿ 265 ಜನ ಸಾವನ್ನಪ್ಪಿದ್ದರು.**

## ತಾಯಿ-ಮಗಳು ಸೇರಿ ಬೆಳಗಾವಿಯ ನಾಲ್ವರ ಸಾವು

**(1ನೇ ಪುಟದಿಂದ)** ಮಗಳು ಸೇರಿದಂತೆ ನಾಲ್ವರು ಮೃತಪಟ್ಟಿದ್ದಾರೆ. ಬೆಳಗಾವಿಯ ವಡಗಾವಿ ನಿವಾಸಿ ಜ್ಯೋತಿ ಹತ್ತರವಾಠ (50) ಮತ್ತು ಅವರ ಮಗಳು ಮೇಘಾ (18) ಹತ್ತರವಾಠ ಕಾಲ್ತುಳಿತದಲ್ಲಿ ಸಾವನ್ನಪ್ಪಿದ್ದಾರೆ ಎಂದು ಅವರ ಸಂಬಂಧಿಯೊಬ್ಬರು ಮಾಹಿತಿ ನೀಡಿದ್ದಾರೆ.

# ನಿವೇಶನಕ್ಕೆ 'ಬಿ' ಖಾತಾ

**(1ನೇ ಪುಟದಿಂದ)** ಖಾತಾ ಪಡೆದಿದ್ದಾರೆ.

ಉಳಿದ ನಿವೇಶನಗಳಿಗೆ ಯಾವುದೇ ರೀತಿಯ ದಾಖಲೆಗಳಿಲ್ಲ, ಆದ್ದರಿಂದ ಅವುಗಳನ್ನೂ ಸಕ್ರಮಗೊಳಿಸಿ, ತೆರಿಗೆ ವ್ಯಾಪ್ತಿಗೆ ತನ್ನಿ ಎಂದಿದ್ದಾರೆ.

ಇಂತಹ ನಿವೇಶನಗಳನ್ನು ಜಿಲ್ಲಾಡಳಿತವೇ ಗುರುತಿಸಿ ದಾಖಲೆ ನೀಡಬೇಕು, ಏಪ್ರಿಲ್ ನಂತರ ಯಾವೊಂದು ನಿವೇಶನವೂ ಅನಧಿಕೃತವಾಗಿರ ಬಾರದು ಎಂದು ಕಟ್ಟಾದೇಶ ಮಾಡಿದ್ದಾರೆ. ಭೂ ದಾಖಲೆಗಳ ರಕ್ಷಣೆ ಹಾಗೂ ದುರುಪಯೋಗ ಆಗದಂತೆ, ದಾಖಲೆ ತಿದ್ದಲು ಅವಕಾಶ ಇಲ್ಲದಂತೆ 'ಭೂ ಸುರಕ್ಷಾ' ಯೋಜನೆ ಪರಿಣಾಮಕಾರಿಯಾಗಿ ಜಾರಿಯಾಗಬೇಕು ಎಂದು ಸೂಚಿಸಿದರು. ತಂತ್ರಾಂಶದ ಸಮರ್ಪಕ ಬಳಕೆ ಮೂಲಕ ಕಂದಾಯ ವ್ಯವಸ್ಥೆಯಲ್ಲಿ ಸುಧಾರಣಾ ಕಾರ್ಯ ಕೈಗೊಳ್ಳಲಾಗಿದೆ, ನಕ್ಷಾ ಯೋಜನೆ ಮೂಲಕ ನಗರ ಪ್ರದೇಶದಲ್ಲಿ ಡ್ರೋನ್ ಸರ್ವೆ ಮೂಲಕ ಆಸ್ತಿ ಚೀಟಿ (ಪ್ರಾಪರ್ಟಿ ಕಾರ್ಡ್) ನೀಡಲಾಗುತ್ತಿದೆ.

ರಾಜ್ಯದ 21 ಜಿಲ್ಲೆಗಳಲ್ಲಿ ಡ್ರೋನ್ ಮೂಲಕ ಸರ್ವೇ ಕಾರ್ಯ ಕೈಗೊಳ್ಳಲಾಗಿದೆ, ಉಳಿದ ಜಿಲ್ಲೆಗಳಲ್ಲೂ ಡ್ರೋನ್ ಸರ್ವೆ ಆರಂಭಿಸಬೇಕು.

ಭೂ ಸುರಕ್ಷಾ ಯೋಜನೆ ಮೂಲಕ ಭೂದಾಖಲೆಗಳ ಕಂಪ್ಯೂಟರೀಕರಣ ಕಾರ್ಯ ನಡೆದಿದ್ದು, ಇದುವರೆಗೆ ಸುಮಾರು 8 ಕೋಟಿ ಮೂಲ ದಾಖಲೆಗಳ ಕಂಪ್ಯೂಟರೀಕರಣ ಪೂರ್ಣಗೊಂಡಿದ್ದು, ರಾಜ್ಯದ ಎಲ್ಲಾ 31 ಜಿಲ್ಲೆಗಳ ಭೂ ದಾಖಲೆಗಳ ಕಂಪ್ಯೂಟರೀಕರಣ ಕಾರ್ಯ ನಡೆಯುತ್ತಿದೆ ಎಂದರು.

ಹಲವು ವರ್ಷಗಳಿಂದ ಸರ್ಕಾರಿ ಜಮೀನು ಸಾಗುವಳಿ ಮಾಡುತ್ತಿರುವ ರೈತರಿಂದ ಸದರಿ ಭೂಮಿ ಸ್ವಾಧೀನ ಸಂದರ್ಭದಲ್ಲಿ ಎಕ್ಸ್‌ಗ್ರೇಷಿಯಾ ಬಗ್ಗೆ ಸೂಕ್ತ ಪ್ರಸ್ತಾವನೆ ಸಲ್ಲಿಸಬೇಕು ಎಂದು ಸೂಚಿಸಿದರು.

## ಹರಿಹರದಲ್ಲಿ ಇಂದು ದೇವದಾಸಿ ಸಮರ್ಪಣೆ ನಿಷೇಧ ಜಾಗೃತಿ ಕಾರ್ಯಕ್ರಮ

ದೇವದಾಸಿ ಸಮರ್ಪಣೆ ನಿಷೇಧ ಕುರಿತು ಮಾಜಿ ದೇವದಾಸಿ ಮಹಿಳೆಯರಿಗೆ ಅರಿವು ಮೂಡಿಸುವ ಕಾರ್ಯಕ್ರಮವನ್ನು ಇಂದು ಬೆಳಿಗ್ಗೆ 11 ಗಂಟೆಗೆ ಹರಿಹರದ ಬಸ್ ನಿಲ್ದಾಣದ ಹತ್ತಿರವಿರುವ ಗುರುಭವನದಲ್ಲಿ ಆಯೋಜಿಸಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪನಿರ್ದೇಶಕ ರಾಜಾನಾಯ್ಕ ತಿಳಿಸಿದ್ದಾರೆ.

# ಹೊನ್ನಾಳಿಯಲ್ಲಿ ಇಂದು- ನಾಳೆ ಶಿಲಾಮಂದಿರದ ಉದ್ಘಾಟನೆ



ಹೊನ್ನಾಳಿ ಪಟ್ಟಣದ ಪೇಟೆ ಶ್ರೀ ವೀರಭದ್ರೇಶ್ವರ ಸ್ವಾಮಿ ನೂತನ ಶಿಲಾಮಂದಿರ ಉದ್ಘಾಟನೆ, ಮೂರ್ತಿ ಪ್ರಾಣ ಪ್ರತಿಷ್ಠಾಪನೆ, ಗೋಪುರಕ್ಕೆ ಕಳಸಾರೋಹಣ ಹಾಗೂ ಧರ್ಮಜಾಗೃತಿ ಸಮಾರಂಭದ ಕಾರ್ಯಕ್ರಮಗಳು ಇಂದು ಮತ್ತು ನಾಳೆ ನಡೆಯಲಿವೆ.

ಶ್ರೀ ವೀರಭದ್ರೇಶ್ವರ ಸ್ವಾಮಿಯ ಸಂಸ್ಕಾರ ಕಾರ್ಯಗಳಾದ ಜಲಾಧಿವಾಸ, ಕ್ಷೀರಾಧಿವಾಸ, ಪುಷ್ಪಾಧಿವಾಸ, ಧ್ಯಾನಾಧಿವಾಸ, ತೈಲಾಧಿವಾಸ ಹಾಗೂ ಶಯನಾಧಿವಾಸ ಕೈಂಕರ್ಯಗಳು ಜರುಗುವವು.

ಇಂದು ಬ್ರಾಹ್ಮೀ ಮಹೂರ್ತದ ಶುಭಾಂಶದಲ್ಲಿ ನೂತನ ದೇವಾಲಯದ ಗೃಹ ಪ್ರವೇಶ, ವಾಸ್ತು ಶಾಂತಿ, ಗಣಹೋಮ ಸೇರಿದಂತೆ ಇತರೆ ಪೂಜಾ ಕಾರ್ಯಕ್ರಮಗಳು ನಡೆಯಲಿವೆ. ಈ ಎಲ್ಲಾ ಕಾರ್ಯಕ್ರಮಗಳು ಹಿರೇಕಲ್ಮಠದ ಡಾ.ಒಡೆಯರ್ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳ ನೇತೃತ್ವದಲ್ಲಿ ನಡೆಯುವವು.

ನಾಳೆ ಶುಕ್ರವಾರ ಬ್ರಾಹ್ಮೀ ಮಹೂರ್ತದ ಶುಭಾಂಶದಲ್ಲಿ ತುಂಗಭದ್ರಾ ನದಿಯಿಂದ ಗಂಗಾಪೂಜೆ ನೆರವೇರಲಿದೆ. ಬೆಳಿಗ್ಗೆ 10ಕ್ಕೆ ರಂಭಾಪುರಿ ಜಗದ್ಗುರುಗಳವರು ಶ್ರೀ ನೀಲಕಂಠೇಶ್ವರ ದೇವಸ್ಥಾನದಿಂದ ಸಾರೋಟು ಉತ್ಸವದ ಮೂಲಕ ದೇವಾಲಯಕ್ಕೆ ಆಗಮಿಸಿದ ನಂತರ ಶ್ರೀ ವೀರಭದ್ರೇಶ್ವರ ಶಿಲಾಮೂರ್ತಿಗೆ ಪ್ರಾಣ ಪ್ರತಿಷ್ಠಾಪನೆ ಹಾಗೂ ಗೋಪುರಕ್ಕೆ ಕಳಸಾರೋಹಣ ನೆರವೇರಿಸುವರು.

ನಂತರ ಬೆಳಿಗ್ಗೆ 11ಕ್ಕೆ ಧರ್ಮಜಾಗೃತಿ ಸಮಾರಂಭ ರಂಭಾಪುರಿ ಜಗದ್ಗುರು ಶ್ರೀ ವೀರ ಸೋಮೇಶ್ವರ ರಾಜದೇಶೀಕೇಂದ್ರ ಶಿವಾಚಾರ್ಯ ಭಗವತ್ಪಾದರ ಸಾನ್ನಿಧ್ಯದಲ್ಲಿ ನಡೆಯುವುದು. ಹಿರೇಕಲ್ಮಠದ ಡಾ.ಒಡೆಯರ್ ಚನ್ನಮಲ್ಲಿಕಾರ್ಜುನ ಶಿವಾಚಾರ್ಯಸ್ವಾಮೀಜಿ ನೇತೃತ್ವ ವಹಿಸುವರು.

# ಶಿಕ್ಷಣ ಸಂಸ್ಥೆಗಳಿಗೆ ಸಿದ್ದಗಂಗಾ ಮಠದ ಕಾರ್ಯ ಪ್ರೇರಣೆ

## ಹರಿಹರದಲ್ಲಿ ಡಾ.ಶಿವಕುಮಾರ ಶ್ರೀಗಳ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಶಾಸಕ ಬಿ.ಪಿ.ಹರೀಶ್

ಹರಿಹರ,ಜ.29- ತ್ರಿವಿಧ ದಾಸೋಹಿ, ಕರ್ನಾಟಕ ರತ್ನ ಡಾ. ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳ ಪುಣ್ಯಸ್ಮರಣೆಯ ಆಚರಣೆ ಸಮಾಜಕ್ಕೆ ಆದರ್ಶಪ್ರಾಯವಾಗಿದೆ ಎಂದು ಶಾಸಕ ಬಿ.ಪಿ.ಹರೀಶ್ ಅಭಿಪ್ರಾಯ ವ್ಯಕ್ತಪಡಿಸಿದರು.

ನಗರದ ಹಳೇ ಪಿ.ಬಿ ರಸ್ತೆಯ ಮುರುಘ ರಾಜೇಂದ್ರ ಕಾಂಪ್ಲೆಕ್ಸ್‌ನಲ್ಲಿ ನೀಲಗುಂದ ಶೋಭಾ ಜಗದೀಶ್ ಕುಟುಂಬ, ಬಿಜೆಪಿ ವೀರಣ್ಣ ಹೋಟೆಲ್ ಮತ್ತು ಸ್ನೇಹ ಬಳಗದಿಂದ ಆಯೋಜಿಸಿದ್ದ ಶ್ರೀ ಶಿವಕುಮಾರ ಸ್ವಾಮೀಜಿಯವರ ಆರನೇ ವರ್ಷದ ಹಾಗು ಮುರುಘರಾಜೇಂದ್ರ, ಜಯದೇವ ಜಗದ್ಗುರುಗಳ ಪುಣ್ಯ ಸ್ಮರಣೆ ಕಾರ್ಯಕ್ರಮದಲ್ಲಿ ಉಭಯ ಶ್ರೀಗಳ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಅವರು ಮಾತನಾಡಿದರು.

ಸಿದ್ದಗಂಗಾ ಮಠದಲ್ಲಿ ಲಕ್ಷಾಂತರ ಮಕ್ಕಳು ಉಚಿತವಾಗಿ ಶಿಕ್ಷಣ ಪಡೆದು ವೈದ್ಯಕೀಯ, ಇಂಜಿನಿಯರಿಂಗ್, ಐಎಎಸ್, ಐಪಿಎಸ್ ಹಾಗೂ ಇತರೆ ಇಲಾಖೆಗಳಲ್ಲಿ ಅಧಿಕಾರಿಗಳಾಗಿ ಸೇವೆ ಸಲ್ಲಿಸುತ್ತಿರುವುದರಿಂದ ಇಲ್ಲಿನ ಮಠವು



ವಿಶ್ವಮಟ್ಟದಲ್ಲಿ ಹೆಸರನ್ನು ಗಳಿಸುವಂತಾಗಿ ಶಿಕ್ಷಣ ಸಂಸ್ಥೆಗಳಿಗೆ ಪ್ರೇರಣಾದಾಯಕವಾಗಿದೆ ಎಂದರು.

ಮಾಜಿ ಶಾಸಕ ಹೆಚ್. ಎಸ್. ಶಿವಶಂಕರ್ ಮಾತನಾಡಿ, ಸಮಾಜದಲ್ಲಿನ ಜನರು ನೆಮ್ಮದಿ ಮತ್ತು ಶಾಂತಿಯುತ ಬದುಕನ್ನು ಕಟ್ಟಿಕೊಳ್ಳಲು ಶಿಕ್ಷಣ, ಸಂಸ್ಕಾರ, ಸಂಸ್ಕೃತಿ, ಅಧ್ಯಾತ್ಮಿಕತೆಯ ಒಲವು ಹೆಚ್ಚಿನ ಪ್ರಮಾಣದಲ್ಲಿ ಇದ್ದರೆ ಬದುಕನ್ನು ಶಾಂತಿಯುತವಾಗಿ ಮತ್ತು ನೆಮ್ಮದಿಯಿಂದ ಕಟ್ಟಿಕೊಳ್ಳಲು ಸಾಧ್ಯವಾಗುತ್ತದೆ. ಅದನ್ನು ಅರಿತುಕೊಂಡು ತುಮಕೂರಿನ ಸಿದ್ದಗಂಗಾ ಮಠದ ಶ್ರೀಗಳು ಶಿಕ್ಷಣ ಸಂಸ್ಥೆಗಳನ್ನು ಆರಂಭಿಸಿ ಆ ಮೂಲಕ ಅನೇಕ ಬಡಜನತೆಗೆ ಉಚಿತ ಊಟ, ವಸತಿ ಸೇರಿದಂತೆ, ಅನೇಕ ಸೌಲಭ್ಯಗಳನ್ನು ಒದಗಿಸುವಂತಹ ಕೊಡುಗೆಯನ್ನು ನೀಡಿದ್ದಾರೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಚಿತ್ರದುರ್ಗ ಮುರುಘಾ ಮಠದ ಡಾ. ಶಿವಮೂರ್ತಿ ಸ್ವಾಮೀಜಿ, ಶ್ರೀ ಡಾ. ಬಸವಪ್ರಭು ಸ್ವಾಮೀಜಿ, ಮಾಸೂರು ತಿಪ್ಪಾಯಿಕೊಪ್ಪ ಜಂಗಮ ಕ್ಷೇತ್ರ ಮಠದ ಮಹಾಂತ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

ಈ ಸಂದರ್ಭದಲ್ಲಿ ನಿವೃತ್ತ ವೈದ್ಯ ಡಾ. ಜಗನ್ನಾಥ್, ಡಾ ವಿಶ್ವನಾಥ್, ಜಿಪಂ ಮಾಜಿ ಸದಸ್ಯೆ ಗೌರಮ್ಮ ಅರುಣ್ ಕುಮಾರ್ ಪೂಜಾರ್, ರಾಣೇಬೆನ್ನೂರಿನ ಭಾರತಿ ಜಂಬಗಿ, ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್, ಸುರೇಶ್ ಚಂದಪೂರ್, ಹೆಚ್. ನಿಜಗುಣ, ಜಿ.ಕೆ. ಪಂಚಾಕ್ಷರಿ, ಅಡಕಿ ಕುಮಾರ್, ಜಗದೀಶ್ ನೀಲಗುಂದ, ಶೋಭ ಜಗದೀಶ್ ನೀಲಗುಂದ, ಅಜಿತ್ ಸಾವಂತ್, ಕರಿಬಸಪ್ಪ ಕಂಚಿಕೇರಿ, ಅರುಣ್ ಕುಮಾರ್, ಗಿರೀಶ್, ಶಿವಯೋಗಿ ಕಂಚಿಕೇರಿ, ಕೆ.ಬಿ. ಪ್ರಕಾಶ್, ಸಂಜೀವ, ಚನ್ನೇಶ್ ರಾಣೇಬೆನ್ನೂರು, ದಿಟೂರು ಕರಿಬಸಪ್ಪ, ರಾಜು ಹುಲಿಗಿನಹೊಳೆ, ಸುರೇಶ್ ಚಂದಪೂರ್ ಅಡಕಿ ಕುಮಾರ್, ವೀರೇಶ್, ಗಿರೀಶ್, ಕುಮಾರ್, ಉಲ್ಲಾಸ್, ಷಣ್ಮುಖ, ಜಗದೀಶ್ ಪೂಜಾರ್ ಹಾಗೂ ಬಿಜೆಪಿ ವೀರಣ್ಣ ಹೋಟೆಲ್ ಸ್ನೇಹ ಬಳಗದವರು, ಸೇರಿದಂತೆ ಇತರರು ಹಾಜರಿದ್ದರು.

ಕಾಂತರಾಜ್ ಸಂಗಡಿಗರಿಂದ ವಚನ ಗೀತೆಗಳ ಗಾಯನ ನಡೆಯಿತು. ಆಗಮಿಸಿದ ಭಕ್ತರಿಗೆಲ್ಲ ಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು


# ಹಂದರಗಂಬ ಪೂಜೆ : ವಾಲ್ಮೀಕಿ ಜಾತ್ರೆಗೆ ಸಿದ್ಧತೆ



ಮಲೇಬೆನ್ನೂರು, ಜ. 29- ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದಲ್ಲಿ ಫೆ. 8 ಮತ್ತು 9ರಂದು ಜರುಗಲಿರುವ 7ನೇ ವರ್ಷದ ವಾಲ್ಮೀಕಿ ಜಾತ್ರೆ ಅಂಗವಾಗಿ ಶ್ರೀಮಠದಲ್ಲಿ ಮಂಗಳವಾರ ಡಾ. ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಹಂದರಗಂಬ ಪೂಜೆ ನೆರವೇರಿಸುವ ಮೂಲಕ ಜಾತ್ರೆಯ ಸಿದ್ಧತೆಗಳಿಗೆ ನಿನ್ನೆ ಚಾಲನೆ ನೀಡಿದರು.

ಜಾತ್ರಾ ಸಮಿತಿ ಅಧ್ಯಕ್ಷರೂ ಆದ ಜಗಳೂರು ಶಾಸಕ ಬಿ. ದೇವೇಂದ್ರಪ್ಪ, ಜಾತ್ರಾ ಸಮಿತಿ ಸಂಚಾಲಕ ಶ್ರೀನಿವಾಸ್ ದಾಸಕರಿಯಪ್ಪ, ಮಠದ ಧರ್ಮದರ್ಶಿಗಳಾದ ಶ್ರೀಮತಿ ಶಾಂತಲಾ ರಾಜಣ್ಣ, ನಲುವಾಗಲು ನಾಗರಾಜಪ್ಪ, ಕೆ.ಬಿ. ಮಂಜುನಾಥ್, ಜಿ.ಪಂ. ಮಾಜಿ ಸದಸ್ಯ ಹೊದಿಗೆರೆ ರಮೇಶ್, ಬಿಜೆಪಿ ಮುಖಂಡ ಚಂದ್ರಶೇಖರ ಪೂಜಾರ್, ತಿಮ್ಮೇನಹಳ್ಳಿ ಚಂದ್ರಪ್ಪ, ನಿವೃತ್ತ ಅಧಿಕಾರಿ ಮಾರಪ್ಪನಾಯಕ, ಗ್ರಾ.ಪಂ. ಅಧ್ಯಕ್ಷೆ ಹೇಮಾವತಿ ಪರಶುರಾಮಪ್ಪ, ಗ್ರಾ.ಪಂ. ಸದಸ್ಯ ನಾಗೇಂದ್ರ, ನಿವೃತ್ತ ಶಿಕ್ಷಕರಾದ ಜಿಗಳಿಯ ಜಿ.ಆರ್. ನಾಗರಾಜ್, ವಾಸನ ಮಹಾಂತೇಶ್, ಹರಿಹರ ತಾ. ಗ್ರಾ. ಜಾತ್ರಾ ಸಮಿತಿ ಅಧ್ಯಕ್ಷ ಕೆ. ಬೇವಿನಹಳ್ಳಿ ಹಾಲೇಶ್, ಹರಿಹರ ನಗರ ಜಾತ್ರಾ ಸಮಿತಿ ಅಧ್ಯಕ್ಷೆ ಪಾರ್ವತಿ ಬೋರಯ್ಯ, ಮಹಿಳಾ ಮುಖಂಡರಾದ ವಿಜಯಶ್ರೀ ಮಹೇಂದ್ರಕುಮಾರ್, ಗೌರಮ್ಮ ಮಂಜುನಾಥ್ ಚೀಲೂರು, ಹರಿಹರ ನಗರ ನಾಯಕ ಸಮಾಜದ ಅಧ್ಯಕ್ಷ ಮಕರಿ ಪಾಲಾಕ್ಷಪ್ಪ, ರಾಣೇಬೆನ್ನೂರು ತಾ. ನಾಯಕ ಸಮಾಜದ ನದಿ ಹರಳಹಳ್ಳಿ ಬೇಡರ ಚಂದ್ರಪ್ಪ, ರಾಜನಹಳ್ಳಿ ಭೀಮಣ್ಣ, ಹನುಮಂತಪ್ಪ, ಕೊಂಡದಹಳ್ಳಿ ಜಯಣ್ಣ, ಪತ್ರಕರ್ತ ಜಿಗಳಿ ಪ್ರಕಾಶ್ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

## ತೃತೀಯ ವರ್ಷದ ಪುಣ್ಯಸ್ಮರಣೆ



**ದಿ|| ಶ್ರೀ ಮಂಜುನಾಥ ಗೌಡ್ರು ಕೆ.ಎನ್**

ನೀವು ನಮ್ಮನ್ನಗಲಿ 3 ವರ್ಷಗಳಾದರೂ
ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲೇ ಮುನ್ನಡೆಯುತ್ತಾ
ಸದಾ ನಿಮ್ಮ ಸ್ಮರಣೆಯಲ್ಲಿರುವ...

**ಮಂಜುಳಮ್ಮ, ಮಕ್ಕಳು, ಸೊಸೆಯಂದಿರು, ಅಳಿಯ ಮತ್ತು ಮೊಮ್ಮಕ್ಕಳು, ಕೋಗಳಿ ನೀಲಕಂಠಗೌಡ್ರ, ವಂಶಸ್ಥರು ಹಾಗೂ ಬಂಧು-ಮಿತ್ರರು.**

## ಸಾರ್ವಜನಿಕರ ಗಮನಕ್ಕೆ

**ಶ್ರೀ ಮುರುಘರಾಜೇಂದ್ರ ಕೋ-ಆಪ್ ಬ್ಯಾಂಕ್ ಲಿ.,**

1058/3-4, ಲಾಯರ್ ರಸ್ತೆ, ಜಯದೇವ ಸರ್ಕಲ್ ಹತ್ತಿರ, ಕೆ.ಬಿ. ಬಡಾವಣೆ, ದಾವಣಗೆರೆ ಇದರ ವ್ಯವಸ್ಥಾಪಕನಾದ ನಾನು ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ, ಮೇಲ್ಕಾಣಿಸಿದ ನಮ್ಮ ಬ್ಯಾಂಕಿನಲ್ಲಿ ಪಿಗ್ಮಿ ಏಜೆಂಟರಾಗಿ ಕೆಲಸ ಮಾಡುತ್ತಿದ್ದ ಈ ಕೆಳಕಂಡ

**1. ಶ್ರೀ ಕೆ.ಎಂ. ರುದ್ರೇಶ್ ಬಿನ್ ಮಲ್ಲೇಶಪ್ಪ**
**2. ಶ್ರೀ ಕೆ.ಎನ್. ಮಂಜೇಶ್ ಬಿನ್ ಕೆ.ಜೆ. ನಟರಾಜ್, (ಶ್ರೀಮತಿ ಕೆ.ಎನ್. ಮಂಜುಳಾ ಪರವಾಗಿ)**
**3. ಶ್ರೀ ಎಸ್.ಎಂ.ತೋಟದ್ ಬಿನ್ ಮಲ್ಲಪ್ಪ ತೋಟದ್** ಇವರುಗಳು ಈಗ ಬ್ಯಾಂಕಿನ ಪಿಗ್ಮಿ ಸಂಗ್ರಹಣೆ ಕೆಲಸಕ್ಕೆ ರಾಜೀನಾಮೆ ನೀಡಿದ್ದು, ಸದರಿಯವರುಗಳ ಬಳಿ ಸಾರ್ವಜನಿಕರುಗಳು ಯಾರಾದರೂ ಪಿಗ್ಮಿ ಕಟ್ಟುತ್ತಿದ್ದರೆ ಹಾಗೂ ಬ್ಯಾಂಕಿನಲ್ಲಿ ಪಿಗ್ಮಿ ಹಣ ಉಳಿದಿದ್ದರೆ, ಬ್ಯಾಂಕಿನ ಕೆಲಸದ ವೇಳೆಯಲ್ಲಿ ಬಂದು ಖಾತೆಯಲ್ಲಿರುವ ಹಣವನ್ನು ವಾಪಸ್ ಪಡೆಯಬೇಕೆಂದು ಅಥವಾ ಪರ್ಯಾಯ ವ್ಯವಸ್ಥೆಯನ್ನು ಮಾಡಿಸಿಕೊಳ್ಳಬೇಕೆಂದು ಈ ಮೂಲಕ ಸಾರ್ವಜನಿಕರ ಗಮನಕ್ಕೆ ತಂದಿರುತ್ತೇವೆ. ಹಾಗೂ ಈ ಪ್ರಕಟಣೆಯ ನಂತರವೂ ಯಾವುದೇ ವ್ಯತ್ಯಾಸ ಅಥವಾ ಸದರಿಯವರುಗಳ ಮೇಲೆ ದೂರು ನೀಡಿದರೆ ಬ್ಯಾಂಕು ಹೊಣೆಗಾರನಲ್ಲವೆಂದು ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರಲಾಗಿದೆ.

**ದಿ. 30.01.2025**
**ದಾವಣಗೆರೆ**

ಶ್ರೀ ಮುರುಘರಾಜೇಂದ್ರ ಕೋ-ಆಪ್ ಲಿ.,
ದಾವಣಗೆರೆ ಇದರ ಪರವಾಗಿ
ಸಹಿ/- (ಎಂ.ಎಸ್. ಅರುಣ), ವ್ಯವಸ್ಥಾಪಕರು

## 2 ಸಾವಿರ ಕೋಟಿ ಸೈಬರ್ ವಂಚನೆಯಲ್ಲಿ ತೊಡಗಿದ್ದ ತಂಡ ಬಯಲು

**(1ನೇ ಪುಟದಿಂದ)** ರೂ.ಗಳ ಹೂಡಿಕೆ ಮಾಡಿಸಿದ್ದರು. ನಂತರ ಅವರು ಅಲ್ಲಿಂದ ಪರಾರಿಯಾಗಿ ಶ್ರೀಗಂಗಾ ನಗರಕ್ಕೆ ಬಂದಿದ್ದಾರೆ ಎಂದು ದೂರಿನಲ್ಲಿ ಹೇಳಲಾಗಿತ್ತು.

ನಂತರ ಪೊಲೀಸರು ಆರ್ಯ ಮನೆ ಮೇಲೆ ದಾಳಿ ನಡೆಸಿ ಬಂಧಿಸಿದ್ದಾರೆ. ಈ ವೇಳೆ ಹತ್ತು ಲಕ್ಷ ರೂ. ನಗದು, ಮೂರು ಸಿಪಿಯು, 6 ಮೊಬೈಲ್, 8 ಎಟಿಎಂ, ಮೂರು ಪ್ಯಾನ್ ಹಾಗೂ 85 ಲಕ್ಷ ರೂ.ಗಳ ಐಷಾರಾಮಿ ಕಾರು ಸೇರಿದಂತೆ ಹಲವಾರು ವಸ್ತುಗಳು ಹಾಗೂ ದಾಖಲೆಗಳು ಪತ್ತೆಯಾಗಿವೆ. ಈ ಬಗ್ಗೆ ಅಜಯ್ ಆರ್ಯ ಹಾಗೂ ಸಹಚರರ ವಿರುದ್ಧ ಪ್ರಕರಣ ದಾಖಲಿಸಿದ್ದು ತನಿಖೆ ನಡೆಸಲಾಗುತ್ತಿದೆ.

ಇವರು ಕರ್ನಾಟಕದ ವಿಜಯಪುರದಲ್ಲಿ ಟೆಕೆಬಲ್ ಟೆಕ್ ಹೆಸರಿನ ಕಂಪನಿಯನ್ನು 2022ರಲ್ಲಿ ಆರಂಭಿಸಿದ್ದರು. ಜನರಿಗೆ ಸೈಬರ್ ತರಬೇತಿ ನೀಡುವುದಾಗಿ ಹೇಳಿ ಈ ಸಂಸ್ಥೆ ಸ್ಥಾಪಿಸಲಾಗಿತ್ತು ಎಂದು ಪೊಲೀಸರು ಹೇಳಿದ್ದಾರೆ.

# ತಿದ್ದುಪಡಿ ವಕ್ಫ್ ಮಸೂದೆಗೆ ಅಂಗೀಕಾರ

**ಸಂಸತ್ತಿನ ಜಂಟಿ ಸಮಿತಿ ಒಪ್ಪಿಗೆ**

**ಪ್ರತಿ ಪಕ್ಷಗಳ ಆಕ್ಷೇಪ**

**15 - 11 ಅಂತರದಲ್ಲಿ ತಿದ್ದುಪಡಿ ಮಸೂದೆಗೆ ಅಂಗೀಕಾರ**

ನವದೆಹಲಿ, ಜ. 29 - ತಿದ್ದುಪಡಿ ಮಾಡಲಾದ ವಕ್ಫ್ ಮಸೂದೆಗೆ ಸಂಸತ್ತಿನ ಜಂಟಿ ಸಮಿತಿ ಒಪ್ಪಿಗೆ ನೀಡಿದೆ. ಬಹುಮತದ ಆಧಾರದ ಮೇಲೆ ತಿದ್ದುಪಡಿ ಮಾಡಲಾದ ಮಸೂದೆಗೆ ಒಪ್ಪಿಗೆ ಪಡೆಯಲಾಗಿದೆ ಎಂದು ಸಮಿತಿ ಅಧ್ಯಕ್ಷ ಜಗದಂಬಿಕ ಪಾಲ್ ತಿಳಿಸಿದ್ದಾರೆ.

ಅನುಮೋದನೆ ಪಡೆದ ಮಸೂದೆಗೆ ಪ್ರತಿಪಕ್ಷಗಳು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದವು. 15 - 11 ಅಂತರದಲ್ಲಿ ತಿದ್ದುಪಡಿ ಮಸೂದೆಗೆ ಅಂಗೀಕಾರ ಪಡೆಯಲಾಗಿದೆ.

ಈ ಮಸೂದೆ ಸಂವಿಧಾನ ಬಾಹಿರವಾಗಿದ್ದು ಇದರಿಂದ ವಕ್ಫ್ ಮಂಡಳಿ ನಾಶವಾಗಲಿದೆ ಎಂದು ಪ್ರತಿಪಕ್ಷಗಳು ಆರೋಪಿಸಿವೆ. ಆದರೆ, ತಿದ್ದುಪಡಿ ಮಾಡಲಾದ ಮಸೂದೆಯಲ್ಲಿ ಪ್ರತಿಪಕ್ಷಗಳ ಸದಸ್ಯರು ವ್ಯಕ್ತಪಡಿಸಿರುವ ಹಲವಾರು ಆಕ್ಷೇಪಗಳನ್ನು ಪರಿಗಣಿಸಲಾಗಿದೆ. ಮಸೂದೆ ಜಾರಿಯಾದ ನಂತರ ಮಂಡಳಿಯು ಪಾರದರ್ಶಕವಾಗಿ ಹಾಗೂ ಹೆಚ್ಚು ದಕ್ಷತೆಯಿಂದ ಕಾರ್ಯನಿರ್ವಹಿಸಲು ಸಾಧ್ಯವಾಗಲಿದೆ ಎಂದು ಪಾಲ್ ಹೇಳಿದ್ದಾರೆ.

ಇದೇ ಮೊದಲ ಬಾರಿಗೆ ಪಾಸ್ಮಾಂಡ (ಹಿಂದುಳಿದ) ಮುಸ್ಲಿಮರು, ಬಡವರು, ಮಹಿಳೆಯರು ಹಾಗೂ ಅನಾಥರನ್ನು ಸೇರ್ಪಡೆ ಮಾಡಲಾಗಿದೆ ಎಂದು ಪಾಲ್ ಹೇಳಿದ್ದಾರೆ.

ಲೋಕಸಭಾಧ್ಯಕ್ಷ ಓಂ ಬಿರ್ಲಾ ಅವರಿಗೆ ಗುರುವಾರ ಸಮಿತಿ ತನ್ನ ವರದಿ ಸಲ್ಲಿಸಲಿದೆ. ಈ ಬಗ್ಗೆ ಮುಂದಿನ ಕ್ರಮ ತೆಗೆದುಕೊಳ್ಳುವುದು ಲೋಕಸಭಾಧ್ಯಕ್ಷರು ಹಾಗೂ ಸಂಸತ್ತಿಗೆ ಬಿಟ್ಟದ್ದಾಗಿದೆ ಎಂದವರು ಹೇಳಿದ್ದಾರೆ.

ದೇಶದ ರಾಜಧಾನಿಯಲ್ಲಿ ಸಮಿತಿಯು 38 ಸಭೆಗಳನ್ನು ನಡೆಸಿತ್ತು. ಕಳೆದ ವರ್ಷ ಆಗಸ್ಟ್ 8ರಂದು ರಚಿಸಲಾದ ಸಮಿತಿಯ ಸದಸ್ಯರು ದೇಶಾದ್ಯಂತ ಸಂಚಾರ ನಡೆಸಿ ಸಂಬಂಧಿಸಿದವರ ಜೊತೆ ಸಮಾಲೋಚನೆ ನಡೆಸಿದ್ದರು.

ಕಾಂಗ್ರೆಸ್, ಡಿಎಂಕೆ, ಟಿಎಂಸಿ, ಎಎಪಿ ಸೇರಿದಂತೆ ಪ್ರತಿಪಕ್ಷಗಳ ಸಂಸದರು ಸಮಿತಿಯ ಕಾರ್ಯನಿರ್ವಹಣೆ ಹಾಗೂ ಅಂಗೀಕಾರ ಪಡೆಯಲಾದ ಮಸೂದೆಯನ್ನು ವಿರೋಧಿಸಿದ್ದಾರೆ. ಕೆಲವರು ಸಮಿತಿಗೆ ತಮ್ಮ ಭಿನ್ನ ನಿಲುವನ್ನು ತಿಳಿಸಿದ್ದಾರೆ.

665 ಪುಟಗಳ ವರದಿಯನ್ನು ಮಂಗಳವಾರ ರಾತ್ರಿಯಷ್ಟೇ ತಮಗೆ ನೀಡಲಾಗಿದೆ. ಈ ಬಗ್ಗೆ ಪರಿಶೀಲಿಸಿ ಭಿನ್ನಮತ ತಿಳಿಸಲು ಹೆಚ್ಚು ಸಮಯ ಕೊಟ್ಟಿಲ್ಲ ಎಂದು ಪ್ರತಿಪಕ್ಷಗಳ ಸದಸ್ಯರು ಆಕ್ಷೇಪಿಸಿದ್ದಾರೆ.

ಸಂವಿಧಾನದ 26ನೇ ವಿಧಿಯ ಅನ್ವಯ ನಾಗರಿಕರು ತಮ್ಮ ಧಾರ್ಮಿಕ ವ್ಯವಹಾರಗಳನ್ನು ನಿರ್ವಹಿಸುವ ಸ್ವಾತಂತ್ರ್ಯ ಹೊಂದಿದ್ದಾರೆ. ಇದರಲ್ಲಿ ಧಾರ್ಮಿಕ ಹಾಗೂ ದತ್ತಿ ಸಂಸ್ಥೆಗಳ ನಿರ್ವಹಣೆ ಸಹ ಸೇರಿದೆ. ಸರ್ಕಾರ ತಿದ್ದುಪಡಿ ಮಸೂದೆ ತಂದಿರುವುದು ಈ ಹಕ್ಕುಗಳ ಉಲ್ಲಂಘನೆ ಎಂದು ಪ್ರತಿಪಕ್ಷಗಳು ಹೇಳಿವೆ.

ಬೇರೆ ದತ್ತಿ ಮಂಡಳಿಗಳಲ್ಲಿ ಆಯಾ ಧರ್ಮಗಳ ಸದಸ್ಯರೇ ಇದ್ದಾರೆ. ಹೀಗಿರುವಾಗ ವಕ್ಫ್ ಮಂಡಳಿಗಳಲ್ಲಿ ಬದಲಾವಣೆ ತರುತ್ತಿರುವುದು ಈ ಮಂಡಳಿಗಳನ್ನು ನಾಶಗೊಳಿಸುವ ಪ್ರಯತ್ನ ಎಂದು ಪ್ರತಿಪಕ್ಷಗಳ ಸದಸ್ಯರು ಹೇಳಿದ್ದಾರೆ.

ಸಮಿತಿಯ ಟಿಪ್ಪಣಿ ಹಾಗೂ ಶಿಫಾರಸ್ಸು ಎರಡೂ ವಿಕೃತವಾಗಿವೆ ಎಂದು ತೃಣ ಮೂಲ ಕಾಂಗ್ರೆಸ್ ಸಂಸದ ಕಲ್ಯಾಣ್ ಬ್ಯಾನರ್ಜಿ ಹೇಳಿದ್ದಾರೆ.

ಪ್ರಸ್ತಾಪಿತ ಮಸೂದೆಯಿಂದ ಮಂಡಳಿ ನಾಶವಾಗಲಿದೆ. ಸರ್ಕಾರ ಮಧ್ಯ ಪ್ರವೇಶಿಸಲು ದಾರಿ ಮಾಡಿಕೊಟ್ಟಂತಾಗುತ್ತದೆ ಎಂದು ಎಐಎಂಐಎಂ ಪಕ್ಷದ ಅಸಾದುದ್ದೀನ್ ಓವೈಸಿ ಹೇಳಿದ್ದಾರೆ.

ಸಮಿತಿ ಸಲ್ಲಿಸಿರುವ ತಿದ್ದುಪಡಿಗಳು ಸಂವಿಧಾನ ಬಾಹಿರವಾಗಿವೆ. ಅಲ್ಪಸಂಖ್ಯಾತರನ್ನು ಗುರಿಯಾಗಿಟ್ಟುಕೊಂಡು ಮಸೂದೆ ರೂಪಿಸಲಾಗಿದೆ ಎಂದು ಕಾಂಗ್ರೆಸ್ ಸಂಸದ ಸೈಯ್ಯದ್ ನಜೀರ್ ಹುಸೇನ್ ಆರೋಪಿಸಿದ್ದಾರೆ.

ಈ ಆರೋಪಗಳನ್ನು ತಳ್ಳಿ ಹಾಕಿರುವ ಬಿಜೆಪಿ ಸಂಸದ ತೇಜಸ್ವಿ ಸೂರ್ಯ, ಪ್ರಸ್ತಾಪಿತ ಕಾಯ್ದೆಯಿಂದ ಮಂಡಳಿಗಳ ಕಾರ್ಯನಿರ್ವಹಣೆಯಲ್ಲಿ ಪಾರದರ್ಶಕತೆ ಹಾಗೂ ಉತ್ತರದಾಯಿತ್ವ ಬರಲಿದೆ. ಇದರಿಂದ ಮುಸ್ಲಿಂ ಸಮುದಾಯ ಸಬಲೀಕರಣಗೊಳ್ಳಲಿದೆ ಎಂದಿದ್ದಾರೆ.

ಪ್ರಸ್ತಾಪಿತ ತಿದ್ದುಪಡಿ ಮಾಡಲಾದ ಮಸೂದೆಯಲ್ಲಿ ಬಳಕೆ ಸ್ವರೂಪದಿಂದ ವಕ್ಫ್ ಎಂಬ ಅಂಶವನ್ನು ತೆಗೆದುಹಾಕಲಾಗಿದೆ. ಆದರೆ ಈಗಾಗಲೇ ವಕ್ಫ್ ಎಂದು ಘೋಷಿತವಾದ ಆಸ್ತಿಗಳ ಮೇಲೆ ಈ ಕಾಯ್ದೆ ಪೂರ್ವಾನ್ವಯ ಆಗುವುದಿಲ್ಲ.

ವಕ್ಫ್ ಕಾಯ್ದೆಗೆ ತಿದ್ದುಪಡಿ ತಂದು ಮುಸ್ಲಿಮೇತರರು ವಕ್ಫ್ ಮಂಡಳಿಗಳಿಗೆ ಸೇರ್ಪಡೆಯಾಗಲು ಅವಕಾಶ ಕಲ್ಪಿಸಲಾಗಿದೆ. ಇವರು ಫಲಾನುಭವಿಗಳು, ವಿವಾದದ ಭಾಗವಾಗಿರುವವರು ಇಲ್ಲವೇ ವಕ್ಫ್ ವಿಷಯಗಳಲ್ಲಿ ಆಸಕ್ತಿ ಹೊಂದಿದವರು ಆಗಿರಬಹುದು ಎಂದು ಮೂಲಗಳು ತಿಳಿಸಿವೆ.

ತಿದ್ದುಪಡಿ ತರಲಾಗುತ್ತಿರುವ ಮಸೂದೆಯ ಅನ್ವಯ ಮಂಡಳಿಯಲ್ಲಿ ಮುಸ್ಲಿಂ ಒಬಿಸಿ ಸಮುದಾಯದ ಒಬ್ಬರಿಗೆ ಪ್ರಾತಿನಿಧ್ಯ ಕಲ್ಪಿಸಲಾಗಿದೆ. ಆಘಾಖಾನಿ ಹಾಗೂ ಬೋರಾ ಸಮುದಾಯಗಳಿಗೆ ಪ್ರತ್ಯೇಕ ಮಂಡಳಿಗಳನ್ನು ರಚಿಸಲು ರಾಜ್ಯ ಸರ್ಕಾರಗಳಿಗೆ ಅವಕಾಶ ನೀಡಲಾಗಿದೆ. ವಕ್ಫ್ ಮೂಲಕ ಮುಸ್ಲಿಂ ಮಹಿಳೆಯರಿಗೆ ನೆರವು ನೀಡಲು ಅವಕಾಶ ಕಲ್ಪಿಸಲಾಗಿದೆ.

ಆದರೆ, ವಕ್ಫ್ ಆಸ್ತಿಗಳು ಸರ್ಕಾರದ ಜೊತೆ ಹೊಂದಿರುವ ವಿವಾದಗಳಿಗೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳು ಹೊಂದಿದ್ದ ತನಿಖಾ ಅಧಿಕಾರವನ್ನು ವಾಪಸ್ ಪಡೆಯಲು ಪ್ರಸ್ತಾಪಿಸಲಾಗಿದೆ. ಈ ಅಧಿಕಾರವನ್ನು ರಾಜ್ಯ ಸರ್ಕಾರಕ್ಕೆ ನೀಡಲಾಗುವುದು. ರಾಜ್ಯ ಸರ್ಕಾರ ಜಿಲ್ಲಾಧಿಕಾರಿಗಳಿಗಿಂತ ಹಿರಿಯ ಅಧಿಕಾರಿಯನ್ನು ವಿವಾದದ ತನಿಖೆಗೆ ನಿಯೋಜಿಸಬಹುದು.

ಕಳೆದ ವರ್ಷ ಆಗಸ್ಟ್ 8ರಂದು ತಿದ್ದುಪಡಿ ಮಸೂದೆಯನ್ನು ಜಂಟಿ ಸಂಸದೀಯ ಸಮಿತಿಗೆ ವಹಿಸಲಾಗಿತ್ತು. 1995ರ ವಕ್ಫ್ ಕಾಯ್ದೆಯನ್ನು ತಿದ್ದುಪಡಿ ಮಾಡಲು ಕೇಂದ್ರ ಸರ್ಕಾರ ಮಸೂದೆಯನ್ನು ಮಂಡಿಸಿತ್ತು.

# ತರಳಬಾಳು ಹುಣ್ಣಿಮೆಗೆ ಶೃಂಗಾರವಾಗುತ್ತಿರುವ ಭರಮಸಾಗರ

ಬಿ.ಜೆ. ಅನಂತಪದ್ಮನಾಭ ರಾವ್

ಭರಮಸಾಗರ ತರಳಬಾಳು ಹುಣ್ಣಿಮೆಗೆ ಎಲ್ಲಾ ರೀತಿಯಿಂದಲೂ ಸಿಂಗಾರವಾಗುತ್ತಿದೆ. ಸ್ಥಳವನ್ನು ವೀಕ್ಷಿಸಲು ನಿನ್ನೆ ಡಾ|| ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಭಕ್ತರ ಸಮೂಹದೊಂದಿಗೆ ನೋಡಿ ಬಹಳ ಸಂತೋಷವಾಯಿತು ಈ ಜಾಗವು ಅತ್ಯದ್ಭುತ ವಾಗಿದೆ ಎಂದು ತುಂಬಾ ಹರ್ಷದಿಂದ ಹೇಳಿದರು.

ಫೆಬ್ರವರಿ 4 ರಿಂದ 12 ರವರೆಗೆ ಹುಣ್ಣಿಮೆಯ ಆಚರಣೆಗೆ ಭರಮಸಾಗರದಲ್ಲಿ ಎಲ್ಲಾ ರೀತಿಯ ಸ್ವಚ್ಛತೆಗಾಗಿ ರಸ್ತೆಗಳ ರಿಪೇರಿ, ಹಳ್ಳ, ಗುಂಡಿಗಳನ್ನು ಮುಚ್ಚುವುದು, ವಿಶೇಷವಾಗಿ ವಿದ್ಯುತ್ ದೀಪ ನೂತನವಾಗಿ ಅಳವಡಿಕೆ ಮಾಡಿರುವುದು ಅಲ್ಲದೇ ಭರಮಸಾಗರ ದೊಡ್ಡ ಕೆರೆಯ ರಸ್ತೆಗೆ ಡಾಂಬರ್ ಹಾಕುವುದು ಇನ್ನೂ ವಿಶೇಷವಾಗಿ ಭರಮಸಾಗರ ಕಾರ್ಯಕ್ರಮಕ್ಕೆ ಸಿದ್ಧವಾಗುತ್ತಿದೆ.

ಕಾರ್ಯಕ್ರಮದ ಅಂಗವಾಗಿ ಶ್ರೀಗಳವರ ಸಲಹೆ ಯಂತೆ ಶಾಸಕ ಡಾ|| ಎಂ. ಚಂದ್ರಪ್ಪ ಅವರು ತಮ್ಮ ಕೆಲಸದಲ್ಲಿ ಹೆಚ್ಚು ಆಸಕ್ತಿ ವಹಿಸಿದ್ದಾರೆ. ಇತಿಹಾಸದಲ್ಲೇ ಇಂತಹ ಕಾರ್ಯಕ್ರಮ, ಬೃಹತ್ತಾದ ಮಂಟಪ ಈ ಮಂಟಪವು ಸುಮಾರು 250 ಎಕರೆ ಜಮೀನಿನಲ್ಲಿ ನಿರ್ಮಾಣವಾಗುತ್ತಿದೆ. ಈ ಒಂದು ಮಂಟಪ ತರಳಬಾಳು ಹುಣ್ಣಿಮೆಯ ಕಾರ್ಯಕ್ರಮವನ್ನು ಚೆನ್ನಾಗಿ ನಡೆಸಲು ಎಲ್ಲಾ ರೀತಿಯ ಸಿದ್ಧತೆಯನ್ನು ಅಕ್ಕ ಪಕ್ಕದ



ಗ್ರಾಮಸ್ಥರು, ಭಕ್ತರು ಮಾಡುತ್ತಿದ್ದಾರೆ.

ಭರಮಸಾಗರ ಕೆರೆ ನಿರ್ಮಾತೃ ಭರಮಣ್ಣ ನಾಯಕರ ಸ್ಮರಣೆಗಾಗಿ ಮಂಟಪಕ್ಕೆ ಬಿಚ್ಚುಗತ್ತಿ ಭರಮಣ್ಣ ನಾಯಕ ಮಹಾಮಂಟಪ ಎಂದೂ, ಮಹಾದ್ವಾರ ಹಾಗೂ ಇತರೆ ವೇದಿಕೆಗೆ ಚಿನ್ಮೂಲಾದ್ರಿ ಗುರು ರೇವಣಸಿದ್ದೇಶ್ವರ ವೇದಿಕೆ ಎಂಬ ಹೆಸರುಗಳನ್ನು ಶ್ರೀಗಳು ಸಲಹೆ ನೀಡಿದರು. ಜಿಲ್ಲೆಯ ಇತಿಹಾಸದಲ್ಲಿ ದಾಖಲಾಗಲಿರುವ ಈ ಪ್ರಾಥಃ ಸ್ಮರಣೆಯರನ್ನು ನೆನಪು ಮಾಡಿಕೊಳ್ಳುವುದು ತಮ್ಮ ಕರ್ತವ್ಯ ಎಂದರು.

ದೇಶದ ಹಿತಕ್ಕಾಗಿ ಹೋರಾಡುತ್ತಾ ವೀರ ಮರಣ ಹೊಂದಿರುವ 10 ಸೈನಿಕ ಕುಟುಂಬಕ್ಕೆ ನೆರವು ತಲಾ 1 ಲಕ್ಷ ರೂ. ಗಳನ್ನು ನೀಡಲಾಗುವುದು ಎಂದು ಶ್ರೀಗಳವರು ಈ ಸಂದರ್ಭದಲ್ಲಿ ಪ್ರಕಟ ಮಾಡಿದರು. ದೇಶ - ವಿದೇಶಗಳಿಂದ ವಿದ್ವಾಂಸರು, ಸಾಧಕರು ಮತ್ತು ರಾಜ ತಾಂತ್ರಿಕರು ಈ ಬಾರಿಯ ಹುಣ್ಣಿಮೆ ಮಹೋತ್ಸವದಲ್ಲಿ ಭಾಗಿ ಯಾಗುತ್ತಿರುವುದರಿಂದ ಈ ಹುಣ್ಣಿಮೆಗೆ ಅಂತರ ರಾಷ್ಟ್ರೀಯ ಮೆರಗು ಬರಲಿದೆ ಎಂದರು.

ತರಳಬಾಳು ಜಗದ್ಗುರು ಬೃಹನ್ಮಠವು ಕಳೆದ 76 ವರ್ಷಗಳಿಂದ ನಾಡಿನ ಒಳ ಹೊರಗೆ ನಡೆಸಿಕೊಂಡು ಬಂದಿರುವ ತರಳಬಾಳು ಹುಣ್ಣಿಮೆಯ ಮಹತ್ವವು ಒಂದು ನಾಡ ಹಬ್ಬವಾಗಿ ಸರ್ವಜನಾದರಣೆಯನ್ನು ಪಡೆದಿದೆ.

ಈ ಕಾರ್ಯಕ್ರಮದಲ್ಲಿ ಶಿಕ್ಷಣ, ಕಲೆ, ಸಂಸ್ಕೃತಿ ಮಹಿಳೆ ಮತ್ತು ಸಮಾಜ, ರಾಜಕಾರಣ, ಶರಣ ಸಾಹಿತ್ಯ, ನ್ಯಾಯಾಲಯ, ಆರೋಗ್ಯ ಮತ್ತು ಸಮೂಹ ಮಾಧ್ಯಮ, ಕೃಷಿ ಮತ್ತು ಮತ್ತು ಜಲ ಸಂರಕ್ಷಣೆ, ಧರ್ಮ, ವಿಜ್ಞಾನ ಬಗ್ಗೆ ಮಾತನಾಡಲು ಅನುಭವಿಗಳನ್ನು, ಪರಿಣಿತರನ್ನು ಮತ್ತು ಪ್ರತಿಷ್ಠಿತ ವ್ಯಕ್ತಿಗಳನ್ನು ಆಹ್ವಾನಿಸಲಾಗುವುದು ಎಂದರು.

ಭರಮಸಾಗರದಲ್ಲಿ ನಡೆಯುವ ತರಳಬಾಳು ಹುಣ್ಣಿಮೆಯು 77ರ ಹುಣ್ಣಿಮೆಯಾಗಿದೆ.

ಶ್ರೀ ತರಳಬಾಳು ಜಗದ್ಗುರು ಶ್ರೀ 1108 ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ದಿವ್ಯ ಸಾನ್ನಿಧ್ಯದಲ್ಲಿ ಈ ತರಳಬಾಳು ಹುಣ್ಣಿಮೆಯ ಮಹೋತ್ಸವ ಈ ಹೊಸ ಆಯಾಮವನ್ನು ಪಡೆದಿದೆ.

ನಾಗಲಕ್ಷ್ಮಿ ಚೌದರಿ, ನಿವೃತ್ತ ನ್ಯಾಯಾಧೀಶ ಸಂತೋಷ್ ಹೆಗಡೆ, ಜಯದೇವ ಆಸ್ಪತ್ರೆಯ ಡಾ. ಮಂಜುನಾಥ್, ಅಶೋಕ್ ಹಾರನಹಳ್ಳಿ, ಶಿಕ್ಷಣ ತಜ್ಞ ಡಾ. ಗುರುರಾಜ ಕರ್ಜಗಿ, ಹಿರೇಮಗಳೂರು ಕಣ್ಣನ್, ಹಾಸ್ಯ ಭಾಷಣಕಾರ ಸಂಧ್ಯಾ ಶೆಣೈ, ಬಿ.ವೈ. ವಿಜಯೇಂದ್ರ, ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್, ನ್ಯಾಯಮೂರ್ತಿ ಪ್ರಭಾಕರ್ ಶಾಸ್ತ್ರೀ, ಡಾ|| ಪ್ರಭಾ ಮಲ್ಲಿಕಾರ್ಜುನ್, ಡಾ|| ಶರಣ ಪಾಟೀಲ್, ಪಬ್ಲಿಕ್ ಟಿವಿ ರಂಗನಾಥ್, ಟಿವಿ 9 ಮುಖ್ಯ ನಿರ್ಮಾಪಕ ರಂಗನಾಥ್ ಭಾರಧ್ವಾಜ್, ಯದುವೀರ್ ಕೃಷ್ಣ ದತ್ತ ಚಾಮರಾಜ ಒಡೆಯರ್, ಬಸವರಾಜ ಬೊಮ್ಮಾಯಿ, ಇನ್ನೂ ಅನೇಕ ಗಣ್ಯ ವ್ಯಕ್ತಿಗಳು ಭಾಗವಹಿಸುವರು.

ಈ ತರಳಬಾಳು ಹುಣ್ಣಿಮೆ ನಡೆದ ಮುಂದಿನ ದಿನಮಾನದಲ್ಲಿ ಭರಮಸಾಗರದ ಚಿತ್ರಣವೇ ಬದಲಾವಣೆಯಾಗುತ್ತದೆ. ಅಲ್ಲದೇ, ಶ್ರೀಗಳ ಆಶೀರ್ವಾದದಿಂದ ಮುಂದಿನ ದಿನಗಳಲ್ಲಿ ತಾಲ್ಲೂಕು ರಚನೆಯಾಗುವುದರಲ್ಲಿ ಅನುಮಾನವೇ ಇಲ್ಲ ಎಂದು ಅನೇಕರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

# 16,300 ಕೋಟಿ ರೂ.ಗಳ ಖನಿಜ ಯೋಜನೆಗೆ ಕೇಂದ್ರದ ಒಪ್ಪಿಗೆ

ನವದೆಹಲಿ, ಜ. 29 - ದೇಶದಲ್ಲಿ ಹಾಗೂ ದೇಶದ ಹೊರಗೆ ಮಹತ್ವದ ಖನಿಜಗಳ ಬಳಕೆಗೆ ಉತ್ತೇಜನ ನೀಡುವ 16,300 ಕೋಟಿ ರೂ.ಗಳ ರಾಷ್ಟ್ರೀಯ ಮಹತ್ವದ ಖನಿಜಗಳ ಯೋಜನೆಗೆ (ಎನ್.ಸಿ.ಎಂ.ಎಂ.) ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಂಪುಟ ಸಭೆಯಲ್ಲಿ ಈ ಯೋಜನೆಗೆ ಒಪ್ಪಿಗೆ ನೀಡಲಾಗಿದೆ.

ಸಂಪುಟ ಸಭೆಯ ನಂತರ ಈ ಬಗ್ಗೆ ಮಾತನಾಡಿರುವ ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವ ಅಶ್ವಿನಿ ವೈಷ್ಣವ್, ಮಹತ್ವದ ಖನಿಜಗಳಿಗಾಗಿ ಆಮದು ಅವಲಂಬಿಸುವುದನ್ನು ತಪ್ಪಿಸಲು ಹಾಗೂ ಸ್ವಾವಲಂಬನೆ ಹೊಂದಲು ಈ ಯೋಜನೆ ರೂಪಿಸಲಾಗಿದೆ ಎಂದಿದ್ದಾರೆ.

ಖನಿಜಗಳನ್ನು ಶೋಧಿಸುವುದು, ಗಣಿಗಾರಿಕೆ, ಸಂಸ್ಕರಣೆಯಿಂದ ಹಿಡಿದು ಎಲ್ಲ ಹಂತಗಳಲ್ಲಿ ಮೌಲ್ಯವರ್ಧನೆ ಮಾಡಲು ಎನ್.ಸಿ.ಎಂ.ಎಂ. ಉದ್ದೇಶಿಸಿದೆ ಎಂದವರು ತಿಳಿಸಿದ್ದಾರೆ.

ದೇಶದ ಒಳಗೆ ಹಾಗೂ ಹೊರಗೆ ಮಹತ್ವದ ಖನಿಜಗಳ ಉತ್ಪಾದನೆ ಹೆಚ್ಚಿಸಲು ಈ ಯೋಜನೆ ರೂಪಿಸಲಾಗಿದೆ. ಖನಿಜಗಳ ಗಣಿಗಾರಿಕೆ ಯೋಜನೆಗಳಿಗೆ ತ್ವರಿತವಾಗಿ ಒಪ್ಪಿಗೆ ಪಡೆಯಲು ನಿಯಂತ್ರಕ ಒಂದನ್ನು ರೂಪಿಸಲಾಗುವುದು.

ಈ ಖನಿಜಗಳ ಶೋಧನೆ ಹಾಗೂ ಗಣಿಗಾರಿಕೆಗಾಗಿ ಹಣಕಾಸು ಉತ್ತೇಜನ ನೀಡಲಾಗುವುದು. ಸಾರ್ವಜನಿಕ ವಲಯ ಹಾಗೂ ಖಾಸಗಿ ವಲಯದ ಕಂಪನಿಗಳು ದೇಶದ ಹೊರಗೆ ಗಣಿಗಳನ್ನು ಹೊಂದಲು ಉತ್ತೇಜನ ನೀಡಲಾಗುವುದು.

ಖನಿಜ ಸಮೃದ್ಧವಾದ ದೇಶಗಳ ಜೊತೆ ವ್ಯಾಪಾರ ಹೆಚ್ಚಿಸಲಾಗುವುದು. ದೇಶದ ಒಳಗೆ ಈ ಖನಿಜಗಳ ದಾಸ್ತಾನು ಹೊಂದಲು ಉತ್ತೇಜನ ನೀಡಲಾಗುವುದು.

# ಉಜ್ಜಯಿನಿ ಸಿದ್ದಲಿಂಗೇಶ್ವರ ಮಹಾಸ್ವಾಮಿಗಳು ಮಹಾನ್ ತಪಸ್ವಿ



ಓಂಕಾರ ಶಿವಾಚಾರ್ಯ ಶ್ರೀಗಳು

ದಾವಣಗೆರೆ, ಜ. 29 - ಉಜ್ಜಯಿನಿ ಸಿದ್ದಲಿಂಗೇಶ್ವರ ಮಹಾಸ್ವಾಮಿಗಳು ಮಹಾನ್ ತಪಸ್ವಿಗಳಾಗಿದ್ದರು ಎಂದು ಆವರಗೊಳ್ಳ ಓಂಕಾರ ಶಿವಾಚಾರ್ಯ ಶ್ರೀಗಳು ಹೇಳಿದರು.

ಜಗದ್ಗುರು, ಮಹಾತಪಸ್ವಿ ಸಿದ್ದಲಿಂಗೇಶ್ವರ ಪುಣ್ಯಾಶ್ರಮ ಸೇವಾ ಟ್ರಸ್ಟ್ ವತಿಯಿಂದ ಸಮೀಪದ ದೊಡ್ಡಬಾತಿಯಲ್ಲಿ ಭಾನುವಾರ ನಡೆದ ಉಜ್ಜಯಿನಿ ಸಿದ್ದಲಿಂಗೇಶ್ವರ ಮಹಾಸ್ವಾಮಿಗಳ 89ನೇ ಪುಣ್ಯಸ್ಮರಣೋತ್ಸವ ಸಮಾರಂಭದ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಬುಕ್ಕಾಂಬುದಿ ಬೆಟ್ಟದ ಮೇಲಿನ ಗುಹೆಯಲ್ಲಿ ಸಿದ್ದಲಿಂಗೇಶ್ವರ ಮಹಾಸ್ವಾಮಿಗಳು ಲೋಕ ಕಲ್ಯಾಣಕ್ಕಾಗಿ ಘೋರ ತಪಸ್ಸು ಮಾಡಿದ್ದರು. ಇಂದು ಈ ಸ್ಥಳ ಪವಿತ್ರ ಕ್ಷೇತ್ರವಾಗಿದೆ ಎಂದು ತಿಳಿಸಿದರು.

ಪವಾಡ ಪುರುಷ ಸಿದ್ದಲಿಂಗೇಶ್ವರ ಸ್ವಾಮಿಗಳು ಭಕ್ತರ ಅಭಿಲಾಷೆಯನ್ನು ಈಡೇರಿಸುತ್ತಿದ್ದರು ಎಂದು ಸ್ವಾಮಿಗಳ ಶಕ್ತಿಯನ್ನು ಭಕ್ತರಿಗೆ ವಿವರಿಸಿದರು.

ಕಾರ್ಯಕ್ರಮದ ಅಂಗವಾಗಿ ನಡೆದ ರುದ್ರಾಭಿಷೇಕ, ದೀಕ್ಷಾ ರುದ್ರಹೋಮ, ಮೃತ್ಯುಂಜಯ ಹೋಮ, ನವಗ್ರಹ ಹೋಮವನ್ನು ಕಡೇ ನಂದಿಹಳ್ಳಿಯ ರೇವಣಸಿದ್ದೇಶ್ವರ ಶ್ರೀಗಳು ನೆರವೇರಿಸಿದರು.

ಉದಯ ಶಂಕರ ಸ್ವಾಮಿಗಳ ನೇತೃತ್ವದಲ್ಲಿ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮದಲ್ಲಿ ದೊಡ್ಡ ಬಾತಿ ಗ್ರಾ.ಪಂ. ಸದಸ್ಯರಾದ ಕುಂಬಾರ ನಾಗಣ್ಣ, ಗೌಡರ ನಾಗಣ್ಣ, ಉಜ್ಜಿನಿ ಮಠದ ರಾಜಣ್ಣ, ಸೋಮಯ್ಯ, ಕೆ. ಶಿವಮೂರ್ತಯ್ಯ, ಎಸ್. ವೀರೇಶ್, ಕಸ್ತೂರಮ್ಮ ಹೊಳಗುಂದಿ, ಯು.ಎಂ. ಸುರೇಶ್, ಬಿ.ವಿ ಜಯಣ್ಣ ಮತ್ತಿತರರಿದ್ದರು.

# ಕುಂದುವಾಡ ರಸ್ತೆಯಲ್ಲಿನ ಗಡಿ ಚೌಡೇಶ್ವರಿ ದೇವಸ್ಥಾನದ ವಾರ್ಷಿಕೋತ್ಸವ ಇಂದು

ಕುಂದುವಾಡ ರಸ್ತೆಯಲ್ಲಿರುವ ಶ್ರೀ ಗಡಿ ಚೌಡೇಶ್ವರಿ ದೇವಿ ದೇವಸ್ಥಾನ ಟ್ರಸ್ಟ್ ವತಿಯಿಂದ ಶ್ರೀ ಬನ್ನಿ ಮಹಾಂಕಾಳಿ, ಶ್ರೀ ವಿನಾಯಕ, ಈಶ್ವರ, ಶ್ರೀ ಬಸವೇಶ್ವರ, ಶ್ರೀ ಗಡಿ ಚೌಡೇಶ್ವರಿ ದೇವಿಯ 20 ನೇ ಹಾಗೂ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದ 16 ನೇ ವಾರ್ಷಿಕೋತ್ಸವ ಸಮಾರಂಭವು ಇಂದಿನಿಂದ ಮೂರು ದಿನ ನಡೆಯಲಿದೆ.

ಇಂದು ಬೆಳಿಗ್ಗೆ 6.30 ಕ್ಕೆ ಪಂಚಾಮೃತ ಅಭಿಷೇಕದೊಂದಿಗೆ ಕಾರ್ಯಕ್ರಮಗಳು ಆರಂಭವಾಗಲಿವೆ. ಸಂಜೆ 6ರಿಂದ ಭಜನೆ, ಕೀರ್ತನೆ, 7 ರಿಂದ 9 ರವರೆಗೆ ಪ್ರಸಾದ ವಿನಿಯೋಗವಿರುತ್ತದೆ.

ಫೆ. 1 ರಂದು ಬೆಳಿಗ್ಗೆ 5.30 ಕ್ಕೆ ಕಾಕಡಾರತಿ, ನಂತರ ಭಜನೆ, 8 ಕ್ಕೆ ಉಪಹಾರ, ಮೆರವಣಿಗೆ, 9 ಕ್ಕೆ ಭಜನೆ, ಮಹಾಮಂಗಳಾರತಿ, ಮಧ್ಯಾಹ್ನ 12 ರಿಂದ ಸಂತ ಸಮಾರಾಧನೆಯೊಂದಿಗೆ ಭಕ್ತಾದಿಗಳಿಗೆ ಪ್ರಸಾದ ವಿನಿಯೋಗವಿರುತ್ತದೆ.

# ತ್ರಿವಳಿ ತಲಾಕ್ ನೀಡಿದವರ ವಿರುದ್ಧ ದಾಖಲಿಸಲಾದ ಎಫ್‌ಐಆರ್ ಮಾಹಿತಿ ಕೇಳಿದ ಸುಪ್ರೀಂ

ನವದೆಹಲಿ, ಜ. 29 - ತ್ರಿವಳಿ ತಲಾಕ್ ನಿಷೇಧಿಸಿದ್ದರೂ ಸಹ ಪತ್ನಿಯರಿಗೆ ತ್ರಿವಳಿ ತಲಾಕ್ ನೀಡಿದವರ ವಿರುದ್ಧ ದಾಖಲಿಸಲಾಗಿರುವ ಎಫ್‌ಐಆರ್ ಹಾಗೂ ಆರೋಪ ಪಟ್ಟಿಗಳ ಮಾಹಿತಿ ಸಲ್ಲಿಸುವಂತೆ ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ತಿಳಿಸಿದೆ.

2019ರಲ್ಲಿ ಮುಸ್ಲಿಂ ಮಹಿಳೆಯರ (ವೈವಾಹಿಕ ಹಕ್ಕುಗಳ ರಕ್ಷಣಾ) ಕಾಯ್ದೆಯ ಅನ್ವಯ ತ್ರಿವಳಿ ತಲಾಕ್ ನಿಷೇಧಿಸಲಾಗಿತ್ತು .2019ರ ಕಾಯ್ದೆಯ ಅನ್ವಯ ತ್ರಿವಳಿ ತಲಾಕ್ ಅನ್ನು ಅಪರಾಧಗೊಳಿಸಿದ್ದನ್ನು ಪ್ರಶ್ನಿಸಿ ಹಲವು ಮುಸ್ಲಿಂ ವ್ಯಕ್ತಿಗಳು ಹಾಗೂ ಸಂಘಟನೆಗಳು ಸುಪ್ರೀಂಕೋರ್ಟ್‌ನಲ್ಲಿ 12 ಅರ್ಜಿಗಳನ್ನು ದಾಖಲಿಸಿದ್ದರು.

ಈ ಬಗ್ಗೆ ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಹಾಗೂ ನ್ಯಾಯಮೂರ್ತಿ ಸಂಜಯ್ ಕುಮಾರ್ ಅವರನ್ನು ಒಳಗೊಂಡ ಪೀಠ ವಿಚಾರಣೆ ನಡೆಸುತ್ತಿದೆ.

ತ್ರಿವಳಿ ತಲಾಕ್‌ಗೆ ಸಂಬಂಧಿಸಿದಂತೆ ದಾಖಲಿಸಲಾಗಿರುವ ಎಫ್‌ಐಆರ್ ಹಾಗೂ ಆರೋಪ ಪಟ್ಟಿಗಳ ವಿವರಗಳನ್ನು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಬೇಕು ಎಂದು ಹೇಳಿರುವ ನ್ಯಾಯಾಲಯ, ಈ ಬಗ್ಗೆ ಮಾರ್ಚ್ 17ರಿಂದ ಅಂತಿಮ ವಿಚಾರಣೆ ನಡೆಸುವುದಾಗಿ ತಿಳಿಸಿದೆ.

ತ್ರಿವಳಿ ತಲಾಕ್ ಈಗ ಅಸಿಂಧುವಾಗಿದೆ. ತ್ರಿವಳಿ ತಲಾಕ್ ಕಾರಣದಿಂದ ಮದುವೆ ಮುರಿಯುವುದಿಲ್ಲ. ತ್ರಿವಳಿ ತಲಾಕ್ ನೀಡುವುದನ್ನು ಅಪರಾಧಗೊಳಿಸುವುದಷ್ಟೇ ಈಗಿರುವ ಪ್ರಶ್ನೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ತ್ರಿವಳಿ ತಲಾಕ್ ವಿಚ್ಛೇದನಕ್ಕೆ ಮಾನ್ಯತೆ ಇಲ್ಲ ಎನ್ನುವುದಾದರೆ ಸಂಬಂಧ ಮುಂದುವರಿಯುತ್ತದೆ. ದೇಶದಾದ್ಯಂತ ಈ ಬಗ್ಗೆ ದಾಖಲಿಸಲಾಗಿರುವ ಎಫ್‌ಐಆರ್ ಕುರಿತು ಮಾಹಿತಿ ಸಲ್ಲಿಸಬೇಕು ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಹೇಳಿದ್ದಾರೆ.

# ಮನುಸ್ಮೃತಿ ಸಂವಿಧಾನ ವಿರೋಧಿಸಿ ಇಂದು ನಗರದಲ್ಲಿ ಪ್ರತಿಭಟನೆ

ಮನುಸ್ಮೃತಿ ಸಂವಿಧಾನ ವಿರೋಧಿಸಿ ಇಂದು ಬೆಳಿಗ್ಗೆ 10 ಕ್ಕೆ ನಗರದ ಅಂಬೇಡ್ಕರ್ ವೃತ್ತದಲ್ಲಿ ಜಿಲ್ಲೆಯ ಬಸವ ಪರ, ದಲಿತ ಪರ, ಪ್ರಗತಿ ಪರ ಸಂಘಟನೆಗಳ ಸಹಯೋಗದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ತಾಲ್ಲೂಕು ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಗೋಪನಾಳ್ ರುದ್ರೇಗೌಡ್ರು, ಪ್ರಧಾನ ಕಾರ್ಯದರ್ಶಿ ಹೆಮ್ಮನಬೇತೂರು ಬಿ.ಎಂ. ವಿಶ್ವೇಶ್ವರಯ್ಯ ತಿಳಿಸಿದ್ದಾರೆ.



# ರಸ್ತೆ ಸುರಕ್ಷತೆ ಬಗ್ಗೆ ತಿಳಿದರೆ ಸಾಲದು, ಪಾಲಿಸಬೇಕು

ರಸ್ತೆ ಸುರಕ್ಷತಾ ಮಾಸಾಚರಣೆ ಸಮಾರೋಪ ಸಮಾರಂಭದಲ್ಲಿ ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್

ದಾವಣಗೆರೆ, ಜ.29- ರಸ್ತೆ ಸುರಕ್ಷಾ ನಿಯಮಗಳನ್ನು ಕೇವಲ ತಿಳಿದುಕೊಂಡರೆ ಸಾಲದು, ಪಾಲಿಸಿದಾಗ ಮಾತ್ರ ಅಪಘಾತಗಳನ್ನು ತಪ್ಪಿಸಲು ಸಾಧ್ಯ ಎಂದು ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಹೇಳಿದರು.

ಬುಧವಾರ ಸಂಜೆ ನಗರದ ರೇಣುಕಾ ಮಂದಿರದಲ್ಲಿ ಹಮ್ಮಿಕೊಂಡಿದ್ದ ರಸ್ತೆ ಸುರಕ್ಷತಾ ಮಾಸಾಚರಣೆ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಅವರು ಮಾತನಾಡಿದರು.

ಮದ್ಯ ಸೇವಿಸಿ ವಾಹನ ಚಾಲನೆ ಮಾಡುವುದು, ಅತಿವೇಗದ ಚಾಲನೆ, ವ್ಹೀಲಿಂಗ್ ಮಾಡುವುದು ಸೇರಿದಂತೆ ಅನೇಕ ಬಗೆಯಲ್ಲಿ ಆಗುವ ಅಪಘಾತಗಳಲ್ಲಿ ಸಾವು - ನೋವು ದೊಡ್ಡ ಪ್ರಮಾಣದಲ್ಲಿ ಇರುತ್ತದೆ. ಈ ನೋವು ಜೀವಗಳನ್ನು ಕಳೆದುಕೊಂಡ ಕುಟುಂಬಕ್ಕೆ ಮಾತ್ರ ಗೊತ್ತಿರುತ್ತದೆ. ಹಾಗಾಗಿ ಪ್ರತಿಯೊಬ್ಬರೂ ಸಂಚಾರಿ ನಿಯಮಗಳನ್ನು ಪಾಲಿಸಬೇಕೆಂದು ಮನವಿ ಮಾಡಿದರು.

ಹೆದ್ದಾರಿಗಳಲ್ಲಿ ಸಂಭವಿಸುವ ಅಪಘಾತ ಸಂದರ್ಭದಲ್ಲಿ ಗಾಯಾಳುಗಳಿಗೆ ತುರ್ತು ಚಿಕಿತ್ಸೆ ಅಗತ್ಯವಿರುತ್ತದೆ. ಈ ಹಿನ್ನೆಲೆಯಲ್ಲಿ ಹೆದ್ದಾರಿಗಳಲ್ಲಿ ಟ್ರಾಮಾಕೇರ್ ಸೆಂಟರ್‌ಗಳು, ಸುಸಜ್ಜಿತ ಆಂಬ್ಯೂಲೆನ್ಸ್ ವ್ಯವಸ್ಥೆಯನ್ನು ಸರ್ಕಾರದಿಂದ ಮಾಡಿಕೊಳ್ಳಬೇಕಿದೆ ಎಂದರು.

ಅಪಘಾತದ ಸಂದರ್ಭದಲ್ಲಿ ಗಾಯಾಳುವನ್ನು ಉಳಿಸುವ ಗೋಲ್ಡನ್ ಅವರ್ ಸದ್ಬಳಕೆಯಾದರೆ ಗಾಯಾಳುವನ್ನು ಪ್ರಾಣಾಪಾಯದಿಂದ ಪಾರು ಮಾಡಬಹುದು ಎಂದರು.

ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಜಿ. ಮಂಜುನಾಥ್ ಮಾತನಾಡಿ, ಕಳೆದ 1 ತಿಂಗಳಿಂದ ಸಪ್ತಾಹದ ಅಂಗವಾಗಿ ವಿವಿಧ ಕಾರ್ಯಕ್ರಮಗಳ ಮೂಲಕ ಜನರಿಗೆ ಜಾಗೃತಿ ಮೂಡಿಸಲಾಗಿದೆ. ಕಾರ್ಯಕ್ರಮಕ್ಕೆ ಫಲಶೃತಿ ಸಿಗಬೇಕಾದರೆ ಜನರು ಸ್ವಯಂಪ್ರೇರಣೆಯಿಂದ ಸಾರಿಗೆ ನಿಯಮಗಳನ್ನು ಪಾಲಿಸಿ ಜೀವಹಾನಿ ತಡೆಗೆ ಮುಂದಾಗಬೇಕಿದೆ ಎಂದರು.

ಪೊಲೀಸರು ಕೈಗೊಂಡ ಕ್ರಮಗಳಿಂದಾಗಿ ಜಿಲ್ಲೆಯಲ್ಲಿ ಅಪಘಾತಗಳ ಸಂಖ್ಯೆ ಕಡಿಮೆಯಾಗಿದ್ದು, ಈ ಸಂಖ್ಯೆಯನ್ನು ಶೂನ್ಯಕ್ಕೆ ತರಲು ಸಾರ್ವಜನಿಕರು ಪೊಲೀಸ್ ಇಲಾಖೆಯೊಂದಿಗೆ ಕೈ ಜೋಡಿಸಬೇಕು ಎಂದು ಜಿಲ್ಲಾ ಲಾರಿ ಮಾಲೀಕರ ಸಂಘದ ಅಧ್ಯಕ್ಷ ಸೈಯದ್ ಸೈಫುಲ್ಲಾ ಹೇಳಿದರು.

ಎಸ್ಪಿ ಉಮಾ ಪ್ರಶಾಂತ್ ಮಾತನಾಡಿದರು. ಈ ಸಂದರ್ಭದಲ್ಲಿ ಅಪಘಾತದಲ್ಲಿ ತಮ್ಮ ಕುಟುಂಬದವರನ್ನು ಕಳೆದುಕೊಂಡಿರುವ ಭರತ್ ಮತ್ತು ರಾಘವೇಂದ್ರ ಅನಿಸಿಕೆ ವ್ಯಕ್ತಪಡಿಸಿದರು. ಉತ್ತಮ ಸಂಚಾರ ನಿಯಮ ನಿರ್ವಹಣೆ ತೋರಿದ ಸಾಮಾಜಿಕ ಕಾರ್ಯಕರ್ತ ಎಂ.ಜಿ.ಶ್ರೀಕಾಂತ್ ಹಾಗೂ ಅಪಘಾತ ರಹಿತ ಚಾಲಕರು ಸೇರಿದಂತೆ ಅನೇಕರನ್ನು ಸನ್ಮಾನಿಸಲಾಯಿತು. ಎಜುಏಷಿಯಾ ಶಾಲಾ ಮಕ್ಕಳು ಕಿರು ನಾಟಕ ಪ್ರದರ್ಶಿಸಿದರು.

ಆರ್‌ಟಿಒ ಅಧಿಕಾರಿ ಮಹಮ್ಮದ್ ಖಾಲೀದ್, ಲಾರಿ ಮಾಲಿಕರ ಸಂಘದ ಅಧ್ಯಕ್ಷ ಸೈಫುಲ್ಲಾ, ಸಿಪಿಐ ಮಂಜುನಾಥ್ ನಲವಾಗಲು, ಡಿವೈಎಸ್ಪಿ ಶರಣಬಸವೇಶ್ವರ ಭೀಮರಾವ್, ಪಿಎಸ್‌ಐ ಶೈಲಜಾ, ನಿರ್ಮಲಾ, ಜಶೀಲ, ಮಂಜಪ್ಪ ಇತರರು ಈ ಸಂದರ್ಭದಲ್ಲಿದ್ದರು.

# ಡಿಕೆಶಿ ಪ್ರಕರಣದಲ್ಲಿ ಯತ್ನಾಳ್ ಮನವಿ ಪ್ರಶ್ನಿಸಿದ ಸುಪ್ರೀಂ ಕೋರ್ಟ್

ನವದೆಹಲಿ, ಜ. 29 - ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ವಿರುದ್ಧದ ಅಕ್ರಮ ಆಸ್ತಿ ಪ್ರಕರಣದ ಸಿಬಿಐ ತನಿಖೆಗೆ ನೀಡಲಾಗಿದ್ದ ಅನುಮತಿಯನ್ನು ವಾಪಸ್ ಪಡೆದಿರುವುದರ ವಿರುದ್ಧ ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅರ್ಜಿ ದಾಖಲಿಸಿರುವುದನ್ನು ಸುಪ್ರೀಂ ಕೋರ್ಟ್ ಪ್ರಶ್ನಿಸಿದೆ.

ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಹಾಗೂ ಎನ್. ಕೋಟೇಶ್ವರ ಸಿಂಗ್ ಅವರನ್ನು ಒಳಗೊಂಡ ಪೀಠ ಈ ಬಗ್ಗೆ ಶಾಸಕರನ್ನು ಪ್ರಶ್ನಿಸಿದ್ದು, ನೀವು ಏಕೆ ಇಲ್ಲಿದ್ದೀರಾ? ರಾಜಕೀಯ ಲಾಭ ಪಡೆಯಲು ಬಂದಿದ್ದೀರಾ? ಎಂದು ಪ್ರಶ್ನಿಸಿತು.

ರಾಜ್ಯ ಸರ್ಕಾರ ಈ ವಿಷಯದಲ್ಲಿ ಇನ್ನೂ ತನ್ನ ಪ್ರಮಾಣ ಪತ್ರ ಸಲ್ಲಿಸಬೇಕಿದೆ. ಸಿಬಿಐ ಸಹ ಮನವಿ ಸಲ್ಲಿಸಿದೆ. ಇದು ರಾಜಕೀಯ ವಿಷಯವಲ್ಲ ಎಂದು ಯತ್ನಾಳ್ ಪರವಾಗಿ ಹಾಜರಿದ್ದ ಹಿರಿಯ ವಕೀಲ ಕೆ.ಪರಮೇಶ್ವರ್ ಹೇಳಿದರು.

ಅಕ್ರಮ ಆಸ್ತಿ ಪ್ರಕರಣದಲ್ಲಿ ರಾಜ್ಯ ಸರ್ಕಾರ ಸಿಬಿಐ ತನಿಖೆಗೆ ನೀಡಿದ್ದ ಅನುಮತಿಯನ್ನು ವಾಪಸ್ ಪಡೆದಿದೆ. ಶಿವಕುಮಾರ್ ಈಗ ರಾಜ್ಯದ ಉಪಮುಖ್ಯಮಂತ್ರಿಯಾಗಿದ್ದಾರೆ. ಈ ರೀತಿ ಅನುಮತಿ ವಾಪಸ್ ಪಡೆಯಬಾರದಿತ್ತು ಎಂದು ವಕೀಲರು ಹೇಳಿದರು. ನಂತರ ನ್ಯಾಯಾಲಯ ಪ್ರಕರಣದ ವಿಚಾರಣೆಯನ್ನು ಮುಂದೂಡಿದೆ.

# ಉಡಾವಣೆಯಲ್ಲಿ ಶತಕ ಭಾರಿಸಿದ 'ಇಸ್ರೋ'



ಆಧುನಿಕ ದಿಕ್ಸೂಚಿ ಉಪಗ್ರಹ ಕಕ್ಷೆಗೆ ಸೇರಿಸುವಲ್ಲಿ ಯಶಸ್ಸು

ಶ್ರೀಹರಿಕೋಟ,ಜ. 29 - ಭಾರತೀಯ ಬಾಹ್ಯಾಕಾಶ ಸಂಸ್ಥೆಯಾದ ಇಸ್ರೋ ತನ್ನ 100ನೇ ಉಡಾವಣೆ ನಡೆಸಿದ್ದು, ಇದರಲ್ಲಿ ದಿಕ್ಸೂಚಿ ಉಪ ಗ್ರಹವನ್ನು ಕಕ್ಷೆಗೆ ಸೇರಿಸುವಲ್ಲಿ ಯಶಸ್ವಿಯಾಗಿದೆ.

ಇಸ್ರೋದ ನೂತನ ಅಧ್ಯಕ್ಷ ವಿ. ನಾರಾಯಣನ್ ಅವರ ನೇತೃತ್ವದಲ್ಲಿ ನಡೆದ ಮೊದಲ ಉಡಾವಣೆ ಇದಾಗಿದೆ. ಕಳೆದ ಜನವರಿ 16ರಂದು ನಾರಾಯಣನ್ ಇಸ್ರೋ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡಿದ್ದರು. 2025ರಲ್ಲಿ ಇದು ಮೊದಲ ಉಡಾವಣೆ ಸಹ ಆಗಿದೆ.

2025ರಲ್ಲಿ ಇಸ್ರೋದ ಮೊದಲ ಉಡಾವಣೆ ಯಶಸ್ವಿಯಾಗಿದೆ ಎಂದು ತಿಳಿಸಲು ಹರ್ಷವಾಗುತ್ತಿದೆ ಎಂದು ನಾರಾಯಣನ್ ಹೇಳಿದ್ದಾರೆ. ಉಪಗ್ರಹವನ್ನು ನಿಯೋಜಿತ ಕಕ್ಷೆಗೆ ಸೇರಿಸಲಾಗಿದೆ. ಇಸ್ರೋ ನೂರನೇ ಉಡಾವಣೆ ಮಾಡಿರುವುದು ಮಹತ್ವದ ಮೈಲಿಗಲ್ಲು ಎಂದವರು ತಿಳಿಸಿದ್ದಾರೆ.

ಉಡಾವಣೆ ನಂತರ ಎಲ್ಲಾ ಮಾಹಿತಿಗಳು ದೊರೆತಿವೆ. ಉಪಗ್ರಹ ವ್ಯವಸ್ಥೆಗಳು ಸಾಮಾನ್ಯವಾಗಿ ಕಾರ್ಯನಿರ್ವಹಿಸುತ್ತಿವೆ ಎಂದವರು ಹೇಳಿದ್ದಾರೆ.

ಬುಧವಾರ ಬೆಳಗ್ಗೆ 6.23ರ ಸಮಯದಲ್ಲಿ ಜಿಎ ಸ್‌ಎಲ್‌ವಿ ರಾಕೆಟ್ ಮೂಲಕ ಉಡಾವಣೆ ನೆರವೇ ರಿಸಲಾಯಿತು. ಸುಮಾರು 19 ನಿಮಿಷಗಳ ಉಡಾವಣೆ ನಂತರ ಎನ್‌ವಿಎಸ್ - 2 ಉಪಗ್ರಹ ತನ್ನ ಕಕ್ಷೆಗೆ ಸೇರಿತು. ಭಾರತೀಯ ಉಪಖಂಡ ಹಾಗೂ 1500 ಕಿಲೋಮೀಟರ್‌ಗಳ ಆಚೆಯವರೆಗೆ ದಿಕ್ಸೂಚಿ ಸೇವೆಯನ್ನು ಒದಗಿಸಲು ಈ ಉಪಗ್ರಹ ನೆರವಾಗಲಿದೆ.

ನಾವಿಕ್ ಹೆಸರಿನ ದಿಕ್ಸೂಚಿ ವ್ಯವಸ್ಥೆ ಹೊಂದಲು ಉದ್ದೇಶಿಸಲಾಗಿದೆ. ಈ ಗುರಿಯೊಂದಿಗೆ ಉಡಾವಣೆ ಮಾಡಲಾದ ಎರಡನೇ ರಾಕೆಟ್ ಇದಾಗಿದೆ.

2023ರ ಮೇ 29ರಂದು ಎನ್‌ವಿಎಸ್‌ನ ಮೊದಲ ದಿಕ್ಸೂಚಿ ಉಪಗ್ರಹ ಉಡಾವಣೆ ಮಾಡಲಾಗಿತ್ತು.

ಬೆಂಗಳೂರಿನ ಯು.ಆರ್. ರಾವ್ ಉಪಗ್ರಹ ಕೇಂದ್ರದಲ್ಲಿ ಎನ್‌ವಿಎಸ್ -2 ಉಪಗ್ರಹ ರೂಪಿಸಲಾಗಿತ್ತು. ಇದು 2,250 ಕೆಜಿ ತೂಕ ಹೊಂದಿದೆ.

1979ರ ಆಗಸ್ಟ್ ಹತ್ತರಂದು ಇಸ್ರೋ ತನ್ನ ಮೊದಲ ಉಪಗ್ರಹ ಉಡಾವಣೆ ಮಾಡಿತ್ತು. ಆನಂತರದ ನೂರು ಉಡಾವಣೆಗಳಲ್ಲಿ 548 ಉಪಗ್ರಹಗಳನ್ನು ಕಕ್ಷೆಗೆ ಸೇರಿಸಲಾಗಿದೆ.

ಇದರಲ್ಲಿ ಹಲವು ವಿದೇಶಿ ಉಪಗ್ರಹಗಳೂ ಸಹ ಸೇರಿವೆ. ಮೂರು ಚಂದ್ರಯಾನ, ಮಂಗಳಯಾನ ಸಹ ಈ ಉಡಾವಣೆಗಳಲ್ಲಿ ಸೇರಿವೆ.


ಜನ್ಮ ದಿನದ ಶುಭಾಶಯಗಳು...



ದಿ|| ಜಗಳೂರು ಮಹಾಲಿಂಗಪ್ಪ ದಿ|| ಬಸಮ್ಮನವರ ಮರಿಮೊಮ್ಮಗ
ಶ್ರೀ ಬಸವರಾಜಪ್ಪ ದಿ|| ಚನ್ನವೀರಮ್ಮನವರ ಮೊಮ್ಮಗ
ಶ್ರೀ ರುದ್ರಮುನಿ ಜಗಳೂರು ಶ್ರೀಮತಿ ದ್ರಾಕ್ಷಾಯಣಮ್ಮ
ಇವರ ಜೇಷ್ಠ ಪುತ್ರ, ಜಗಳೂರು.

ರೈಸ್‌ಮಿಲ್ ಮಾಲೀಕರಾದ
ಶ್ರೀ ಆರ್. ಆದರ್ಶ ಜಗಳೂರು
ತಮ್ಮ 30ನೇ ವರ್ಷದ ಹುಟ್ಟುಹಬ್ಬವನ್ನು ಆಚರಿಸಿಕೊಳ್ಳುತ್ತಿರುವ
ಇವರಿಗೆ ಶುಭ ಕೋರುವವರು...

- ಕೆ.ಎಲ್.ಪಿ. ಟ್ರೇಡರ್ಸ್
- ಕಾವೇರಿ ಎಂಟರ್‌ಪ್ರೈಸಸ್
- ನಂದಿ ಕಮರ್ಷಿಯಲ್ಸ್
- ಮಾರುತಿ ಎಂಟರ್‌ಪ್ರೈಸಸ್
- ಹೇಮ ಟ್ರೇಡರ್ಸ್
- ವಿಶ್ವಬಂಧು ಅಂಡ್ ಕೋ
- ಶ್ರೀ ವೇಲ್ ಗ್ರೂಪ್ಸ್
- ಎನ್.ಆರ್. ಟ್ರೇಡರ್ಸ್
- ಶ್ರೀ ಮರುಳಸಿದ್ದೇಶ್ವರ ಅಂಡ್ ಕೋ
- ಎಂ.ವಿ. ಜಯಪ್ರಕಾಶ್ (ರೈಸ್ ಕಾರ್ನರ್)
- ಅಧಿಕಾರಿ ಬಸವರಾಜಪ್ಪ ಅಂಡ್ ಸನ್ಸ್
- ಕಟಗಿಹಳ್ಳಿ ಈರಣ್ಣ
- ಕಂಚಿಕೆರೆ ರುದ್ರೇಶ್
- ಬಿಜಾಪುರ ಸಿದ್ದಲಿಂಗೇಶ್
- ಗುಡಾಳ್ ಸಿದ್ದೇಶ್
- ಮಾಳಗಿ ಷಣ್ಮುಖ್
- ಅಣ್ಣಪ್ಪ ಸ್ವಾಮಿ ಎಸ್.ಜಿ.
- ಪರಶುರಾಮ ಪಿ.ಎಸ್.
- ಬಸವರಾಜ ಎಸ್.
- ಸಿದ್ದೇಶ್ ಕೊಳಹಾಳ್
- ಚಿದಾನಂದ ಕೆ.ಕೆ.
- ಶಿವಕುಮಾರ್ ಎನ್.
- ಟಿ.ಎಸ್. ಶಶಿಧರ್

ಅಕ್ಕಿ ಅಂಗಡಿ ಮಾಲೀಕರು ಮತ್ತು ಅಕ್ಕಿ ಕಮೀಷನ್ ಏಜೆಂಟರುಗಳು

# ‘ಕುಷ್ಠರೋಗ ಮುಕ್ತ ಜಗತ್ತಿಗೆ ಒಂದಾಗೋಣ’

ಪ್ರತಿ ವರ್ಷ, ಜನವರಿ 30 ರಂದು, ‘ವಿಶ್ವ ಕುಷ್ಠರೋಗ ದಿನ’ ಅಥವಾ ‘ಕುಷ್ಠರೋಗ ನಿರ್ಮೂಲನಾ ದಿನ’ವನ್ನು ವಿಶಿಷ್ಟ ಧ್ಯೇಯದೊಂದಿಗೆ ಆಚರಿಸಲಾಗುತ್ತದೆ. 2025 ರ ವಿಶ್ವ ಕುಷ್ಠರೋಗ ದಿನದ ಧ್ಯೇಯ ‘ಒಗ್ಗೂಡಿಸಿ, ಕಾರ್ಯಪ್ರವೃತ್ತರಾಗಿ, ನಿರ್ಮೂಲನೆ ಮಾಡಿ (Unite. Act. Eliminate)’. ಈ ಥೀಮ್ ಕುಷ್ಠರೋಗದ ಬಗ್ಗೆ ಜಾಗೃತಿ ಮೂಡಿಸುವುದು, ಕುಷ್ಠರೋಗದಿಂದ ಬಳಲುತ್ತಿರುವ ವ್ಯಕ್ತಿಗಳು ಎದುರಿಸುತ್ತಿರುವ ಸವಾಲುಗಳನ್ನು ಎತ್ತಿ ತೋರಿಸುವುದು ಮತ್ತು ಕುಷ್ಠ ರೋಗವನ್ನು ತೊಡೆದುಹಾಕಲು ಸಹಯೋಗದ ಗುರಿಯನ್ನು ಹೊಂದಿರುವ ಕ್ರಿಯೆಗೆ ಕರೆಯಾಗಿದೆ.

ಕುಷ್ಠ ರೋಗವು ಮಾನವಕುಲಕ್ಕೆ ತಿಳಿದಿರುವ ಅತ್ಯಂತ ಹಳೆಯ ಕಾಯಿಲೆಯಾಗಿದೆ. ಇದೊಂದು ದೀರ್ಘಕಾಲದ ರೋಗವಾಗಿದ್ದು, ಮೈಕೋಬ್ಯಾಕ್ಟೀರಿಯಂ ಲೆಪ್ರೆ ಎಂಬ ಬ್ಯಾಕ್ಟೀರಿಯಾದಿಂದ ಉಂಟಾಗುತ್ತದೆ. ರೋಗವು ಚರ್ಮ, ಬಾಹ್ಯ ನರಗಳು, ಮೇಲ್ಭಾಗದ ಶ್ವಾಸೇಂದ್ರಿಯ ಪ್ರದೇಶದ ಲೋಳೆಪೊರೆ ಮತ್ತು ಕಣ್ಣುಗಳ ಮೇಲೆ ಪರಿಣಾಮ ಬೀರುತ್ತದೆ. ಕುಷ್ಠರೋಗವನ್ನು ಗುಣಪಡಿಸಬಹುದಾಗಿದೆ ಮತ್ತು ಆರಂಭಿಕ ಹಂತಗಳಲ್ಲಿ ಚಿಕಿತ್ಸೆಯು ಅಂಗವೈಕಲ್ಯವನ್ನು ತಡೆಯಬಹುದು.

ಕುಷ್ಠ ರೋಗ ನಿಯಂತ್ರಣದಲ್ಲಿ ಭಾರತವು ಮಹತ್ವದ ಪ್ರಗತಿ ತೋರಿದರೂ, ಪ್ರತಿ ವರ್ಷ 60% ಹೊಸ ಪ್ರಕರಣಗಳು ಭಾರತದಿಂದ ವರದಿ ಆಗುತ್ತವೆ ಎಂಬುದು ಚಿಂತಾಜನಕವಾಗಿದೆ. ಈ ಅಂಕಿಗಳನ್ನು ತಗ್ಗಿಸಲು, ಪ್ರಕರಣಗಳನ್ನು ಶೀಘ್ರ ಪತ್ತೆಮಾಡಿ, ಸಮರ್ಪಕ ಔಷಧಿಗಳಿಂದ ಪೂರ್ಣ ಚಿಕಿತ್ಸೆ ನೀಡುವುದು ಅನಿವಾರ್ಯವಾಗಿದೆ.

**ಕುಷ್ಠ ರೋಗ ಹೇಗೆ ಹರಡುತ್ತದೆ? :** ಕುಷ್ಠರೋಗಿ ಕೆಮ್ಮಿದಾಗ, ಸೀನಿದಾಗ, ಮೂಗು ಮತ್ತು ಬಾಯಿಯಿಂದ ಹೊರಬರುವ ಹನಿಗಳ ಮೂಲಕ ಹರಡುವುದು ಎಂದು ಗುರುತಿಸಲಾಗಿದೆ. ರೋಗವು ಹರಡಲು ಬಾರ್ಡರ್ ಲೈನ್-, ಬಾರ್ಡರ್ ಲೈನ್ ಲೆಪ್ರೊಮ್ಯಾಟಸ್, ಲೆಪ್ರೊಮ್ಯಾಟಸ್ ವಿಧದ ಕುಷ್ಠ ರೋಗಿಯೊಂದಿಗೆ ದೀರ್ಘಾವಧಿಯ ನಿಕಟ ಸಂಪರ್ಕ. ಟುಬರ್ಕ್ಯುಲಾಯ್ಡ್, ಬಾರ್ಡರ್ ಲೈನ್ ಟುಬರ್ಕ್ಯುಲಾಯ್ಡ್ ವಿಧದ ಕುಷ್ಠರೋಗಿಗಳಲ್ಲಿ ಬ್ಯಾಕ್ಟೀರಿಯಾದ ಸಂಖ್ಯೆ ಕಡಿಮೆ ಇರುವುದರಿಂದ ಇತರರಿಗೆ ಸೋಂಕು ಹರಡುವುದಿಲ್ಲ

**ಕುಷ್ಠ ರೋಗದ ಲಕ್ಷಣಗಳು ಇಂತಿವೆ -**

☛ ಚರ್ಮದ ಮೇಲೆ ತಿಳಿ-ಬಿಳಿ, ತಾಮ್ರವರ್ಣದ ಮಚ್ಚೆಗಳಿಗೆ ಸ್ಪರ್ಶ ಜ್ಞಾನವಿರುವುದಿಲ್ಲ.

☛ ಕೈ ಮತ್ತು ಕಾಲುಗಳು ಜೋಮು ಹಿಡಿಯುವುದು.

☛ ಕೈ ಮತ್ತು ಕಾಲುಗಳಲ್ಲಿ ಸ್ಪರ್ಶ ಇಲ್ಲದಿರುವುದರಿಂದ ಗಾಯಗಳು ಆಗುವುದು, ಬಿಸಿ ಮತ್ತು ತಣ್ಣನೆಯ ವ್ಯತಾಸ ಗೊತ್ತಾಗದೇ ಇರುವುದರಿಂದ ಸುಟ್ಟ ಗಾಯಗಳು ಆಗಬಹುದು.



**ಇಂದು ಕೃಷ್ಠರೋಗ ನಿರ್ಮೂಲನಾ ದಿನ**

☛ ಕಾಲಿಂದ ಚಪ್ಪಲಿ ಪದೇ ಪದೇ ಜಾರುವುದು ಮತ್ತು ನರಗಳಲ್ಲಿ ನೋವು ಬರುವುದು ಉಂಟು.

☛ ಹೊಳಪಿನಿಂದ ಕೂಡಿದ ದಪ್ಪನಾದ ಚರ್ಮ ಮತ್ತು ಚರ್ಮದ ಮೇಲೆ ಸಣ್ಣ ಗಂಟುಗಳು ಮೂಡಬಹುದು. ಇವುಗಳು ಪ್ರಮುಖವಾಗಿ ಕಿವಿಯ ಹಾಲೆ, ಮುಖ ಮತ್ತು ಕೈ ಕಾಲುಗಳ ಮೇಲೆ ಕಾಣಬಹುದು..

☛ ಕೈ , ಪಾದ ಮತ್ತು ಕಣ್ಣುಗಳಲ್ಲಿ ಬಲಹೀನತೆ, ಅಂಗೈ-ಅಂಗಾಲುಗಳಲ್ಲಿ ಹುಣ್ಣು ಕಾಣಿಸಿಕೊಳ್ಳುತ್ತವೆ.

☛ ರೋಗದ ಪ್ರತಿಕ್ರಿಯೆ(lepra reaction) ಎಂದರೆ ಕೆಲವು ರೋಗಿಗಳಲ್ಲಿ ಮಚ್ಚೆಗಳು ಇದ್ದಕ್ಕಿದ್ದಂತೆ ಕೆಂಪಾಗಿ,ಬಾವು ಬರುವುದು ಮತ್ತು ನೋವು ಬರುವುದು , ಕೈ ಕಾಲುಗಳಲ್ಲಿ ಕೆಲವು ನರಗಳು ಊತ ಮತ್ತು ನೋವು ಬರುವುದು ಮುಂತಾದವುಗಳನ್ನು ಕಾಣಬಹದು.

**ಕುಷ್ಠರೋಗಕ್ಕೆ ಸಂಬಂಧಿಸಿದ ಮಿಥ್ಯಗಳು**

☛ ಕುಷ್ಟರೋಗಿಯು ತಾನು ಮಾಡಿದ ಪಾಪದ ಫಲವಾಗಿ ದೇವತೆಗಳು ನನಗೆ ನೀಡಿದ ಶಿಕ್ಷೆ ಎಂದು ಭಾವಿಸುತ್ತಾರೆ: ವಾಸ್ತವದಲ್ಲಿ ಕುಷ್ಠರೋಗವು ಕೇವಲ ಒಂದು ಸಾಂಕ್ರಾಮಿಕ ರೋಗವಾಗಿದೆ.

☛ ಹಳ್ಳಿಗಳಲ್ಲಿ ಕುಷ್ಠರೋಗಿಗಳನ್ನು ಅಸ್ಪೃಶ್ಯರೆಂದು ನಂಬಿ, ಅವರೊಡನೆ ಸಂಪರ್ಕ ಹೊಂದಿದರೆ ಅಶುಭವಾಗುತ್ತದೆ ಎಂಬ ನಂಬಿಕೆಗಳು ಪ್ರಚಲಿತದಲ್ಲಿದೆ.

☛ ಪಾರಂಪರಿಕ ಚಿಕಿತ್ಸಾ ವಿಧಾನಗಳು: ಹಳ್ಳಿಗಳಲ್ಲಿ ಕುಷ್ಠರೋಗಿಗಳನ್ನು ಪಾರಂಪರಿಕ ಔಷಧಿಗಳಿಂದ ಚಿಕಿತ್ಸೆ ಮಾಡುವುದು ಸಾಮಾನ್ಯ. ಆದರೆ ಈ ವಿಧಾನಗಳು ಪ್ರಭಾವಶಾಲಿ ಆಧುನಿಕ ಚಿಕಿತ್ಸೆಗಳಲ್ಲಿ ಸಾಬೀತಾಗಿಲ್ಲ.

☛ ರೋಗಿಯ ಕೈಕುಲುಕುವುದು, ತಬ್ಬಿಕೊಳ್ಳುವುದು, ಊಟವನ್ನು ಹಂಚಿಕೊಳ್ಳುವುದು ಅಥವಾ ಪರಸ್ಪರ ಪಕ್ಕದಲ್ಲಿ ಕುಳಿತುಕೊಳ್ಳುವುದರಿಂದ ಕುಷ್ಠರೋಗವು ಹರಡುವುದಿಲ್ಲ.

ಈ ಮೂಢನಂಬಿಕೆಗಳು ಅತ್ಯಂತ ಅವಮಾನಜನಕವಾದವುಗಳು ಮತ್ತು ಅನುಭವಿಸಲು ವಿಶೇಷ ಸಹನೆಯ ಅಗತ್ಯವಿದೆ. ಜನರಲ್ಲಿ ಇಂತಹ ಮೂಢನಂಬಿಕೆಗಳನ್ನು ಹೋಗಲಾಡಿಸಿ, ಸಂಪೂರ್ಣ ಚಿಕಿತ್ಸೆ ಪಡೆಯುವುದರ ಬಗ್ಗೆ ಅರಿವು ಮೂಡಿಸುವುದು ಈ ಲೇಖನದ ಮುಖ್ಯ ಉದ್ದೇಶವಾಗಿದೆ.

**ರೋಗಿಯು ಪಾಲಿಸಬೇಕಾದ ಕೆಲವು ಕ್ರಮಗಳು ಇಂತಿವೆ**

☛ ನಿಯಮಿತವಾಗಿ ಎಂ .ಡಿ.ಟಿ(MDT) ಔಷಧಿ ಪಡೆಯುವುದು. ಎಂ .ಡಿ.ಟಿ(MDT)ಎಂದರೆ ಮೂರು ಬಗೆಯ ಔಷಧಿಗಳೆಂದರೆ ಕ್ಲೋಫಾಜಿಮೈನ್(clofazamine) ಮತ್ತು ರಿಫಾಂಪಿಸಿನ್(Rifampicin),ಡ್ಯಾಪ್ಸೋನ್(Dapsone) ಒಳಗೊಂಡ ಚಿಕಿತ್ಸೆ ಪರಿಣಾಮಕಾರಿ ಯಾಗಿದೆ.

☛ ದಿನನಿತ್ಯ ಪಾದ ಮತ್ತು ಕೈಗಳಲ್ಲಿ ಹೊಸ ಗಾಯಗಳನ್ನು ಪರೀಕ್ಷಸಿಕೊಳ್ಳಿ.(ದಿನಕ್ಕೆ ಕನಿಷ್ಠ 2 ಬಾರಿ)

☛ ಸ್ನಾನ ಮಾಡಿದ ಬಳಿಕ ಒಣ ತ್ವಚೆಯ ಮೇಲೆ ಮೋಸ್ಟ್ ರೈಸಿಂಗ್ ಮಾಯಿಶ್ಚರೈಸಿಂಗ್ ಕ್ರೀಮ್ ಅಥವಾ ಲೋಷನ್ (moisturizing cream or lotion) ಹಚ್ಚಬೇಕು.

☛ ಸ್ಪರ್ಶವಿಲ್ಲದ ಪಾದಗಳನ್ನು ಗಾಯವಾಗದಂತೆ ತಡೆಯಲು ಎಂ. ಸಿ. ಆರ್ (MCR) ಚಪ್ಪಲಿ ಬಳಸಬೇಕು.

☛ ಕೈಗಳಲ್ಲಿ ಸ್ಪರ್ಶವಿಲ್ಲದಿದ್ದರೆ ಬರಿಗೈಯಲ್ಲಿ ಬಿಸಿ ವಸ್ತು ಮುಟ್ಟಬಾರದು.

☛ ನಿಯಮಿತವಾಗಿ ವ್ಯಾಯಾಮ ಮತ್ತು ಫಿಸಿಯೋಥೆರಪಿ ಮಾಡಬೇಕು.

☛ ವೈದ್ಯರ ಸಲಹೆ ಮೇರೆಗೆ ಮಾತ್ರ ಮಾತ್ರೆ ನಿಲ್ಲಿಸಬೇಕು.

☛ ಎಂಡಿಟಿ ಮಾತ್ರೆಯಿಂದ ಏನಾದರು ತೊಂದರೆ ಆದರೆ ತಕ್ಷಣ ವೈದ್ಯರನ್ನು ಸಂಪರ್ಕಿಸಿ.

ಕುಷ್ಠರೋಗದ ಯಾವುದೇ ಲಕ್ಷಣಗಳು ಕಂಡುಬಂದರೆ, ತಕ್ಷಣವೇ ಚರ್ಮ ತಜ್ಞರನ್ನು ಸಂಪರ್ಕಿಸಿ. ಅವರು ರೋಗನಿರ್ಣಯ ಮಾಡಿ, ಸರಿಯಾದ ಚಿಕಿತ್ಸೆ ಮತ್ತು ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತ ಔಷಧಿಗಳ ಕುರಿತು ಮಾರ್ಗದರ್ಶನ ನೀಡುತ್ತಾರೆ. "ಕುಷ್ಠರೋಗಕ್ಕೆ ಉಚಿತ ಚಿಕಿತ್ಸೆ ಲಭ್ಯವಿದೆ - ಚಿಕಿತ್ಸೆ ವಿಳಂಬ ಮಾಡದಿರಿ."

**- ಡಾ।। ಸೂಗಾರೆಡ್ಡಿ,**
**ಡಾ।। ಯಶ್ವಂತ್ ಕಿರಣ್ ಎಸ್.**, ದಾವಣಗೆರೆ.

# ಮುಡಾ ಮಾಜಿ ಆಯುಕ್ತರ ಮನೆ ಮೇಲಿನ ಇ.ಡಿ. ದಾಳಿ ಅಕ್ರಮ : ಹೈಕೋರ್ಟ್

ಬೆಂಗಳೂರು, ಜ. 29 - ಮುಡಾ ಮಾಜಿ ಆಯುಕ್ತರ ಮನೆ ಮೇಲೆ ಜಾರಿ ನಿರ್ದೇಶನಾಲಯ ದಾಳಿ ನಡೆಸಿದ್ದು ಹಾಗೂ ವಶಪಡಿಸಿಕೊಂಡಿರುವುದು ಅಕ್ರಮ ಎಂದು ಕರ್ನಾಟಕ ಹೈಕೋರ್ಟ್ ಆದೇಶಿಸಿದೆ.

ಈ ದಾಳಿಯಲ್ಲಿ ಭಾಗಿಯಾದವರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಲು ಅಧಿಕಾರಿಗೆ ಹಕ್ಕಿದೆ ಎಂದು ಹೈಕೋರ್ಟ್ ತಿಳಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಅವರಿಗೆ ಅಕ್ರಮವಾಗಿ ನಿವೇಶನಗಳನ್ನು ಮಂಜೂರು ಮಾಡಲಾಗಿದೆ ಎಂಬ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ ದಾಳಿ ನಡೆಸಿತ್ತು.

ಜಾರಿ ನಿರ್ದೇಶನಾಲಯವು ತನ್ನ ತನಿಖೆಯಲ್ಲಿ ನ್ಯಾಯಪರತೆಯನ್ನು ಎತ್ತಿ ಹಿಡಿಯಬೇಕು. ಅಕ್ರಮ ಹಣ ತಡೆಯುವಲ್ಲಿ ಈ ಸಂಸ್ಥೆ ಪ್ರಮುಖ ಪಾತ್ರ ಹೊಂದಿದೆ ಎಂದು ನ್ಯಾಯಮೂರ್ತಿ ಹೇಮಂತ್ ಚಂದ್ರ ಗೌಡ ತೀರ್ಪಿನಲ್ಲಿ ಹೇಳಿದ್ದಾರೆ.

ನಿರಂಕುಶವಾಗಿ ದಾಳಿ ಮಾಡುವ ಮೂಲಕ ಸಂವಿಧಾನದ 21ನೇ ವಿಧಿಯಲ್ಲಿ ನೀಡಲಾಗಿರುವ ಸ್ವಾತಂತ್ರ್ಯ ಹಾಗೂ ಖಾಸಗಿತನದ ಹಕ್ಕನ್ನು ಉಲ್ಲಂಘಿಸಲಾಗಿದೆ. ದಾಳಿ ನಡೆಸಲು ಜಾರಿ ನಿರ್ದೇಶನಾಲಯಕ್ಕೆ ಮೇಲ್ನೋಟಕ್ಕೆ ಕಂಡುಬರುವ ಯಾವುದೇ ಸಾಕ್ಷಿಗಳು ಇರಲಿಲ್ಲ ಎಂದು ಹೈಕೋರ್ಟ್ ಹೇಳಿದೆ.

ಮುಡಾ ಮಾಜಿ ಆಯುಕ್ತ ಡಿ.ಬಿ. ನಟೇಶ್ ಅವರು ಸಲ್ಲಿಸಿದ್ದ ಮನವಿಗೆ ಪರಿಹಾರ ನೀಡಿರುವ ನ್ಯಾಯಾಲಯ ಈ ಆದೇಶ ಹೊರಡಿಸಿದೆ.

ಮುಡಾದಲ್ಲಿ ನಡೆದಿದೆ ಎನ್ನಲಾದ ಅಕ್ರಮದಲ್ಲಿ ನಟೇಶ್ ಅವರು ಹಣಕಾಸು ಲಾಭ ಪಡೆದಿದ್ದಾರೆ ಎಂಬುದಕ್ಕೆ ಯಾವುದೇ ಸಾಕ್ಷಿಗಳು ಇಲ್ಲ ಎಂದು ಹೈಕೋರ್ಟ್ ಹೇಳಿದೆ.

ಅಕ್ರಮವಾಗಿ ನೀಡಲಾದ ನಿವೇಶನವನ್ನು ಹೊಂದಲಾಗಿದೆ ಎಂದ ಮಾತ್ರಕ್ಕೆ ಅದು ಅಕ್ರಮ ಹಣ ಕಾಯ್ದೆಯ ವ್ಯಾಪ್ತಿಗೆ ಬರುವುದಿಲ್ಲ ಎಂದು ನ್ಯಾಯಾಲಯ ತಿಳಿಸಿದೆ.

# ಕೌಶಲ್ಯ, ಸಾಮಾಜಿಕ ಸೇವೆ ತರಬೇತಿಗೆ ಒತ್ತು

**(1ನೇ ಪುಟದಿಂದ)** ವಿದ್ಯಾರ್ಥಿಗಳನ್ನು ಗುರುತಿಸಿ ತರಬೇತಿ ನೀಡಲು ಉದ್ದೇಶಿಸಲಾಗಿದೆ. ಇದಕ್ಕಾಗಿ ನಗರದ ದೃಶ್ಯ ಕಲಾ ಮಹಾ ವಿದ್ಯಾಲಯದಲ್ಲಿ ಮೂಲ ಸೌಕರ್ಯಗಳನ್ನು ಕಲ್ಪಿಸಲಾಗುತ್ತಿದೆ ಎಂದು ತಿಳಿಸಿದರು.

ಬರುವ ಮಾರ್ಚ್ ತಿಂಗಳಲ್ಲಿ ಕ್ಯೂ ಸ್ಪೈಡರ್ ಕಂಪನಿಯವರಿಂದ ಜಿಲ್ಲೆಯ ಮಕ್ಕಳಿಗಾಗಿ ನಗರದಲ್ಲಿ ಉಚಿತ ತರಬೇತಿ ಕೊಡಿಸಲಾಗುವುದು. ಬೆಂಗಳೂರಿನಲ್ಲಿ ಕ್ಯೂ ಸ್ಪೈಡರ್ ಕಂಪನಿಯಿಂದ ತರಬೇತಿ ಪಡೆಯಬೇಕಾದರೆ ಕನಿಷ್ಟ 40 ಸಾವಿರ ರೂ. ಶುಲ್ಕ ನೀಡಬೇಕು ಹಾಗೂ ವಸತಿಗೆ ಹಣ ವ್ಯಯಿಸಬೇಕಾಗುತ್ತದೆ. ಆದರೆ ದಾವಣಗೆರೆಯಲ್ಲಿ ಸಂಪೂರ್ಣ ಉಚಿತವಾಗಿ ತರಬೇತಿ ನೀಡಲಾಗುವುದು. ಆಸಕ್ತರು ಭಾಗವಹಿಸಿ ಎಂದು ಕರೆ ನೀಡಿದರು.

ಇಂದಿನಿಂದಲೇ ತನ್ನ ಜವಾಬ್ದಾರಿಗೆ ಆದ್ಯತೆ ನೀಡುತ್ತೇನೆ. ಉತ್ತಮ ಹವ್ಯಾಸಗಳನ್ನು ಮೈಗೂಡಿಸಿಕೊಳ್ಳತ್ತೇನೆ ಎಂದು ಸಂಕಲ್ಪ ಮಾಡಿರಿ. ನಿತ್ಯದ ದಿನಚರಣೆಯಲ್ಲಿ ಯಾವುದಕ್ಕೆ ಆದ್ಯತೆ ನೀಡಬೇಕೆಂದು ನಿರ್ಧರಿಸಿಕೊಳ್ಳಿ. ಮೊಬೈಲ್ ನಿಮ್ಮ ಬೆಸ್ಟ್ ಫ್ರೆಂಡ್ ಆಗದಿರಲಿ ಎಂದು ಸಂಸದರು, ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.

ಸಂಚಾರಿ ನಿಯಮ ಪಾಲಿಸುವಲ್ಲಿ ಸ್ವಯಂ ಪ್ರೇರಿತ ಬದಲಾವಣೆ ಅಗತ್ಯವಿದೆ. ತಪ್ಪು ಮಾಡುವುದಿಲ್ಲ. ನಿಯಮ ಮೀರುವುದಿಲ್ಲ ಎಂದು ಸಂಕಲ್ಪ ಮಾಡಿಕೊಳ್ಳಿ. ಹೊರ ದೇಶದ ಜನತೆ ಪಾಲಿಸುವಂತೆ ಇಲ್ಲಿಯೂ ಶಿಸ್ತು ಪಾಲನೆ ಅಗತ್ಯ ಎಂದರು.

ಸಾಮಾಜಿಕ ಜವಾಬ್ದಾರಿಯೂ ಅಗತ್ಯವಾಗಿದ್ದು, ರಕ್ತದಾನ, ವನ ಮಹೋತ್ಸವದಂತಹ ಕಾರ್ಯಕ್ರಮ ಗಳಲ್ಲಿ ಪಾಲ್ಗೊಳ್ಳಿ. ಇದರಿಂದ ಸಹೋದರತ್ವ ಬೆಳೆ ಯುತ್ತದೆ ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಕೈಗಾರಿಕಾ ತರಬೇತಿ ಸಂಸ್ಥೆಯ ಪ್ರಾಂಶುಪಾಲ ಏಕನಾಥ್ ಅಧ್ಯಕ್ಷತೆ ವಹಿಸಿದ್ದರು. ಹೆಚ್ಚುವರಿ ಪೊಲೀಸ್ ಅಧೀಕ್ಷಕ ಜಿ. ಮಂಜುನಾಥ, ಜಂಟಿ ಸಾರಿಗೆ ಆಯುಕ್ತ ಭೀಮನಗೌಡ ಪಾಟೀಲ್, ಪ್ರಾದೇಶಿಕ ಸಾರಿಗೆ ಅಧಿಕಾರಿ ಸಿ.ಎಸ್. ಪ್ರಮುತೇಶ್, ವಾಹನ ಚಾಲನಾ ತರಬೇತಿ ಸಂಸ್ಥೆ ಅಧ್ಯಕ್ಷ ಫಯಾಜ್ ಅಹಮ್ಮದ್ ಮತ್ತಿತರರಿದ್ದರು. ಮಂಜುನಾಥ್ ಸ್ವಾಗತಿಸಿದರು. ಕು.ಜೀವಿತಾ ಪ್ರಾರ್ಥಿಸಿದರು.

## ತಾಳ್ಮೆ, ಸಾಮಾನ್ಯ ಜ್ಞಾನದಿಂದ ಅಪಘಾತ ಕಡಿಮೆ

ಪ್ರತಿಯೊಬ್ಬರಲ್ಲೂ ತಾಳ್ಮೆ ಹಾಗೂ ಸಾಮಾನ್ಯ ಜ್ಞಾನವಿದ್ದರೆ ಅಪಘಾತ ಮುಕ್ತ ರಾಷ್ಟ್ರವನ್ನಾಗಿಸಲು ಸಾಧ್ಯವಿದೆ ಎಂದು ಸಾರಿಗೆ ಇಲಾಖೆಯ ಇನ್ಸ್‌ಪೆಕ್ಟರ್ ಮಹಮ್ಮದ್ ಖಾಲಿದ್ ಹೇಳಿದರು.

ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಅವರು, ದೇಶದಲ್ಲಿ ಪ್ರತಿ ವರ್ಷ ಐದು ಲಕ್ಷ ಅಪಘಾತಗಳು ಸಂಭವಿಸುತ್ತವೆ. ಒಂದೂವರೆ ಲಕ್ಷ ಜನರು ಸಾವನ್ನಪ್ಪುತ್ತಾರೆ. ಇದರಲ್ಲಿ ಅರ್ಧ ಪಾಲು ಯುವಕರದ್ದು ಎಂದು ಕಳವಳ ವ್ಯಕ್ತಪಡಿಸಿದರು.

ಕುಟುಂಬದಲ್ಲಿ ದುಡಿಯುವ ವ್ಯಕ್ತಿಯೊಬ್ಬ ಅಪಘಾತಕ್ಕೀಡಾದರೆ ಇಡೀ ಕುಟುಂಬ ಬೀದಿಗೆ ಬರುತ್ತದೆ. ವಾಹನಗಳಲ್ಲಿ ತಂತ್ರಜ್ಞಾನ, ರಸ್ತೆಗಳ ಸುಧಾರಣೆಯಾಗಿದ್ದರು ಅಪಘಾತಗಳು ಹೆಚ್ಚುತ್ತಿವೆ. ವಾಹನ ಚಲಾಯಿಸುವುದು ಗೊತ್ತಿದ್ದರೆ ಸಾಲದು, ರಕ್ಷಣಾತ್ಮಕವಾಗಿ ವಾಹನ ಚಲಾಯಿಸುವುದೂ ಸಹ ಅಗತ್ಯವಿದೆ ಎಂದು ಹೇಳಿದರು.

# ಪ್ರಯಾಗ್‌ರಾಜ್‌ಗೆ ಇಂಡಿಗೋ ಪ್ರಯಾಣ ದರ ಶೇ. 50ರವರೆಗೆ ಇಳಿಕೆ

ನವದೆಹಲಿ, ಜ. 29 - ಕುಂಭ ಮೇಳಕ್ಕೆ ತೆರಳುವ ವಿಮಾನಗಳ ಪ್ರಯಾಣ ದರವನ್ನು ದೊಡ್ಡ ಪ್ರಮಾಣದಲ್ಲಿ ಹೆಚ್ಚಿಸಲಾಗಿದೆ ಎಂಬ ಆಕ್ಷೇಪಗಳು ವ್ಯಕ್ತವಾಗಿರುವ ಹಿನ್ನೆಲೆಯಲ್ಲಿ, ಕೇಂದ್ರ ಸರ್ಕಾರ ನೀಡಿದ ಸೂಚನೆಯಂತೆ ಇಂಡಿಗೋ ವಿಮಾ ನಯಾನ ಸಂಸ್ಥೆಯು ಪ್ರಯಾಗ್‌ರಾಜ್‌ಗೆ ತೆರಳುವ ವಿಮಾನಗಳ ಪ್ರಯಾಣ ದರವನ್ನು ಶೇ. 50ರವರೆಗೆ ಇಳಿಸಿದೆ. ಕೇಂದ್ರ ಗ್ರಾಹಕರ ವ್ಯವಹಾರಗಳ ಸಚಿವ ಪ್ರಹ್ಲಾದ್ ಜೋಶಿ ಅವರು ಪ್ರಯಾಗ್‌ರಾಜ್‌ಗೆ ತೆರಳುವ ವಿಮಾನಗಳ ದರ ಹೆಚ್ಚಾಗಿರುವ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ್ದರು. ಈ ಬಗ್ಗೆ ಮಧ್ಯ ಪ್ರವೇಶಿಸಲು ವೈಮಾನಿಕ ನಿಯಂತ್ರಕ ಡಿಜಿಸಿಎಗೆ ಸೂಚನೆ ನೀಡಿದ್ದರು. ಕುಂಭಮೇಳಕ್ಕೆ ಪ್ರಯಾಣಿಕರು ಪ್ರಯಾಗ್‌ರಾಜ್ ಮೂಲಕ ತೆರಳುತ್ತಾರೆ.

# ನಾಟಕ ಅಕಾಡೆಮಿ ಅಧ್ಯಕ್ಷರಿಗೆ ಅಭಿನಂದನೆ

ದಾವಣಗೆರೆ, ಜ. 29- ರಂಗ ಸಂಘಟಕ ಹಾಗೂ ಜಿಲ್ಲಾ ಹವ್ಯಾಸಿ ಕಲಾವಿದರ ಒಕ್ಕೂಟದ ಅಧ್ಯಕ್ಷರಾದ ಎನ್.ಎಸ್. ರಾಜು ಇವರು ಇತ್ತೀಚೆಗೆ ಬೆಂಗಳೂರಿನ ಕರ್ನಾಟಕ ನಾಟಕ ಅಕಾಡೆಮಿ ಕೇಂದ್ರ ಕಚೇರಿಯಲ್ಲಿ ಅಕಾಡೆಮಿ ಅಧ್ಯಕ್ಷ ಕೆ.ಯು. ನಾಗರಾಜ್ ಮೂರ್ತಿ ಅವರನ್ನು ಭೇಟಿಯಾಗಿ ಕಲಾವಿದರ ಕುಂದು-ಕೊರತೆ, ಮಾಸಾಶನ, ಪ್ರಾಯೋಜನೆ, ಅಕಾಡೆಮಿ ಪ್ರಶಸ್ತಿ ಇನ್ನೂ ಮುಂತಾದ ವಿಚಾರಗಳ ಬಗ್ಗೆ ಚರ್ಚಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕಲಾವಿದರ ಪರವಾಗಿ ನಾಟಕ ಅಕಾಡೆಮಿ ಅಧ್ಯಕ್ಷರನ್ನು ಸನ್ಮಾನಿಸಿ ಗೌರವಿಸಲಾಯಿತು. ಜಾನಪದ ಕಲಾವಿದ ಸಾರಥಿಯ ಬಿ. ಹನುಮಂತಾಚಾರಿ ಹಾಗೂ ಅಕಾಡೆಮಿಯ ಸದಸ್ಯರುಗಳು ಉಪಸ್ಥಿತರಿದ್ದರು.



# ಮುಂದಿನ ಐದು ವರ್ಷಗಳಲ್ಲಿ 100 ಉಡಾವಣೆಯೇ? ಏಕಾಗಬಾರದು ಎಂದ ಇಸ್ರೋ

ಶ್ರೀಹರಿಕೋಟ, ಜ. 29 - ಇಸ್ರೋ ನೂರು ಉಡಾವಣೆಗಳನ್ನು ಕಾಣಲು 46 ವರ್ಷ ತೆಗೆದುಕೊಂಡಿತ್ತು. ಆದರೆ ಮುಂದಿನ 100 ಉಡಾವಣೆಗಳು ಅರ್ಧ ದಶಕದ ಒಳಗೆ ಬರಲಿವೆ ಎಂದು ಇಸ್ರೋ ವಿಶ್ವಾಸ ಹೊಂದಿದೆ.

ಜಿಎಸ್‌ಎಲ್‌ವಿ ರಾಕೆಟ್ ಯಶಸ್ವೀ ಉಡಾವಣೆಯು ಇಸ್ರೋದ 100ನೇ ಉಡಾವಣೆಯಾಗಿತ್ತು. ಈ ಉಡಾವಣೆ ಯಶಸ್ವಿಯಾದ ನಂತರ ಮಾತನಾಡಿರುವ ಇಸ್ರೋ ಅಧ್ಯಕ್ಷ ವಿ. ನಾರಾಯಣನ್, ಮುಂದಿನ ಐದು ವರ್ಷಗಳಲ್ಲಿ ನೂರು ಉಡಾವಣೆ ಮಾಡುವ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಮುಂದಿನ ಐದು ವರ್ಷಗಳಲ್ಲಿ ನೂರು ಉಡಾವಣೆ ಸಾಧ್ಯವೇ? ಎಂಬ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿರುವ ಅವರು, ನೀವು ಸರಿಯಾದ ಪ್ರಶ್ನೆ ಕೇಳಿದ್ದೀರಿ. ಈ ಗುರಿ ಸಾಧ್ಯ ಎಂದಿದ್ದಾರೆ.

ಇಸ್ರೋದ ಆರಂಭಿಕ ದಿನಗಳಲ್ಲಿ ರಾಕೆಟ್ ಬಿಡಿ ಭಾಗಗಳನ್ನು ಸೈಕಲ್ ಹಾಗೂ ಎತ್ತಿನ ಗಾಡಿಯಲ್ಲಿ ಸಾಗಿಸಲಾಗುತ್ತಿತ್ತು. ಆ ಚಿತ್ರಗಳು ಈಗಲೂ ಸ್ಮರಣಾರ್ಹವಾಗಿವೆ. ನಂತರದ ದಿನಗಳಲ್ಲಿ ಬಾಹ್ಯಾಕಾಶ ವಲಯದಲ್ಲಿ ದಾಪುಗಾಲು ಹಾಕಿರುವ ಇಸ್ರೋ, ವಿದೇಶಿ ವಾಣಿಜ್ಯ ಉಪಗ್ರಹಗಳ ಉಡಾವಣೆ ಮಾಡುವ ಹಂತಕ್ಕೆ ಬಂದಿದೆ. ಚಂದ್ರಯಾನ ಹಾಗೂ ಸೂರ್ಯ ಯಾನಗಳನ್ನು ಕೈಗೊಂಡು ವಿಶ್ವದ ಗಮನ ಸೆಳೆದಿದೆ.

ಇದಕ್ಕೂ ಮುಂಚೆ ಬುಧವಾರ ಇಸ್ರೋ ತನ್ನ 100ನೇ ಉಡಾವಣೆಯಲ್ಲಿ ಎನ್‌ವಿಎಸ್ -2 ಉಪಗ್ರಹವನ್ನು ಉಡಾವಣೆ ಮಾಡಿತ್ತು. ಇದು ನಾವಿಕ್ ದಿಕ್ಸೂಚಿ ಉಪಗ್ರಹ ಸರಣಿಯ ಭಾಗವಾಗಿದೆ. ಇದು ನೌಕಾಯಾನದಿಂದ ಹಿಡಿದು ಕೃಷಿಯವರೆಗೆ ಹಲವು ವಲಯಗಳಲ್ಲಿ ನೆರವಾಗಲಿದೆ. ಇದುವರೆಗೂ ಇಸ್ರೋ ಆರು ಪೀಳಿಗೆಯ ರಾಕೆಟ್ ಅಭಿವೃದ್ಧಿಪಡಿಸಿದೆ.

ಪ್ರೊ. ಸತೀಶ್ ಧವನ್ ಅವರ ನೇತೃತ್ವದಲ್ಲಿ ಮೊದಲ ರಾಕೆಟ್ ರೂಪಿಸಲಾಗಿತ್ತು. ಎಸ್‌ಎಲ್‌ವಿ - 3 ಇ1/ ರೋಹಿಣಿ ಟೆಕ್ನಾಲಜಿ ರಾಕೆಟ್ ರೂಪಿಸಿದ ಯೋಜನೆಯಲ್ಲಿ ಮಾಜಿ ರಾಷ್ಟ್ರಪತಿ ಎಪಿಜೆ ಅಬ್ದುಲ್ ಕಲಾಂ ಅವರು ಯೋಜನಾ ನಿರ್ದೇಶಕರಾಗಿದ್ದರು.

ಇದಾದ 46 ವರ್ಷಗಳ ನಂತರ ಇಸ್ರೋ 548 ಉಪಗ್ರಹಗಳನ್ನು ಉಡಾವಣೆ ಮಾಡಿದೆ. ಒಟ್ಟಾರೆ 120 ಟನ್ ತೂಕದ ಉಪಗ್ರಹಗಳನ್ನು ಕಕ್ಷೆಗೆ ಸೇರಿಸಲಾಗಿದೆ.

ಅಮೆರಿಕದ ಬಾಹ್ಯಾಕಾಶ ಸಂಸ್ಥೆ ನಾಸಾ ಜೊತೆಗೂಡಿ ನಿಸಾರ್ ಯೋಜನೆ ರೂಪಿಸಲಾಗಿದೆ. ಒಂದೆರಡು ತಿಂಗಳಲ್ಲಿ ಇದರ ಉಡಾವಣೆ ನಡೆಯಲಿದೆ ಎಂದು ನಾರಾಯಣನ್ ಹೇಳಿದ್ದಾರೆ. ಭಾರತಕ್ಕೆ ಇನ್ನೂ ಎಷ್ಟು ದಿಕ್ಸೂಚಿ ಉಪಗ್ರಹಗಳ ಅಗತ್ಯವಿದೆ? ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಪ್ರಸಕ್ತ ನಾಲ್ಕು ದಿಕ್ಸೂಚಿ ಉಪಗ್ರಹಗಳು ಕಾರ್ಯನಿರ್ವಹಿಸುತ್ತಿವೆ. ಇಂದು ಐದನೇ ಉಪಗ್ರಹ ಉಡಾವಣೆ ಮಾಡಲಾಗಿದೆ. ಇನ್ನೂ ಮೂರು ಉಪಗ್ರಹಗಳಿಗೆ ಅನುಮತಿ ದೊರೆತಿದೆ. ಮುಂದಿನ ಆರು ತಿಂಗಳಲ್ಲಿ ಇನ್ನೊಂದು ಉಪಗ್ರಹ ಉಡಾವಣೆ ಮಾಡಲಾಗುವುದು ಎಂದು ಹೇಳಿದರು.

ತಮಿಳುನಾಡಿನ ಕುಲಶೇಖರಪಟ್ಟಣಂನಲ್ಲಿ ಇನ್ನೊಂದು ಉಡಾವಣಾ ತಾಣ ನಿರ್ಮಿಸಲಾಗುತ್ತಿದೆ. ಎರಡು ವರ್ಷಗಳಲ್ಲಿ ಇದು ಉಡಾವಣೆಗೆ ಸಿದ್ಧವಾಗಲಿದೆ ಎಂದು ನಾರಾಯಣನ್ ಹೇಳಿದ್ದಾರೆ.

ಮುಂದಿನ ಪೀಳಿಗೆಯ ರಾಕೆಟ್ ಆದ ಎನ್‌ಜಿಎಲ್‌ವಿ ರೂಪಿಸಲು ಇಸ್ರೋಗೆ ಕೇಂದ್ರ ಸರ್ಕಾರದಿಂದ ಅನುಮತಿ ದೊರೆತಿದೆ. ಇದು ಭೂತಳ ಕಕ್ಷೆಗೆ 20 ಟನ್ ಹಾಗೂ ಸ್ಥಿರ ಕಕ್ಷೆಗೆ 10 ಟನ್ ತೂಕ ಸಾಗಿಸುವ ಸಾಮರ್ಥ್ಯ ಹೊಂದಿದೆ ಎಂದು ತಿಳಿಸಿದರು.

4000 ಕೋಟಿ ರೂ. ವೆಚ್ಚದಲ್ಲಿ ಹೊಸ ಉಡಾವಣಾ ತಾಣ ನಿರ್ಮಿಸಲಾಗುತ್ತಿದೆ. ಅಲ್ಲಿಂದ ಎನ್‌ಜಿಎಲ್‌ವಿ ರಾಕೆಟ್ ಉಡಾವಣೆ ಮಾಡಲಾಗುವುದು ಎಂದವರು ತಿಳಿಸಿದರು.

ಚಂದ್ರಯಾನ ನಾಲ್ಕು ಹಾಗೂ ಐದನೇ ಯೋಜನೆ ಹಾಗೂ ಆಳ ಬಾಹ್ಯಾಕಾಶ ಯೋಜನೆಗಳಿಗೆ ಎನ್‌ಜಿಎಲ್‌ವಿ ಬಳಸಬಹುದು ಎಂದವರು ಹೇಳಿದರು.

# ಶ್ರೀ ಕೊಟ್ಟೂರೇಶ್ವರ ಪುರಾಣ ಪ್ರವಚನ ನಗರದಲ್ಲಿ ಇಂದು ಪೂರ್ವಭಾವಿ ಸಭೆ



ಶ್ರೀ ಗುರು ಕೊಟ್ಟೂರೇಶ್ವರ ಪಾದಯಾತ್ರೆ ಟ್ರಸ್ಟ್ ವತಿಯಿಂದ ಶ್ರೀ ಕೊಟ್ಟೂರೇಶ್ವರ ಪುರಾಣ ಪ್ರವಚನವನ್ನು ಏರ್ಪಡಿಸಲಾಗಿದೆ. ಈ ಕುರಿತು ಇಂದು ಸಂಜೆ 7 ಗಂಟೆಗೆ ನಗರದ ಎಂ.ಸಿ.ಸಿ. ‘ಎ’ ಬ್ಲಾಕ್‌ನಲ್ಲಿರುವ ಶ್ರೀ ಸದ್ಯೋಜಾತ ಸ್ವಾಮಿ ಹಿರೇಮಠದಲ್ಲಿ ಭಕ್ತಾದಿಗಳ ಪೂರ್ವಭಾವಿ ಸಭೆ ನಡೆಯಲಿದೆ ಎಂದು ಪಾದಯಾತ್ರೆ ಟ್ರಸ್ಟ್ ಪದಾಧಿಕಾರಿಗಳು ತಿಳಿಸಿದ್ದಾರೆ. ವಿವರಕ್ಕೆ ಸಂಪರ್ಕಿಸಿ : ಕಣಕುಪ್ಪಿ ಮುರುಗೇಶಪ್ಪ (9611889151), ಟಿ.ಜೆ. ಬಕ್ಕೇಶ್ (9448356968), ಎಂ.ಎಸ್. ಬಕ್ಕೇಶ್ (9900906773), ಎಸ್. ಎಂ. ವೀರಭದ್ರಯ್ಯ (9449810594).

**ಕಮರ್ಷಿಯಲ್ ಸೈಟ್ ಮಾರಾಟಕ್ಕಿದೆ**
ಅರುಣ ಟಾಕೀಸ್ ಸರ್ಕಲ್ ಹತ್ತಿರ ದಕ್ಷಿಣ 50x150 ಹಳೇ ಪಿ.ಬಿ. ರಸ್ತೆ (ಮಾರುತಿ ಶೋ ರೂಮ್ ಹತ್ತಿರ) ಉತ್ತರ 70x360, ಪಿ.ಜೆ. ಬಡಾವಣೆ ಉತ್ತರ 60x100 (ನರ್ಸಿಂಗ್ ಹೋಮ್‌ಗೆ ಚೆನ್ನಾಗಿದೆ) ಎಂಸಿಸಿ 'ಎ' ಬ್ಲಾಕ್ ಪೂರ್ವ-ದಕ್ಷಿಣ ಕಾರ್ನರ್ 44x60 (ನರ್ಸಿಂಗ್ ಹೋಮ್‌ಗೆ ಚೆನ್ನಾಗಿದೆ)
ಐಗೂರು ವಿಜಯಕುಮಾರ್
99457 02495

**ಬನಶಂಕರಿಯಲ್ಲಿ ಸೈಟುಗಳು ಮಾರಾಟಕ್ಕಿವೆ**
ಹಳೇ ಬನಶಂಕರಿ (ಸಂಭ್ರಮ್ ಹೋಟೆಲ್ ಹಿಂದೆ) ಉತ್ತರ-ಪಶ್ಚಿಮ ಕಾರ್ನರ್ 30x70 ಅಕ್ಕ-ಪಕ್ಕ ಪೂರ್ವ 40x60 ಹೊಸ ಬನಶಂಕರಿ (60 ಅಡಿ ರಸ್ತೆಗೆ) ಪಶ್ಚಿಮ 30x70 ಅಕ್ಕ-ಪಕ್ಕ ಪೂರ್ವ 30x50 ಅಕ್ಕ-ಪಕ್ಕ, ಜೆ.ಹೆಚ್. ಪಟೇಲ್ ಬಡಾವಣೆ ದಕ್ಷಿಣ 40x60 ಪೂರ್ವ 20x30
ಐಗೂರು ವಿಜಯಕುಮಾರ್
99457 02495

**ಲೇಔಟ್ ಮಾಡಲು ಹೊಲ ಮಾರಾಟಕ್ಕೆ**
ಲೇಔಟ್ ಮಾಡಲು ತೊಗಲೇರಿ ಟೋಲ್ ಪಕ್ಕದಲ್ಲಿ 5 ಎಕರೆ ಅಡಿಕೆ ತೋಟ ಮತ್ತು 2 ಎಕರೆ ಕಕ್ಕರಗೊಳ್ಳ ಮೇನ್ ರೋಡ್‌ನಲ್ಲಿ ಮಾರಾಟಕ್ಕಿದೆ. ಸೈಟ್, ಮನೆ ಮಾರಾಟಕ್ಕೆ, ಖರೀದಿಗೆ ವಿಚಾರಿಸಿ : ವೀರೇಶ್
7676857676

**ವಾಟರ್ ಟ್ಯಾಂಕ್/ ಸೈಟ್ (ಪ್ಲಾಟ್) ಕ್ಲೀನಿಂಗ್**
(ಸಂಪ್) ಸಿಂಟೆಕ್ಸ್, ಪಾರ್ಕ್ ಕ್ಲೀನಿಂಗ್ ಮಾಡಿಕೊಡಲಾಗುವುದು.
91108 54112

**ಸೈಟ್ ಮಾರಾಟಕ್ಕಿದೆ**
ಶಾಮನೂರು ಶಿವ - ಪಾರ್ವತಿ ಬಡಾವಣೆ, 5ನೇ ಮುಖ್ಯ ರಸ್ತೆಯಲ್ಲಿ ಉತ್ತರಾಭಿಮುಖವಾಗಿರುವ 30x50 ಅಳತೆಯುಳ್ಳ ಸೈಟ್ ಮಾರಾಟಕ್ಕಿದೆ. ಸಂಪರ್ಕಿಸಿ :
99868 02097

**ಬೇಕಾಗಿದ್ದಾರೆ**
ಸ್ಯಾನಿಟರಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಪ್ಲಂಬಿಂಗ್ ಕ್ಷೇತ್ರದಲ್ಲಿ ಅನುಭವ ಇದ್ದವರಿಗೆ ಮೊದಲ ಆದ್ಯತೆ.
ಸಪ್ತಗಿರಿ ಪೈಪ್ಸ್ ಅಂಡ್ ಟ್ಯಾಪ್ಸ್
ಹದಡಿ ರಸ್ತೆ, ದಾವಣಗೆರೆ.
ಮೊ. 90080 58121

**ಸೈಟುಗಳು ಮಾರಾಟಕ್ಕಿವೆ**
ವಾಜಪೇಯಿ ಬಡಾವಣೆ ಪೂರ್ವ-ದಕ್ಷಿಣ ಕಾರ್ನರ್ 50x50 ಪಶ್ಚಿಮ 30x40 ಶಿವ-ಪಾರ್ವತಿ ಬಡಾವಣೆ ಪಶ್ಚಿಮ 30x40 ಅಕ್ಕ-ಪಕ್ಕ ಪೂರ್ವ 40x60 ಅಕ್ಕ-ಪಕ್ಕ S.S. 'A' ಬ್ಲಾಕ್ ದಕ್ಷಿಣ 30x50 (ಕವಿ ಹೋಟೆಲ್ ಹತ್ತಿರ) ವಿದ್ಯಾನಗರ ಪಶ್ಚಿಮ 32x52, 26x60
ಐಗೂರು ವಿಜಯಕುಮಾರ್
99457 02495

**ಸೈಟು ಮಾರಾಟಕ್ಕಿದೆ**
30x35 ಉತ್ತರ
ಹೊಸ ಸರ್‌ಎಂವಿ ಕಾಲೇಜು ಹಿಂಭಾಗ @ 2699
77600 70828

**WANTED JOBS**
We are hiring telecallers females only. Basic salary & Incentives. Quali : PUC and Any Degree. Location : Dvg. Walk In Interview.
Date : 30-01-2025 to 05-02-2025
99001 57398, 90663 32625

**ಬೇಕಾಗಿದ್ದಾರೆ**
ದಾವಣಗೆರೆ ನಗರದ ಪ್ರತಿಷ್ಠಿತ ಕಾಲೇಜಿಗೆ ಹೌಸ್ ಕೀಪಿಂಗ್‌ಗೆ ಹುಡುಗರು ಬೇಕಾಗಿದ್ದಾರೆ.
99806 47014

**ಬೇಕಾಗಿದ್ದಾರೆ**
ಕಂಪನಿಗಳಿಗೆ ಕಚ್ಚಾ ವಸ್ತುಗಳನ್ನು ಸರಬರಾಜು ಮಾಡಲು ಬಿಸಿನೆಸ್ ಪಾರ್ಟ್ನರ್ ಬೇಕಾಗಿದ್ದಾರೆ. ಸಂಪರ್ಕಿಸಿ :
72048 24313

**ಮನೆ ಬಾಡಿಗೆಗೆ**
ಮೊದಲನೇ ಮಹಡಿಯಲ್ಲಿ ಪಿ.ಜೆ. ಬಡಾವಣೆ, 8ನೇ ಕ್ರಾಸ್, 8ನೇ ಮೇನ್ ರೋಡಿನಲ್ಲಿರುವ #397ರ 20x40 ಅಳತೆಯ 2 BHK ಹಾಗೂ ನೀರಿನ ಸಂಪೂರ್ಣ ಸೌಕರ್ಯವುಳ್ಳ ಮನೆ ಬಾಡಿಗೆಗೆ ಇದೆ. ಸಸ್ಯಹಾರಿಗಳಿಗೆ ಮಾತ್ರ. ವಿಚಾರಿಸಿ :
94482 48242, 78927 53714

**ಮನೆ ಬೇಕಾಗಿದೆ ಅಥವಾ ಸೈಟ್ ಬೇಕಾಗಿದೆ**
Size 20×30 ಅಥವಾ 20×40
ಸ್ಥಳ : ಶಕ್ತಿನಗರ, ಜಯ ನಗರ, ಡಿಸಿಎಂ ಟೌನ್‌ಶಿಪ್, ರಾಜೇಂದ್ರ ಬಡಾವಣೆ
ಮಧ್ಯವರ್ತಿಗಳಿಗೆ ಅವಕಾಶವಿರುವುದಿಲ್ಲ
87229 45295, 97314 54916

**ಹೊಸ 2 BHK ಮನೆ ಬಾಡಿಗೆಗಿದೆ**
2 BHK 1ನೇ ಫ್ಲೋರ್, ಹನಗವಾಡಿ ಬಡಾವಣೆ, ಹೊಸ ಕುಂದವಾಡ ಸರ್ವೀಸ್ ರಸ್ತೆ, ಸ್ವಾದ ಕೆಫೆ ಹಿಂಭಾಗ, ದಾವಣಗೆರೆ.
99011 20921

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಕೆಲಸ ಮಾಡಲು ಅನುಭವವುಳ್ಳ ನರ್ಸ್ (Nurse) ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ :
ಸಿ.ಜಿ. ಆಸ್ಪತ್ರೆ ಹಿಂಭಾಗ
ಪೆವಿಲಿಯನ್ ರಸ್ತೆ, ಪಿಜೆ ಬಡಾವಣೆ, ದಾವಣಗೆರೆ.
98450 35710, 77607 39990

**2000Sqft ಕಮರ್ಷಿಯಲ್ ಬಿಲ್ಡಿಂಗ್ ಬೇಕಾಗಿದೆ**
Ground Flour, Natationalised Bank ಗೆ, DCM & Shamanur ಅಲ್ಲಿ ಬೇಕಾಗಿದೆ.
88612 63402

**ROOM FOR RENT**
2nd floor 15x15 sqft with attached bathroom #361, 4th main, 9th cross, Behind Vishveshwaraiah park, PJ Exten. Davangere.
94489 29509

**WANTED**
Male candidates any degree with computer knowledge is must. Accomondation & food will be provided
Monthly Salary : 8000/-
Whats app : 99887 72291
P.B. Road, Davanagere

**Pzza pizza**
Lady owner
Female staff required for cloud kitchen.
83102 00810
79758 08524

**ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ**
ESI-PF ಸೌಲಭ್ಯವಿರುತ್ತದೆ.
ವೇತನ 9000/- ರಿಂದ 12,000
86603 98210, 96062 50026

**ಕಾರ್ ಡ್ರೈವರ್ ಬೇಕಾಗಿದ್ದಾರೆ**
ಡ್ರೈವಿಂಗ್ ಲೈಸೆನ್ಸ್ ಹಾಗೂ ದ್ವಿಚಕ್ರವಾಹನ ಹೊಂದಿರುವ ಕಾರ್ ಡ್ರೈವರ್ ಬೇಕಾಗಿದ್ದಾರೆ. (ಮೇಲ್ಕಂಡ ನಂಬರ್‌ಗೆ ಈ ಮೊದಲು ಕರೆ ಮಾಡಿದವರು ಪುನಃ ಕರೆ ಮಾಡಬೇಡಿ)
94486 56091

**WANTED**
ROYAL INSURANCE BROKING (INDIA) PVT Ltd.
Telecaller's & Sales Executive
Marketing Executives
Age : 18 to 27 Salary+Incentive
Quali:Degree, Work place-Davanagere
99864 47909

**ಓದುಗರ ಗಮನಕ್ಕೆ**
-ಜಾಹೀರಾತು ವ್ಯವಸ್ಥಾಪಕರು

**ಕ್ರಯಪತ್ರ ಕಳೆದಿವೆ**
ಚಂದ್ರಶೇಖರ್ ಪಿ. ನಿಮಿಷಾಂಭ ದೇವಸ್ಥಾನದ ಹತ್ತಿರ ಹಳೇ ಕಛೇರಿ ರಸ್ತೆ, ಚಿತ್ರಗಾರ ಗಲ್ಲಿ, ಶಿವಾಜಿನಗರ ದಾವಣಗೆರೆಯಲ್ಲಿ # 404/1A-404/2-404/3-460/2ನ ಸುಮಿತ್ರಬಾಯಿ ಕೋಂ ಲೇಟ್ ಪ್ರಕಾಶ್ ಯಶವಂತ್ ಎಂಬ ಹೆಸರಿನಲ್ಲಿರುವ ಕ್ರಯ ಪತ್ರಗಳು ಮನೆ ಕ್ಲೀನಿಂಗ್ ಮಾಡುವಾಗ ಕಳೆದಿರುತ್ತದೆ. ಯಾರಿಗಾದರೂ ಸಿಕ್ಕಲ್ಲಿ ಈ ನಂಬರಿಗೆ ಸಂಪರ್ಕಿಸಲು ಕೋರಿದೆ.
99644 49004

**ADBLUE / DPF**
available with Best Quality & Price for All BS6 Diesel
Commercial & Passanger Vehicles
Contact : Best Lubricants
Opp. to New Pvt Bus Stand
PB Road, Davangere.
73380 33337

**ಶ್ರೀ ಅಂಜನಾದ್ರಿ ಜ್ಯೋತಿಷ್ಯ ಕೇಂದ್ರ**
ಕನ್ನಡ, ತೆಲುಗು, ಹಿಂದಿ ಭಾಷೆಗಳಲ್ಲಿ ಭವಿಷ್ಯ ಮತ್ತು ಸ್ತ್ರೀ-ಪುರುಷ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಹೇಳುತ್ತಾರೆ.
ಪಂಡಿತ್ ಶ್ರೀ ಲಕ್ಷ್ಮಿಕಾಂತ್ ಗುರೂಜಿ
(ಆಂಧ್ರಪ್ರದೇಶ), ಲಾಯರ್ ರಸ್ತೆ, ದಾವಣಗೆರೆ.
9740064163

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಕಾರ್ ಡ್ರೈವರ್ ಕಮ್ ಸೆಕ್ಯೂರಿಟಿ, ಆಟೋಮೆಟಿಕ್ ಗೇರ್ ಅನುಭವ ಇರಬೇಕು. ಸಂಬಳ 16,000/- OT ಸಿಗುತ್ತದೆ. ವಸತಿ ಸೌಲಭ್ಯವಿದೆ.
97400 98047

**ಬೇಕಾಗಿದ್ದಾರೆ**
PUC ಆದ ಮಹಿಳೆಯರು ಸ್ಟಾಕ್ ತೆಗೆಯಲು, ಹೋಲ್ ಸೇಲ್ ಫಾರ್ಮಾ ದಲ್ಲಿ ಬಿಲ್ಲಿಂಗ್ ಮಾಡಿರುವ ಅನುಭವವುಳ್ಳ ಮಹಿಳೆಯರು ಬೇಕಾಗಿದ್ದಾರೆ. ಭೇಟಿಯ ಸಮಯ ಸಂಜೆ 6:30 ರ ನಂತರ
ಶ್ರೀ ಗುರು ಎಂಟರ್ ಪ್ರೈಸಸ್
#579, 6ನೇ ಮುಖ್ಯ ರಸ್ತೆ, ಪಿಜೆ ಬಡಾವಣೆ ದಾವಣಗೆರೆ.

**ವಾಟರ್ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**ಬೇಕಾಗಿದ್ದಾರೆ**
ಅಲ್ಯೂಮಿನಿಯಂ ಫ್ಯಾಕ್ಟರಿಯಲ್ಲಿ ITI ಪಾಸಾದ ಅಥವಾ ಫೇಲ್ ಆದ 18 ರಿಂದ 30 ವರ್ಷದ ವಯೋಮಿತಿ ಇರುವವರು ಕೆಲಸಕ್ಕೆ ಬೇಕಾಗಿದ್ದಾರೆ.
91138 07848

**TUITIONS**
CBSE / ICSE Boards
Class 8th, 9th, 10th
CRASH COURSES FOR
NEET / CET / IIT - JEE
PUC I / PUC II / PCMB
NEET Long Term / Supplementary Exams
97398 65711, 94822 44114

**ಬೇಕಾಗಿದ್ದಾರೆ**
ಮನೆಯಲ್ಲಿ ಅಡುಗೆ ಮಾಡಲು ಮಹಿಳೆ ಬೇಕಾಗಿದ್ದಾರೆ ವೆಜ್ & ನಾನ್‌ವೆಜ್ ಮಾಡಲು ಅನುಭವವಿರುವವರು ಬೇಕಾಗಿದ್ದಾರೆ.
94834 26393

**REQUIRED**
Accountant for Construction office
minimum 4 to 5 years experience in GST & Tally
8050222047, 8951938228

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಶ್ರೀ ಸಾಯಿ ಫೈನಾನ್ಸ್ (ರಿ)**
ಹೋಟೆಲ್, ಬಟ್ಟೆ ಅಂಗಡಿ, ರೆಸ್ಟೋರೆಂಟ್, ಪ್ರಾವಿಜನ್ ಸ್ಟೋರ್ ಫ್ಯಾನ್ಸಿ ಸ್ಟೋರ್, ಬೇಕರಿ ಟೀಸ್ಟಾಲ್ ಫಾಸ್ಟ್ ಫುಡ್ ಹೋಟೆಲ್, ಗ್ಯಾರೇಜ್ ಮೊಬೈಲ್ ಶಾಪ್, ಎಲೆಕ್ಟ್ರಿಕಲ್ ಶಾಪ್ ಚಿಪ್ಸ್ ಶಾಪ್ ಇತ್ಯಾದಿ ಶಾಪ್‌ಗಳಿಗೆ ಫೈನಾನ್ಸ್ ನೀಡಲಾಗುವುದು.
96860 22969

**FLAT FOR LEASE**
3 BHK, Sqft :1888
AM Apartment
Nainika Prime Rose
Vidyanagar last city bus stop Davanagere.
89519 38228, 80502 22181

# ಅರ್ಬನ್ ಬ್ಯಾಂಕಿಗೆ ಅತ್ಯುನ್ನತ ರಾಷ್ಟ್ರೀಯ ಸಹಕಾರಿ ಬ್ಯಾಂಕ್ ಪ್ರಶಸ್ತಿ



(1ನೇ ಪುಟದಿಂದ) ಇಲ್ಲಿ ಸ್ಮರಿಸಬಹುದು. ನಂತರದ ವರ್ಷ 2023-24ನೇ ಸಾಲಿನಲ್ಲೂ ಮತ್ತೆ ಈ ಪ್ರಶಸ್ತಿ ತಮ್ಮ ಬ್ಯಾಂಕ್ ಪಡೆದಿರುವುದು ಸಂತಸ ತಂದಿದೆ ಎಂದು ಬ್ಯಾಂಕಿನ ಆಡಳಿತ ಮಂಡಳಿ ಅಧ್ಯಕ್ಷ ಬಿ.ಸಿ. ಉಮಾಪತಿ ಸಂತಸ ವ್ಯಕ್ತಪಡಿಸಿದ್ದಾರೆ.

**ಕೃತಜ್ಞತೆ :** ಬ್ಯಾಂಕಿನ ಅತ್ಯುನ್ನತ ಸಾಧನೆಗೆ ಸಹಕರಿಸುತ್ತಿರುವ ಬ್ಯಾಂಕಿನ ಸದಸ್ಯರಿಗೂ, ಗ್ರಾಹಕರಿಗೂ, ಠೇವಣಿದಾರರಿಗೂ, ಕಾರ್ಯನಿರ್ವಾಹಕ ಮಂಡಳಿ ಸದಸ್ಯರಿಗೂ, ವ್ಯವಸ್ಥಾಪನಾ ಮಂಡಳಿ ಸದಸ್ಯರಿಗೂ, ಸಿಬ್ಬಂದಿ ವರ್ಗದವರಿಗೂ ಬ್ಯಾಂಕಿನ ನಿಕಟಪೂರ್ವ ಅಧ್ಯಕ್ಷರೂ, ಹಿರಿಯ ನಿರ್ದೇಶಕರೂ, ಡಿಡಿಸಿಸಿ ಬ್ಯಾಂಕ್ ಅಧ್ಯಕ್ಷರೂ ಆದ ಕೋಗುಂಡಿ ಬಕ್ಕೇಶಪ್ಪ ಕೃತಜ್ಞತೆ ಸಲ್ಲಿಸಿದ್ದಾರೆ.

# ತಡೆಗೆ ಡಿಸಿಗೆ ಹೆಚ್ಚಿನ ಅಧಿಕಾರ

(1ನೇ ಪುಟದಿಂದ) ಒದಗಿಸಲಾಗುವುದು.

ಸುಗ್ರೀವಾಜ್ಞೆ ಮೂಲಕ ಜಿಲ್ಲಾಧಿಕಾರಿಗಳಿಗೆ ಹೆಚ್ಚಿನ ಅಧಿಕಾರ ನೀಡಲಿದ್ದು, ಇದಕ್ಕಾಗಿ ಪ್ರತ್ಯೇಕ ವಿಭಾಗ ರಚಿಸಲಾಗುತ್ತದೆ.

ಮೈಕ್ರೋಫೈನಾನ್ಸ್ ಕಂಪನಿಗಳು ಸಾಲ ವಸೂಲಿಗೆ ಹೊರಗುತ್ತಿಗೆ ನೀಡುತ್ತಿದ್ದು, ಹೊರಗುತ್ತಿಗೆ ಸಂಸ್ಥೆಗಳು ಸಾಲ ವಸೂಲಾತಿಗೆ ರೌಡಿಗಳಂತೆ ವರ್ತಿಸುತ್ತಿವೆ, ಇಂತಹ ಕೃತ್ಯಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು, ರಾಜ್ಯದಲ್ಲಿ ಏಳು ಮೈಕ್ರೋಫೈನಾನ್ಸ್ ಕಂಪನಿಗಳ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದರು.

# ವೈಜ್ಞಾನಿಕ ನೇರ ಸೇತುವೆ ನಿರ್ಮಾಣಕ್ಕೆ ಆಗ್ರಹಿಸಿ ಗ್ರಾಮಸ್ಥರ ಪ್ರತಿಭಟನೆ

ದಾವಣಗೆರೆ, ಜ.29- ನಗರದ ಹಳೇ ಕುಂದುವಾಡ ಬಳಿ ಇರುವ ರಾಷ್ಟ್ರೀಯ ಹೆದ್ದಾರಿ-48ರಲ್ಲಿ 24 ಮೀಟರ್ ಅಗಲ, 6 ಮೀಟರ್ ಎತ್ತರ ಇರುವಂತೆ ನೇರ ಸೇತುವೆ ನಿರ್ಮಿಸಬೇಕೆಂದು ಆಗ್ರಹಿಸಿ ಕಾಮಗಾರಿ ತಡೆದು ಇಲ್ಲಿನ ಗ್ರಾಮಸ್ಥರು ಇಂದು ಪ್ರತಿಭಟನೆ ನಡೆಸಿದರು.

ಈ ವೇಳೆ ಮಾತನಾಡಿದ ಪ್ರತಿಭಟನಾಕಾರರು, ಹಳೇ ಕುಂದುವಾಡ ಗ್ರಾಮವು ರಾಷ್ಟ್ರೀಯ ಹೆದ್ದಾರಿ-48ಕ್ಕೆ ಹೊಂದಿಕೊಂಡಿದ್ದು, ಗ್ರಾಮಕ್ಕೆ ತೆರಳಲು ನೇರ ಬ್ರಿಡ್ಜ್ ವ್ಯವಸ್ಥೆ ಇಲ್ಲ. ಈ ಹಿಂದೆ ನಿರ್ಮಾಣವಾಗಿದ್ದ 2 ಸೇತುವೆಗಳೂ ಅವೈಜ್ಞಾನಿಕವಾಗಿದ್ದವು ಎಂದು ದೂರಿದರು.

ಹೆದ್ದಾರಿಯಲ್ಲಿ ಇದೀಗ ಆರು ಮುಖ ರಸ್ತೆ ನಿರ್ಮಾಣ ಮಾಡುತ್ತಿದ್ದು, ಇದರಲ್ಲಿ ಹೊಸದಾಗಿ ನಿರ್ಮಿಸುವ ಸೇತುವೆ ನಿರ್ಮಾಣದ ಯೋಜನೆಯೂ ಮೊದಲಿನಂತೆ ಅವೈಜ್ಞಾನಿಕವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರಸ್ತುತ ನಡೆಯುತ್ತಿರುವ ರಸ್ತೆ ಕಾಮಗಾರಿ ನಿರ್ಮಾಣದ ವೇಳೆಯೇ ಬನ್ನಿಕೋಡು ಹಾಗೂ ಹಳೇ ಕುಂದುವಾಡಕ್ಕೆ ನೇರ ಸೇತುವೆ ನಿರ್ಮಾಣ ಮಾಡಿದರೆ, ಹತ್ತಾರು ಹಳ್ಳಿಗಳಿಗೆ ಅನುಕೂಲವಾಗಲಿದೆ ಮತ್ತು ರಸ್ತೆ ಹೊಸಪೇಟೆ-ಶಿವಮೊಗ್ಗ ರಾಜ್ಯ ಹೆದ್ದಾರಿಗೆ ಸಂಪರ್ಕ ಕಲ್ಪಿಸಲಿದೆ ಎಂದು ವಿವರಿಸಿದರು.

ಈ ವ್ಯಾಪ್ತಿಯಲ್ಲಿ 250 ಎಕರೆ ಪ್ರದೇಶದಲ್ಲಿ ಹೌಸಿಂಗ್ ಬೋರ್ಡ್ ನಿರ್ಮಾಣವಾಗಿದ್ದು, ಅಲ್ಲಿನ ಜನಕ್ಕೆ ಸಂಚರಿಸಲು ಅನಾನೂಕೂಲವಾಗಿದೆ. ಇಲ್ಲಿ ಜಿಲ್ಲಾ ಕೋರ್ಟ್ ನಿರ್ಮಾಣವಾಗುತ್ತಿದ್ದು, ಇಂತಹ ದೂರದೃಷ್ಟಿ ಇಲ್ಲದ ಅಧಿಕಾರಿಗಳು ಮತ್ತೆ ಅವೈಜ್ಞಾನಿಕ ಬ್ರಿಡ್ಜ್ ನಿರ್ಮಿಸುತ್ತಿದ್ದಾರೆ ಎಂದು ದೂರಿದರು.

ನೇರ ಬ್ರಿಡ್ಜ್ ನಿರ್ಮಾಣ ಮಾಡುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಕಳೆದ 20 ವರ್ಷಗಳಿಂದ ಮನವಿ ಮಾಡಿದ್ದೇವೆ. ಈ ಹಿಂದೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು, ವೈಜ್ಞಾನಿಕವಾಗಿ ಬ್ರಿಡ್ಜ್ ನಿರ್ಮಿಸುವಂತೆ ಸೂಚಿಸಿದ್ದರೂ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿದ್ದಾರೆ ಎಂದು ಗುಡುಗಿದರು. ರಾಷ್ಟ್ರೀಯ ಹೆದ್ದಾರಿ ಕಾಮಗಾರಿಯಲ್ಲಿ ಬದಲಿ ರಸ್ತೆ ಮಾಡಿರುವುದರಿಂದ ಶಾಲಾ ಮಕ್ಕಳಿಗೆ ಸಂಚರಿಸಲು ಅನಾನುಕೂಲ ಆಗುತ್ತಿದೆ. ಹಾಗಾಗಿ ಅಪಘಾತ ಸಂಭವಿಸುವ ಮೊದಲೇ ಬದಲಿ ರಸ್ತೆಗೆ ಹಂಪ್ಸ್ ನಿರ್ಮಿಸಬೇಕು ಮತ್ತು ನೇರ ಬ್ರಿಡ್ಜ್ ನಿರ್ಮಿಸುವಂತೆ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಯ ಮುಖ್ಯಶಿಕ್ಷರು ಇದೇ ವೇಳೆ ಮನವಿ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ಗ್ರಾಮದ ಮುಖಂಡರು, ಯುವಕರು ಸೇರಿದಂತೆ ಗ್ರಾಮಸ್ಥರು ಇದ್ದರು.



### ಗುತ್ತಿಗೆದಾರನಿಗೆ ಗ್ರಾಮಸ್ಥರಿಂದ ತರಾಟೆ...

**ಜಿಲ್ಲಾಧಿಕಾರಿ ಗಂಗಾಧರಸ್ವಾಮಿ ಅವರು, ಹೆದ್ದಾರಿ ಪ್ರಾಧಿಕಾರದ ಇಂಜಿನಿಯರ್‌ಗೆ ಪೋನ್ ಕರೆಯ ಮೂಲಕ ಕಾಮಗಾರಿ ನಿಲ್ಲಿಸುವಂತೆ ಸೂಚನೆ ನೀಡಿದರೂ ಗುತ್ತಿಗೆದಾರ ಹಾಗೂ ಸಂಬಂಧಿಸಿದ ಅಧಿಕಾರಿಗಳು ಕಾಮಗಾರಿ ನಡೆಸುತ್ತೇವೆ ಎಂದರು.**

**ಆಗ 'ಸಚಿವರು, ಸಂಸದರು, ಡಿಸಿ, ಎಸಿ ಅವರ ಮಾತಿಗೂ ಬೆಲೆ ನೀಡುತ್ತಿಲ್ಲವೆಂದು ರೊಚ್ಚಿಗೆದ್ದು ಅಧಿಕಾರಿಗಳ ಮಧ್ಯೆ ವಾಗ್ವಾದ ನಡೆಸಿದರು. ಪ್ರತಿಭಟನೆ ಜೋರಾಗುತ್ತಿದ್ದಂತೆ ಗುತ್ತಿಗೆದಾರ ಅಲ್ಲಿಂದ ಕಾಲ್ಕಿತ್ತ ಪ್ರಸಂಗ ನಡೆಯಿತು. ಗ್ರಾಮಸ್ಥರು ಪಟ್ಟು ಹಿಡಿದ ಹಿನ್ನೆಲೆಯಲ್ಲಿ ಕಾಮಗಾರಿ ತಾತ್ಕಾಲಿಕವಾಗಿ ಸ್ಥಗಿತಗೊಂಡಿತು.**

### ಕಾಮಗಾರಿ ತಾತ್ಕಾಲಿಕ ಸ್ಥಗಿತಕ್ಕೆ ಸೂಚನೆ..!

**ಪ್ರತಿಭಟನಾ ಸ್ಥಳಕ್ಕೆ ಆಗಮಿಸಿ, ಮನವಿ ಸ್ವೀಕರಿಸಿದ ಉಪ ವಿಭಾಗಧಿಕಾರಿ ಸಂತೋಷ್ ಪಾಟೀಲ್ ಅವರು, ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಭೆ ಕರೆದು ಚರ್ಚಿಸಿ, ಮುಂದಿನ ನಿರ್ಣಯ ಕೈಗೊಳ್ಳಲಾಗುವುದು. ಅಲ್ಲಿಯ ವರೆಗೂ ಗ್ರಾಮಸ್ಥರ ಬೇಡಿಕೆಯಂತೆ ತಾತ್ಕಾಲಿಕವಾಗಿ ಕಾಮಗಾರಿ ನಿಲ್ಲಿಸಿ ಎಂದು ಗುತ್ತಿಗೆದಾರನಿಗೆ ತಿಳಿಸಿದರು.**

# ವಿಜ್ಞಾನದಲ್ಲಿ ಪ್ರಶ್ನಿಸುವಿಕೆ, ಅವಲೋಕನ ಮುಖ್ಯ



### ದಾವಣಗೆರೆ ವಿವಿ ಸೂಕ್ಷ್ಮ ಜೀವಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾ. ಎಸ್. ಶಿಶುಪಾಲ್ ಅಭಿಮತ

ದಾವಣಗೆರೆ, ಜ. 29- ವಿಜ್ಞಾನ ಎಂದರೆ ತಾನು ಮತ್ತು ತನ್ನ ಸುತ್ತಮುತ್ತಲಿನ ಭೌತಿಕ ವಾತಾವರಣವನ್ನು ಅರ್ಥ ಮಾಡಿಕೊಳ್ಳುವುದು. ವಿಜ್ಞಾನದಲ್ಲಿ ಪ್ರಶ್ನಿಸುವಿಕೆ ಮತ್ತು ಅವಲೋಕನ ಮುಖ್ಯವಾದದ್ದು ಎಂದು ದಾವಣಗೆರೆ ವಿವಿ ಸೂಕ್ಷ್ಮ ಜೀವಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾ. ಎಸ್. ಶಿಶುಪಾಲ್ ಅಭಿಪ್ರಾಯ ವ್ಯಕ್ತಪಡಿಸಿದರು.

ನಗರದ ಬಾಪೂಜಿ ಸಭಾಂಗಣದಲ್ಲಿ ವಿಜ್ಞಾನ ಅಕಾಡೆಮಿ ಹಾಗೂ ಶ್ರೀ ಸಿದ್ಧೇಶ್ವರ ಪದವಿ ಪೂರ್ವ ಕಾಲೇಜಿನ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಪ್ರತಿಭಾ ಪುರಸ್ಕಾರ ಹಾಗೂ ಬೀಳ್ಕೊಡುಗೆ ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.


ಮೋಜು, ಮಸ್ತಿ, ಮದ್ಯಪಾನ, ಧೂಮಪಾನ ಮುಂತಾದ ದುಶ್ಚಟಗಳಿಂದ ದೂರ ಇರಬೇಕೆಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು. ಅಧಿಕ ಅಂಕ ಗಳಿಸುವುದು ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಅತ್ಯುತ್ತಮ ರ್‍ಯಾಕ್ ಪಡೆಯುವುದು ಅತಿ ಮುಖ್ಯವಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಂಸ್ಥೆ ಮುಖ್ಯಸ್ಥ ಸಂಜಯ್ ಗೌಡರ್ ಮಾತನಾಡಿ, ಇಂದಿನ ವಿದ್ಯಾರ್ಥಿಗಳು ಶಿಕ್ಷಣದಲ್ಲಿ ಸಂಶೋಧನಾ ಮನೋಭಾವನೆ ಹೊಂದಿರಬೇಕು. ನಮ್ಮ ದೇಶಕ್ಕೆ ಸಂಶೋಧನೆ ಮುಖ್ಯ. ಸಂಶೋಧನೆ ಎಂದರೆ ಸಂ ಅಥವಾ ಶೋಧನೆ ಅಷ್ಟೇ ಆಗಬಾರದು. ಹೊಸ ವಿಷಯ, ಹೊಸ ತಂತ್ರಜ್ಞಾನ, ಪಡೆದ ಒಳ್ಳೆಯ ಇಂಜಿನಿಯರ್ ಮತ್ತು ಒಳ್ಳೆಯ ವೈದ್ಯರನ್ನು ತಯಾರಿಸಬೇಕಾಗಿದೆ ಎಂದರು.

ಜೀವನದ ಪ್ರಮುಖ ಘಟ್ಟ ಪಿಯುಸಿ. ಆದ ಕಾರಣ ವಿದ್ಯಾರ್ಥಿಗಳು ಬೇಕಾದ್ದನ್ನು ತೆಗೆದುಕೊಂಡು, ಬೇಡವಾದ್ದನ್ನು ಬಿಟ್ಟು ಸಿಕ್ಕ ಅವಕಾಶಗಳನ್ನು ಸದುಪಯೋಗ ಪಡಿಸಿಕೊಳ್ಳಬೇಕು, ಗೂಗಲ್ ಸರ್ಚ್ ಬದಲು ರಿಸರ್ಚ್‌ಗೆ ಹೆಚ್ಚು ಒತ್ತು ಕೊಡಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.

ಪ್ರಾಂಶುಪಾಲ ಜಿ.ಆರ್. ಶಿವನಗೌಡ ಪ್ರಾಸ್ತಾವಿಕ ಮಾತುಗಳನ್ನಾಡಿದರು.ಸಿದ್ಧಾರ್ಥ ವಿದ್ಯಾ ಸಂಸ್ಥೆ ಅಧ್ಯಕ್ಷೆ ಎಸ್. ನೀಲಮ್ಮ, ಆಡಳಿತಾಧಿಕಾರಿ ಕೆ.ಎಸ್. ಲೋಹಿತ್, ಜಿ.ಎಸ್.ಸತೀಶ್, ಬಿ.ಎಲ್. ಭುವನೇಶ್ವರ್, ಎಂ.ಸಂತೋಷ್‌ಕುಮಾರ್ ಮತ್ತಿತರರು ಭಾಗವಹಿಸಿದ್ದರು.

# ನಗರದಲ್ಲಿ ನಾಳೆ ಶ್ರೀ ಅನ್ನಪೂರ್ಣೇಶ್ವರಿ ರಥೋತ್ಸವ



ದಾವಣಗೆರೆ,ಜ.29- ನಗರದ ಶ್ರೀ ಡಿ. ದೇವರಾಜ ಅರಸು ಬಡಾವಣೆ ಎ ಬ್ಲಾಕ್‌ನಲ್ಲಿ ರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನ ದಲ್ಲಿ ನಾಡಿದ್ದು ದಿನಾಂಕ 31ರಿಂದ ಫೆಬ್ರವರಿ 4ರವರೆಗೆ ಐದು ದಿನಗಳ ಕಾಲ ಶ್ರೀ ದೇವಿಯ ರಥೋತ್ಸವ ಕಾರ್ಯಕ್ರಮಗಳು ವಿಜೃಂಭಣೆ ಯಿಂದ ನಡೆಯಲಿವೆ ಎಂದು ದೇವಸ್ಥಾನ ಸಮಿತಿ ಗೌರವಾಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ.

ಇಲ್ಲಿನ ವರದಿಗಾರರ ಕೂಟದ ಕಚೇರಿ ಯಲ್ಲಿ ಇಂದು ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ದಿನಾಂಕ 31ರ ಶುಕ್ರ ವಾರ ಬೆಳಿಗ್ಗೆ 7.30ಕ್ಕೆ ಅಭಿಷೇಕ, ದೀಪಾ ರಾಧನೆ, ಗಣಪತಿ ಹೋಮ, ಸಂಜೆ ಶ್ರೀಮತಿ ಶೀಲಾ ನಟರಾಜ್ ಮತ್ತು ಸಂಗಡಿಗ ರಿಂದ ಭಜನೆ ಜರುಗಲಿದೆ ಎಂದರು.

ನಂತರ ಸಂಜೆ 7 ಕ್ಕೆ ಧಾರ್ಮಿಕ ಮತ್ತು ಅಧ್ಯಾತ್ಮಿಕ ವಿಚಾರಗಳ ಕುರಿತಂತೆ ಹಿರಿಯ ಪತ್ರಕರ್ತ ಹೆಚ್.ಬಿ.ಮಂಜುನಾಥ್ ಮತ್ತು ಅಂಕಣ ಕಾರ ಜಗನ್ನಾಥ್ ನಾಡಿಗೇರ್ ಅವ ರಿಂದ ಉಪನ್ಯಾಸ ಏರ್ಪಾಡಾಗಿದೆ.

ಫೆಬ್ರವರಿ 1ರ ಶನಿವಾರ ಬೆಳಿಗ್ಗೆ 6 ಕ್ಕೆ ಶ್ರೀ ದೇವಿಗೆ ಪುಷ್ಪಾರ್ಚನೆ, ಕುಂಕುಮಾರ್ಪಣೆ, ಪಾರಾಯಣ, ನವಗ್ರಹ ಶಾಂತಿ ಹೋಮ, ಅನ್ನ ಸಂತರ್ಪಣೆ ನಡೆಯಲಿದೆ. ಸಂಜೆ 5 ಗಂಟೆಗೆ ತುಳಸಿ ಅರ್ಚನೆ, ಭಜನೆ, ಸಾಂಸ್ಕೃತಿಕ ಕಾರ್ಯ ಕ್ರಮ, ಸಂಜೆ 7ಕ್ಕೆ ತಪಸ್ಯ ವಾಸವಿ ನೃತ್ಯಾಲಯ ಮಕ್ಕಳಿಂದ ನೃತ್ಯ ಪ್ರದರ್ಶನ ಜರುಗಲಿದೆ.

ಫೆಬ್ರವರಿ 2ರ ಭಾನುವಾರ ಬೆಳಿಗ್ಗೆ 6 ಕ್ಕೆ ನವಚಂಡಿಕಾ ಯಾಗ, ಸಂಜೆ 6ಕ್ಕೆ ಶ್ರೀ ಸೀತಾರಾಮ ಕಲ್ಯಾಣೋತ್ಸವ ಏರ್ಪಾಡಾಗಿದೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷರೂ ಆಗಿರುವ ಹಿರಿಯ ನ್ಯಾಯವಾದಿ ಪ್ರಕಾಶ್ ಪಾಟೀಲ್ ಹೇಳಿದರು.

ಫೆಬ್ರವರಿ 3ರ ಸೋಮವಾರ ಬೆಳಿಗ್ಗೆ ಸುದರ್ಶನ ಹೋಮ, ರುದ್ರ ಹೋಮ, ಸಂಜೆ 6.30ಕ್ಕೆ ಶ್ರೀ ವಾಸವಿ ಗಾನಾಮೃತ ತಂಡದಿಂದ ನೃತ್ಯ ಮತ್ತ ಸಂಗೀತ ಸೇವೆ ನಡೆಯಲಿದೆ.

ಫೆಬ್ರವರಿ 4ರ ಮಂಗಳವಾರ 8ಕ್ಕೆ ಅಭಿಷೇಕ, ಮಧ್ಯಾಹ್ನ 12.05ಕ್ಕೆ ಶ್ರೀ ಮಾತಾ ಅನ್ನಪೂರ್ಣೇಶ್ವರಿ ರಥೋತ್ಸವ, ಸಂಜೆ 5ಕ್ಕೆ ಶ್ರೀ ವಾಸವಿ ಯುವತಿಯರ ಭಜನಾ ಮಂಡಳಿ ಯಿಂದ ಭಜನೆ ಜರುಗಲಿದೆ.

**ಫೆಬ್ರವರಿ 2ಕ್ಕೆ ಶ್ರೀ ಸೀತಾರಾಂ ಕಲ್ಯಾಣೋತ್ಸವ**

**ಫೆಬ್ರವರಿ 4ಕ್ಕೆ ಅನ್ನಪೂರ್ಣೇಶ್ವರಿ ರಥೋತ್ಸವ**

ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ, ಜಿಲ್ಲಾ ಉಸ್ತುವಾರಿ ಸಚಿವ ಶಾಮನೂರು ಮಲ್ಲಿಕಾರ್ಜುನ್, ಲೋಕಸಭಾ ಸದಸ್ಯರಾದ ಡಾ. ಪ್ರಭಾ ಮಲ್ಲಿಕಾರ್ಜುನ್, ಪಾಲಿಕೆ ಮಹಾಪೌರರಾದ ಕೆ. ಚಮನ್ ಸಾಬ್, ಪಾಲಿಕೆ 15ನೇ ವಾರ್ಡಿನ ಸದಸ್ಯರಾದ ಶ್ರೀಮತಿ ಆಶಾ ಉಮೇಶ್ ಅವರುಗಳು ವಿಶೇಷ ಆಹ್ವಾನಿತರಾಗಿ ಪಾಲ್ಗೊಳ್ಳುವರು.

ದೇವಸ್ಥಾನ ಸಮಿತಿ ಉಪಾಧ್ಯಕ್ಷ ತಾತಾ ವೆಂಕಟಚಲಪತಿ ಶೆಟ್ರು, ಕಾರ್ಯದರ್ಶಿ ವಿ. ವೀರಭದ್ರರಾವ್, ಖಜಾಂಚಿಗಳಾದ ನಾಗಭೂಷಣ್ ಕಡೇಕೊಪ್ಪ, ತಾತಾ ಕೆ. ಜಯಂತ್ ಮತ್ತು ದೇವಸ್ಥಾನದ ಶ್ರೀನಿವಾಸ್, ಸಚಿನ್ ಇತರರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.



# ಬೆಳ್ಳೂಡಿ ರಸ್ತೆಗೆ ಕಾಂಕ್ರಿಟ್ ಕಾಮಗಾರಿ ಶೀಘ್ರ : ಶ್ರೀಗಳಿಗೆ ಸಚಿವರ ಭರವಸೆ

ಮಲೇಬೆನ್ನೂರು, ಜ.29- ಹರಿಹರ-ಶಿವಮೊಗ್ಗ ರಸ್ತೆಯಿಂದ ಬೆಳ್ಳೂಡಿ ಗ್ರಾಮದ ಮುಖ್ಯ ವೃತ್ತದವರೆಗೆ ಸಿಸಿ ರಸ್ತೆ ನಿರ್ಮಾಣಕ್ಕೆ ಅನದಾನ ನೀಡುವಂತೆ ಸೋಮವಾರ ಕಾಗಿನೆಲೆ ಕನಕ ಗುರುಪೀಠದ ಶ್ರೀ ನಿರಂಜಾನಂದ ಪುರಿ ಸ್ವಾಮೀಜಿ ಅವರ ನೇತೃತ್ವದ ನಿಯೋಗವು ಲೋಕೋಪಯೋಗಿ ಇಲಾಖೆ ಸಚಿವ ಸತೀಶ್ ಜಾರಕಿಹೊಳಿ ಅವರನ್ನು ಭೇಟಿ ಮಾಡಿ, ಮನವಿ ಮಾಡಿದರು.

ಶ್ರೀಗಳ ಕೋರಿಕೆಗೆ ತಕ್ಷಣ ಸ್ಪಂದಿಸಿದ ಸಚಿವರು, ಸಂಬಂಧಪಟ್ಟ ಅಧಿಕಾರಿಗಳಿಗೆ ಫೋನ್ ಮಾಡಿ ಕೂಡಲೇ ಬೆಳ್ಳೂಡಿ ರಸ್ತೆಗೆ ಕಾಂಕ್ರೀಟ್ ಹಾಕಿಸುವ ಕಾಮಗಾರಿಯ ಯೋಜನಾ ವರದಿ ನೀಡುವಂತೆ ಸೂಚಿಸಿ, ಏಪ್ರಿಲ್ ತಿಂಗಳ ಒಳಗೆ ಸಿಸಿ ರಸ್ತೆ ನಿರ್ಮಾಣವಾಗಲಿದೆ ಎಂಬ ಭರವಸೆಯನ್ನು ಸಚಿವರು ನೀಡಿದ್ದಾರೆ ಎಂದು ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್ 'ಜನತಾವಾಣಿ'ಗೆ ತಿಳಿಸಿದ್ದಾರೆ.

ಬೆಳ್ಳೂಡಿ ಗ್ರಾ.ಪಂ. ಅಧ್ಯಕ್ಷ ಉಮೇಶ್, ಗ್ರಾ.ಪಂ. ಸದಸ್ಯರಾದ ದುಂಡಿ ಸಿದ್ದೇಶ್, ಶಂಕ್ರಣ್ಣ, ವೀರೇಶ್ ಪೂಜಾರ್, ಯುವರಾಜ್ ಯು.ಬಿ.ಶಿವಕುಮಾರ್ ಸಿದ್ಧಾರ್ಥ ಮತ್ತಿತರರು ನಿಯೋಗದಲ್ಲಿದ್ದರು.



ಮುದೇಗೌಡ್ರ ವಿಶ್ವನಾಥ್‌ರಿಂದ ಎಸ್ಎಆರ್ ಆರೋಗ್ಯ ವಿಚಾರಣೆ

ದಾವಣಗೆರೆ, ಜ. 29- ವಿಶ್ರಾಂತಿ ಪಡೆಯುತ್ತಿರುವ ಮಾಜಿ ಸಚಿವ ಎಸ್.ಎ. ರವೀಂದ್ರನಾಥ್ ಅವರನ್ನು ಅವರ ನಿವಾಸದಲ್ಲಿ ಮುದೇಗೌಡ್ರ ವಿಶ್ವನಾಥ್, ಕೊಟ್ರೇಶ್, ಬಾತಿ ರೇವಣಸಿದ್ದಪ್ಪ, ಶಂಕರ್, ದೊಗ್ಗಳ್ಳಿ ಮಂಜಣ್ಣ ಅವರುಗಳು ಭೇಟಿ ಮಾಡಿ ಆರೋಗ್ಯ ವಿಚಾರಿಸಿದರು.

## ನಗರದ ಪಂಚ ದೇವಸ್ಥಾನಗಳ ಮಹಾಕ್ಷೇತ್ರದ ವಾರ್ಷಿಕೋತ್ಸವ ಇಂದು

ಪಿ.ಬಿ. ರಸ್ತೆ ಕರೂರು ಕ್ರಾಸ್ ಬಳಿ ಇರುವ ಪಂಚದೇವಸ್ಥಾನಗಳ ಮಹಾಕ್ಷೇತ್ರದಲ್ಲಿ ಇಂದಿನಿಂದ ಮೂರು ದಿನ 26 ನೇ ವಾರ್ಷಿಕೋತ್ಸವದ ಕಾರ್ಯಕ್ರಮಗಳು ಜರುಗಲಿವೆ. ಪ್ರತಿ ದಿನ ಬೆಳಿಗ್ಗೆ ಪಂಚದೇವರು, ಕಾಶಿ ಮಹಾ ಲಿಂಗೇಶ್ವರ ಸ್ವಾಮಿಗೆ ಪಂಚಾಮೃತ ಮಾಡಲಾಗುವುದು.

ಇಂದು ಬೆಳಿಗ್ಗೆ 9 ಕ್ಕೆ ಗಣಹೋಮ, ರುದ್ರಹೋಮ, ರುದ್ರ ಪಠಣ ನಂತರ ಮಹಾಮಂಗಳಾರತಿ ಹಾಗೂ ಪ್ರಸಾದ ವಿನಿಯೋಗವಿರುತ್ತದೆ.

ನಾಳೆ ದಿನಾಂಕ 31 ರಂದು ಬೆಳಿಗ್ಗೆ 9 ಕ್ಕೆ ಚಂಡಿ ಹೋಮದ ನಂತರ ಮುತ್ತೈದೆಯರಿಗೆ ಬಾಗಿನ ಅರ್ಪಣೆ ಕಾರ್ಯಕ್ರಮ ಏರ್ಪಡಿಸಲಾಗಿದೆ. ಫೆ. 1 ರಂದು ಬೆಳಿಗ್ಗೆ 9 ಕ್ಕೆ ಶ್ರೀ ಲಕ್ಷ್ಮಿನರಸಿಂಹ ಹೋಮ, ಶ್ರೀ ಶನೈಶ್ಚರ ಸಹಿತ ನವಗ್ರಹ ಹೋಮ, ಲಲಿತ ಸಹಸ್ರನಾಮ ಪಠಣ ನಡೆಯಲಿದೆ.

## ನಗರದಲ್ಲಿ ಇಂದು ಜಿಲ್ಲಾ ಕಾಂಗ್ರೆಸ್‌ನಿಂದ ಗಾಂಧೀಜಿ ಪುಣ್ಯತಿಥಿ

ಜಿಲ್ಲಾ ಕಾಂಗ್ರೆಸ್ ಕಛೇರಿ - ಡಾ. ಶಾಮನೂರು ಶಿವಶಂಕರಪ್ಪ ಭವನ ದಲ್ಲಿ ಇಂದು ಬೆಳಿಗ್ಗೆ 11 ಕ್ಕೆ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಪುಣ್ಯತಿಥಿ ಯನ್ನು ಆಚರಿಸಲಾಗು ವುದು ಎಂದು ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಿನೇಶ್.ಕೆ.ಶೆಟ್ಟಿ ತಿಳಿಸಿದ್ದಾರೆ.

## ಸುವರ್ಣ ಕರ್ನಾಟಕ ವೇದಿಕೆ ಅಧ್ಯಕ್ಷ ಸಂತೋಷ್ ಆತ್ಮಹತ್ಯೆ



ದಾವಣಗೆರೆ, ಜ. 29- ಸುವರ್ಣ ಕರ್ನಾಟಕ ವೇದಿಕೆ ಸಂಸ್ಥಾಪಕ ಅಧ್ಯಕ್ಷ ಸಂತೋಷ್ ಕುಮಾರ್ ನಿನ್ನೆ ರಾತ್ರಿ 10.30ರ ವೇಳೆಗೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

28 ವರ್ಷದ ಸಂತೋಷ್ ಸಾವಿಗೆ ಕೌಟುಂಬಿಕ ಕಲಹ ಕಾರಣ ಎನ್ನಲಾಗಿದೆ. ಪತ್ನಿ ಹಾಗೂ ಇಬ್ಬರು ಹೆಣ್ಣು ಮಕ್ಕಳನ್ನು ಅಗಲಿದ್ದಾರೆ. ಸದಾ ಹೋರಾಟದಲ್ಲಿ ಮುಳುಗಿದ್ದ ಸಂತೋಷ್ ಪ್ರತ್ಯೇಕವಾಗಿ ವಾಸವಾಗಿದ್ದರು.
ಕೆ.ಟಿ.ಜೆ. ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಡಾ. ಸಣ್ಣ ದುರುಗಪ್ಪ ಮೇಲೆ ದೌರ್ಜನ್ಯ ನಡೆಸಿದವರ ವಿರುದ್ಧ ಕ್ರಮಕ್ಕೆ ಆಗ್ರಹ

ದಾವಣಗೆರೆ, ಜ. 29- ದಾವಣಗೆರೆ ಮೂಲದ ಡಾ. ಸಣ್ಣ ದುರುಗಪ್ಪ ಅವರ ಸಾಧನೆಯನ್ನು ಸಹಿಸದೇ ಅವರ ಮೇಲೆ ದೌರ್ಜನ್ಯ ಎಸಗಿರುವ ಇನ್ಫೋಸಿಸ್ ಸಹ ಸಂಸ್ಥಾಪಕ ಕ್ರಿಸ್ ಗೋಪಾಲ ಕೃಷ್ಣನ್ ಅವರನ್ನೊಳಗೊಂಡಂತೆ 18 ಜನರ ವಿರುದ್ಧ ದಲಿತ ದೌರ್ಜನ್ಯ ಪ್ರಕರಣ ದಾಖಲು ಮಾಡುವಂತೆ ಭೋವಿ ಸಮಾಜದ ಮುಖಂಡರೂ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಡಿ.ಬಸವರಾಜ್ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 71 ನೇ ನಗರ ಸಿವಿಲ್ ಮತ್ತು ಸೆಷನ್ ನ್ಯಾಯಾಲಯದ ನಿರ್ದೇಶನದ ಆಧಾರದ ಮೇಲೆ ಭಾರತೀಯ ವಿಜ್ಞಾನ ಸಂಸ್ಥೆಯ ಸುಸ್ಥಿರ ತಂತ್ರಜ್ಞಾನ ಕೇಂದ್ರದಲ್ಲಿ ಅಧ್ಯಾಪಕ ರಾಗಿದ್ದ, ಭೋವಿ ಸಮುದಾಯದ ಹರಪನಹಳ್ಳಿ ತಾಲ್ಲೂಕು ಅರಸೀಕೆರೆ ಗ್ರಾಮದ ಡಾ. ಸಣ್ಣ ದುರುಗಪ್ಪ ಅವರು ನೀಡಿದ ದೂರಿನನ್ವಯ ಇನ್ಫೋಸಿಸ್ ಸಹ ಸಂಸ್ಥಾಪಕ, ಪದ್ಮಭೂಷಣ ಪ್ರಶಸ್ತಿ ಪುರಸ್ಕೃತ ಸೇನಾಪತಿ ಕ್ರಿಸ್ ಗೋಪಾಲ ಕೃಷ್ಣನ್ ಹಾಗೂ ಮಾಜಿ ಐಐಎಸ್‌ಸಿ ನಿರ್ದೇಶಕ ಗೋವಿಂದನ್ ರಂಗರಾಜನ್ ಸೇರಿದಂತೆ 15 ಜನರ ವಿರುದ್ಧ ಸೋಮವಾರ ಎಸ್ಸಿ, ಎಸ್ಟಿ ದೌರ್ಜನ್ಯ ತಡೆ ಕಾಯ್ದೆಯಡಿ ಬೆಂಗಳೂರಿನ ಸದಾಶಿವ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಎಂದು ಹೇಳಿದರು.

ಡಾ. ಸಣ್ಣ ದುರುಗಪ್ಪ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದು, ಇವರು ಹವಾಮಾನ ವೈಪರೀತ್ಯ ವಿಷಯದ ತಜ್ಞರಾಗಿ ಸುಮಾರು 50 ದೇಶಗಳಿಗೆ ಹೋಗಿ ವಿಷಯ ಮಂಡಿಸಿದ್ದರು. ಆದರೆ ಇವರು ಭೋವಿ ಸಮುದಾಯಕ್ಕೆ ಸೇರಿದವರೆಂಬ ಏಕೈಕ ಕಾರಣಕ್ಕಾಗಿ, ಇವರ ಏಳಿಗೆ ಸಹಿಸದೇ ಈ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಕೆಲವರು ಇವರನ್ನು 2014 ರಲ್ಲಿ ಹನಿಟ್ರ್ಯಾಪ್ ಪ್ರಕರಣಕ್ಕೆ ಸಿಲುಕಿಸಿ, ಇವರನ್ನು ಕೆಲಸದಿಂದ ವಜಾ ಮಾಡಿರುವುದಲ್ಲದೇ, ಎಲ್ಲಿಯೂ ಕೆಲಸ ಸಿಗದಂತೆ ಅಪಪ್ರಚಾರ ಮಾಡಿದ್ದಾರೆಂದು ಡಿಬಿ ಆರೋಪಿಸಿದರು.

ಸಣ್ಣ ದುರುಗಪ್ಪ ಅವರ ವಿರುದ್ಧ ಕೇಳಿಬಂದ ಹನಿ ಟ್ರ್ಯಾಪ್ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ನಾಟಕ ಲೆಜಿಸ್ಲೇಟಿವ್ ಅಸೆಂಬ್ಲಿ ನಡೆಸಿದ ತನಿಖೆಯಿಂದ ಇವರು ತಪ್ಪಿತಸ್ಥರಲ್ಲ. ದಲಿತ ಜಾತಿಗೆ ಸೇರಿದ್ದ ಕಾರಣಕ್ಕಾಗಿ ಸೇವೆಯಿಂದ ವಜಾಗೊಳಿಸ ಲಾಗಿದೆ ಎಂಬ ವರದಿ ಬಂದಿದೆ. ತದನಂತರ ಸಣ್ಣ ದುರುಗಪ್ಪ ಅವರನ್ನು ಕೆಲಸಕ್ಕೆ ಸೇರಿಸಿ ಕೊಳ್ಳುವುದಾಗಿ ಒಪ್ಪಿಕೊಂಡಿದ್ದ ಸಂಸ್ಥೆಯ ನಿರ್ದೇಶಕರು ಕೆಲಸಕ್ಕೆ ಸೇರಿಸಿಕೊಳ್ಳದೇ ಅನ್ಯಾಯ ಎಸಗಿದ್ದಾರೆಂದರು.

ಇದೇ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿಯ ಸುಮಾರು 30 ಜನರ ವಿರುದ್ಧ ಲೈಂಗಿಕ ದೌರ್ಜನ್ಯ ಪ್ರಕರಣ ಕೇಳಿ ಬಂದಿದ್ದರೂ ಯಾರೊಬ್ಬರನ್ನೂ ಸೇವೆಯಿಂದ ವಜಾಗೊಳಿಸಿಲ್ಲ. ಹಾಗಾದರೆ ಸಣ್ಣ ದುರುಗಪ್ಪ ಅವರನ್ನು ವಜಾಗೊಳಿಸಿರುವುದರ ಹಿಂದಿನ ಕರಾಳ ಸತ್ಯ ಏನು? ಎಂದು ಪ್ರಶ್ನಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಕಾಂಗ್ರೆಸ್ ಮುಖಂಡರಾದ ಎಂ.ಕೆ. ಲಿಯಾಖತ್ ಅಲಿ, ಕೆ.ಎಂ. ಮಂಜುನಾಥ್, ಎಸ್. ಪ್ರವೀಣ ಕುಮಾರ್, ಡಿ. ಶಿವಕುಮಾರ್, ಬಿ. ಎಸ್. ಸುರೇಶ, ರವಿನಂದನ್ ಉಪಸ್ಥಿತರಿದ್ದರು.

## ಹೊಸ ತಂತ್ರಾಂಶ : ಬೆಸ್ಕಾಂ ಬಿಲ್ಲಿಂಗ್ ಸೇರಿ ಇತರೆ ಸೇವೆ ಸ್ಥಗಿತ

ಬೆಂಗಳೂರು, ಜ.29- ಬೆಸ್ಕಾಂನ ಗ್ರಾಮಾಂತರ ಪ್ರದೇಶಗಳಲ್ಲಿ ಸಮಗ್ರ ಕಂದಾಯ ನಿರ್ವಹಣಾ ಹೊಸ ತಂತ್ರಾಂಶ ಅಳವಡಿಕೆ ಕಾರ್ಯ ಕೈಗೆತ್ತಿಕೊಂಡ ಹಿನ್ನೆಲೆಯಲ್ಲಿ ಜ.30ರಿಂದ ಫೆ.1ರ ವರೆಗೆ ಬಿಲ್ಲಿಂಗ್, ಹೊಸ ಸಂಪರ್ಕ, ಕಂದಾಯ ಸಂಗ್ರಹ ಹಾಗೂ ತಂತ್ರಾಂಶ ಆಧಾರಿತ ಸೇವೆಗಳು ಲಭ್ಯವಿರುವುದಿಲ್ಲ. ಬೆಂಗಳೂರು ನಗರ ಜಿಲ್ಲೆ ಹೊರತು ಪಡಿಸಿ, ಬೆಸ್ಕಾಂ ವ್ಯಾಪ್ತಿಯ ಉಳಿದ 7 ಜಿಲ್ಲೆಗಳ ಗ್ರಾಮಾಂತರ ಪ್ರದೇಶಗಳಲ್ಲಿ ತಂತ್ರಾಂಶ ಆಧಾರಿತ ಸೇವೆಗಳಲ್ಲಿ ವ್ಯತ್ಯಯ ಆಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

# ನಗರದಲ್ಲಿ ಇಂದು ಹುತಾತ್ಮರ ದಿನಾಚರಣೆ

ದಾವಣಗೆರೆ,ಜ.29- ರಾಜ್ಯ ರೈತ ಸಂಘಗಳ ಒಕ್ಕೂಟ ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಹಯೋಗದಲ್ಲಿ ನಾಳೆ ದಿನಾಂಕ 30 ರ ಗುರುವಾರ ಬೆಳಿಗ್ಗೆ 11 ಗಂಟೆಗೆ ದೇಶಕ್ಕಾಗಿ ತ್ಯಾಗ ಮಾಡಿದ ಹುತಾತ್ಮರ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಬಲ್ಲೂರು ರವಿಕುಮಾರ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಗಾಂಧೀಜಿ ಹುತಾತ್ಮರಾದ ದಿನವೇ ಸ್ವಾತಂತ್ರ್ಯ ಹೋರಾಟದಲ್ಲಿ ಮಡಿದವರಿಗೆ, ಹುತಾತ್ಮ ಸೈನಿಕರಿಗೆ ಹಾಗೂ ರೈತ ಹುತಾತ್ಮರಿಗೆ ಗೌರವ ನಮನ ಸಲ್ಲಿಸಲಾಗುವುದು ಎಂದರು.

ಹೆಬ್ಬಾಳು ವಿರಕ್ತಮಠದ ಶ್ರೀ ಮಹಾಂತ ರುದ್ರೇಶ್ವರ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದು, ರೈತ ಸಂಘದ ಜಿಲ್ಲಾಧ್ಯಕ್ಷ ರಾಂಪುರದ ಬಸವರಾಜ್ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್, ಶಾಸಕರಾದ ಬಿ. ಆರ್. ಪಾಟೀಲ್, ಕೆ.ಎಸ್. ಬಸವಂತಪ್ಪ, ಕೆ.ಪಿ. ದರ್ಶನ್ ಪುಟ್ಟಣ್ಣಯ್ಯ, ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್, ರೈತ ಸಂಘಗಳ ಒಕ್ಕೂಟದ ಅಧ್ಯಕ್ಷ ಕುರುಬೂರು ಶಾಂತಕುಮಾರ್, ಮಾಜಿ ಶಾಸಕ ಮುಖ್ಯಮಂತ್ರಿ ಚಂದ್ರು, ಪತ್ರಕರ್ತ ಅಜಿತ್ ಹನುಮಕ್ಕನವರ್, ಮಾಜಿ ಸೈನಿಕರ ಸಂಘದ ರಾಜ್ಯಾಧ್ಯಕ್ಷ ಡಾ.ಎನ್. ಕೆ. ಶಿವಣ್ಣ ಮತ್ತಿತರೆ ಗಣ್ಯರು ಭಾಗವಹಿಸಲಿದ್ದಾರೆಂದು ತಿಳಿಸಿದರು.

ಕಬ್ಬು ಬೆಳೆಗಾರರ ಸಂಘದ ಜಿಲ್ಲಾಧ್ಯಕ್ಷ ತೇಜಸ್ವಿ ಪಟೇಲ್ ಮಾತನಾಡಿ, ಕೋಮು ಗಲಭೆ ಸಂತ್ರಸ್ತರಿಗೆ 25 ಲಕ್ಷ ರೂ.ಪರಿಹಾರ ನೀಡುತ್ತಾರೆ. ಆದರೆ ರೈತ ಹುತಾತ್ಮರ ಕುಟುಂಬಕ್ಕೆ ಪರಿಹಾರ ನೀಡುವಲ್ಲಿ ಸಮಿತಿ ನೇಮಕ ಮಾಡಿ, ಕಡಿಮೆ ಪರಿಹಾರ ನೀಡುತ್ತಾರೆಂದು ಅಸಮಾಧಾನ ವ್ಯಕ್ತಪಡಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಅಂಜಿನಪ್ಪ ಪೂಜಾರ್, ಕೆ.ಜಿ. ಯಲ್ಲಪ್ಪ, ತಿರುಮಲೇಶ್, ಸಿ.ಎಸ್. ಚಂದ್ರಶೇಖರ್, ಚಂದ್ರಶೇಖರ್ ಹೊಲಗೇರಿ, ಹೆಚ್. ವಿಜಯಕುಮಾರ್, ಶಿವಯೋಗಯ್ಯ, ಪ್ರಕಾಶ್ ನಲ್ಲೂರು, ಲೋಕನಗೌಡ್ರು ಉಪಸ್ಥಿತರಿದ್ದರು.

**ಹುತಾತ್ಮರು :** ದಾವಣಗೆರೆಯ ಹಳ್ಳೂರ್ ನಾಗರಾಜಪ್ಪ, ಅಕ್ಕಸಾಲಿ ವಿರೂಪಾಕ್ಷಪ್ಪ, ಬಂದೂರು ಕ್ಯಾಂಪ್ ನಿಂಗಪ್ಪ ಬಿದರಕುಂದಿ, ಹಮಾಲಿ ತಿಮ್ಮಣ್ಣ, ಮಾಗಾನಹಳ್ಳಿ ಹನುಮಂತಪ್ಪ, ಹದಡಿ ನಿಂಗಪ್ಪ ಈ ಐವರು ದೇಶದ ಸ್ವಾತಂತ್ರ್ಯಕ್ಕಾಗಿ 1942ರಲ್ಲಿ ಬ್ರಿಟಿಷರ ಗುಂಡಿಗೆ ಎದೆಕೊಟ್ಟವರು.

ಮಾಜಿ ಮಂತ್ರಿ ಹೆಚ್.ಸಿದ್ಧವೀರಪ್ಪ, ಶ್ರೀಮತಿ ಬಳ್ಳಾರಿ ಸಿದ್ಧಮ್ಮ, ಬಿ.ಜಿ.ಕೊಟ್ರಪ್ಪ, ಶಿವಾನಂದಸ್ವಾಮಿ, ಕಾಸಲ್ ಶ್ರೀನಿವಾಸ ಶೆಟ್ರು, ನಾರಾಯಣರಾವ್ ಗಾಯಕ್‌ವಾಡ, ಗುರುದೇವಯ್ಯ ನಿಶಾನಿಮಠ್, ಕೆ.ಹೆಚ್.ಸಿದ್ಧಪ್ಪ, ಇಟಗಿ ವೇದಮೂರ್ತಿ, ಯಲಿಗಾರ್ ಬಸಪ್ಪ, ಕೆ. ಎಸ್.ಸಿದ್ಧಪ್ಪ, ಎಸ್.ಆರ್.ಗುಂಡಪ್ಪ,, ಕೊಟಗಿ ಸಿದ್ಧಲಿಂಗಪ್ಪ, ಕಂಚಿಕೆರೆ ಚನ್ನಬಸಪ್ಪ, ಎನ್.ಜಿ. ಮುರುಗೇಂದ್ರಯ್ಯ ನಿಶಾನಿಮಠ್, ಎನ್.ಎಂ. ಚಂದ್ರಶೇಖರಯ್ಯ, ಬಾಳೆಹೊಲದ ಮರುಳಸಿದ್ಧಪ್ಪ, ಅಂದನೂರು ಗುರುಶಾಂತಪ್ಪ, ಸಿ.ಎಂ.ಕಲ್ಲಪ್ಪ, ಜಿ.ಮುರುಗೇಂದ್ರಯ್ಯ ಇವರುಗಳು ದೇಶಕ್ಕಾಗಿ ದುಡಿದು, ಮಡಿದವರಾಗಿದ್ದಾರೆ. ದೇಶದ ಸ್ವಾತಂತ್ರ್ಯಕ್ಕಾಗಿ ದುಡಿದ ಮರುಳಸಿದ್ದಪ್ಪ ಹೆಚ್., ಬಿ.ಎಂ. ಶಿವಲಿಂಗಸ್ವಾಮಿ ಜೀವಂತವಾಗಿದ್ದಾರೆ.

ದೇಶದ ರಕ್ಷಣೆಗಾಗಿ ಗಡಿಯಲ್ಲಿ ವೀರ ಮರಣ ಹೊಂದಿದವರು ದಿ.ನಾರಾಯಣರಾವ್ ಸಾವಂತ್ ದಾವಣಗೆರೆ (1971), ದಿ. ನಾಗರಾಜ್ ಎನ್. ನೀಲಗಿರಿಯಪ್ಪ, ಜಡಗನಹಳ್ಳಿ (2008), ದಿ. ವಸಂತ್ ಬಿ.ಎಸ್.ಎಫ್. ಕಸವನಹಳ್ಳಿ, ಹರಪನಹಳ್ಳಿ (2004), 1992ರಲ್ಲಿ ನಡೆದ ರಸಗೊಬ್ಬರದ ಚಳುವಳಿಯಲ್ಲಿ ಆನಗೋಡು ಬಳಿ ಗೋಲಿಬಾರ್‌ಗೆ ತುತ್ತಾದವರು ಕಲ್ಲಿಂಗಪ್ಪ ಓಬೇನಹಳ್ಳಿ, ನಾಗಲಿಂಗಾಚಾರ್ಯ ಸಿದ್ಧನೂರು.





# ಜನ್ಮ ದಿನದ ಶುಭಾಶಯಗಳು

ಕಲರ್ಸ್‌ಕಲ್ಚರಲ್ ಅಕಾಡೆಮಿಯ ಸಂಸ್ಥಾಪಕರೂ, ಅಧ್ಯಕ್ಷರೂ,
ದಾವಣಗೆರೆ ಜಿಲ್ಲಾ ಕಾಂಗ್ರೆಸ್ ಸಮಿತಿ ಖಜಾಂಚಿಗಳೂ,
ಸಂಘಟನಾ ಚತುರರೂ, 'ಆತ್ಮಿ' (ರಿ) ಗೌರವಾಧ್ಯಕ್ಷರು,
ಕ್ರೀಡಾಭಿಮಾನಿಗಳೂ ಆದ
**ಶ್ರೀ ನಲ್ಲೂರು ಎಸ್. ರಾಘಣ್ಣ (ಗುರೂಜಿ)**
ಅವರಿಗೆ ಹುಟ್ಟು ಹಬ್ಬದ ಶುಭಾಶಯಗಳು.

**ಕಲರ್ಸ್ ಕಲ್ಚರಲ್ ಅಕಾಡೆಮಿ, ದಾವಣಗೆರೆ.**

## ನೊಣವಿನಕೆರೆ ಶ್ರೀಗಳಿಗೆ ಇಂದು 74ರ ಸಂಭ್ರಮ



ತುಮಕೂರು ಜಿಲ್ಲೆಯ ತಿಪಟೂರು ತಾಲ್ಲೂಕಿನ ನೊಣವಿನಕೆರೆಯ ಶ್ರೀ ಕಾಡಸಿದ್ದೇಶ್ವರ ಮಠದ ಡಾ. ಕರಿವೃಷಭ ದೇಶೀಕೇಂದ್ರ ಶಿವಯೋಗೀಶ್ವರ ಮಹಾಸ್ವಾಮೀಜಿ ಇಂದು ತಮ್ಮ 73ನೇ ವರ್ಷವನ್ನು ಪೂರೈಸಿ, 74ನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿದ್ದಾರೆ. ಶ್ರೀಗಳವರ ಹುಟ್ಟುಹಬ್ಬವನ್ನು ನೊಣವಿನಕೆರೆ ಶ್ರೀ ಮಠದ ಆವರಣದಲ್ಲಿರುವ ಗುರುಭವನದಲ್ಲಿ ಇಂದು ಬೆಳಿಗ್ಗೆ 10.30ಕ್ಕೆ ಹಮ್ಮಿಕೊಳ್ಳಲಾಗಿದೆ ಎಂದು ದಾವಣಗೆರೆ ಮಹಾನಗರ ಪಾಲಿಕೆ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಹೆಚ್.ಎಂ. ರುದ್ರಮುನಿಸ್ವಾಮಿ ತಿಳಿಸಿದ್ದಾರೆ.

## ಬಂಜಾರ ಕಲಾವಿದರ ಅರ್ಜಿ ಆಹ್ವಾನ

ದಾವಣಗೆರೆ,ಜ.29- ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ ಕಲಾ ಮಳಾವ್ ಕಾರ್ಯಕ್ರಮದಲ್ಲಿ ಭಾಗವಹಿಸುವ ಬಂಜಾರ ಕಲಾವಿದರಿಂದ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ನಾಳೆ ದಿನಾಂಕ 30 ಕೊನೆ ದಿನ. ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ ವಿ.ಎಸ್.ಅಲಗೂರ ಆರ್ಕೇಡ್, 2ನೇ ಮಹಡಿ, ಹದಡಿ ರಸ್ತೆ ದಾವಣಗೆರೆ ಕಚೇರಿಗೆ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ: 9886791289, 99160 13624 ಸಂಪರ್ಕಿಸಬಹುದು.

## ಹರಿಹರದಲ್ಲಿ ಇಂದು

ದೇವದಾಸಿ ಸಮರ್ಪಣೆ ನಿಷೇಧ ಕುರಿತು ಮಾಜಿ ದೇವದಾಸಿ ಮಹಿಳೆಯರಿಗೆ ಅರಿವು ಮೂಡಿಸುವ ಕಾರ್ಯಕ್ರಮವನ್ನು ಇಂದು ಬೆಳಿಗ್ಗೆ 11 ಕ್ಕೆ ಗುರುಭವನದಲ್ಲಿ ನಡೆಯಲಿದೆ.

## ಬಿಐಇಟಿ ಕಾಲೇಜಿನ ನೌಕರರಾದ ಶಿವಾನಂದಪ್ಪ ಜಿ.ಹೆಚ್. ನಿಧನ



ದಾವಣಗೆರೆ ಸಿಟಿ, ಚಿಕ್ಕಮ್ಮಣಿ ದೇವರಾಜ್ ಅರಸ್ ಬಡಾವಣೆ ವಾಸಿ ಅಶ್ವಿನಿ ಹಿಟ್ಟಿನ ಗಿರಣಿ ಮಾಲಿಕರಾದ

**ಶಿವಾನಂದಪ್ಪ ಜಿ.ಹೆಚ್. (ಮೀಸೆ ಶಿವಾನಂದಪ್ಪ)**

ಇವರು ದಿನಾಂಕ : 29.01.2025ರ ಬುಧವಾರ ಸಂಜೆ 6.30 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 59 ವರ್ಷ ವಯಸ್ಸಾಗಿತ್ತು. ಪತ್ನಿ, ಮೂವರು ಪುತ್ರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 30.01.2025ರ ಗುರುವಾರ ಮಧ್ಯಾಹ್ನ 12 ಗಂಟೆಗೆ ರಾಮನಗರದ ಎಸ್.ಎಸ್. ಹೈಟೆಕ್ ಆಸ್ಪತ್ರೆ ಹಿಂಭಾಗದ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ಇಂತಿ ದುಃಖತಪ್ತರು : ಪತ್ನಿ-ಸುನೀತಾ, ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.

ಮೊ : 72040 37706, 81059 09920

## ಮೊದಲನೇ ವರ್ಷದ ಪುಣ್ಯತಿಥಿ



**ದಿ|| ಶ್ರೀ ಜಗನ್ನಾಥ್ ರಾವ್ ಬೊಂಗಾಳೆ**

ದಿನಾಂಕ : 30.01.2025 ದಿನ : ಗುರುವಾರ

ದಿನಾಂಕ : 30.01.2025ರ ಗುರುವಾರ ಬೆಳಿಗ್ಗೆ 11.30ಕ್ಕೆ ನನ್ನ ತಂದೆಯವರಾದ

ಶ್ರೀ ಬೊಂಗಾಳೆ ಜಗನ್ನಾಥ್ ರಾವ್

ಅವರ ಮೊದಲನೇ ವರ್ಷದ ಪುಣ್ಯತಿಥಿಯನ್ನು ಹರಿಹರದ ವಿದ್ಯಾನಗರ 60 ಅಡಿ ರಸ್ತೆಯಲ್ಲಿರುವ ನಮ್ಮ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :

✧ ಶ್ರೀ ಮೋಹನ್ ರಾವ್ ಬೊಂಗಾಳೆ ✧ ಶ್ರೀ ಕಾಳಪ್ಪ ಬೊಂಗಾಳೆ
✧ ಶ್ರೀ ಜ್ಞಾನೇಶ್ವರ ಬೊಂಗಾಳೆ ✧ ಶ್ರೀ ರಾಘವೇಂದ್ರ ಬೊಂಗಾಳೆ
✧ ಶ್ರೀ ಏಕನಾಥ ಬೊಂಗಾಳೆ

ಹಾಗೂ ಬೊಂಗಾಳೆ ವಂಶಸ್ಥರು ಹಾಗೂ ಬಂಧು ಮಿತ್ರರು.

## ಕುಂಭಮೇಳ ಕಾಲ್ತುಳಿತದ ನ್ಯಾಯಿಕ ವಿಚಾರಣೆ

ಲಕ್ನೌ, ಜ. 29 -ಕುಂಭಮೇಳದಲ್ಲಿ ಕಾಲ್ತುಳಿತ ಸಂಭವಿಸಿ 30 ಜನರು ಸಾವನ್ನಪ್ಪಿದ ಘಟನೆಯನ್ನು ನ್ಯಾಯಾಂಗ ತನಿಖೆಗೆ ವಹಿಸಲಾಗುವುದು ಎಂದು ಉತ್ತರ ಪ್ರದೇಶದ ಸಿಎಂ ಯೋಗಿ ಆದಿತ್ಯನಾಥ್ ತಿಳಿಸಿದ್ದಾರೆ. ಮೃತರ ಕುಟುಂಬಗಳಿಗೆ ತಲಾ 25 ಲಕ್ಷ ರೂ. ನೆರವು ನೀಡಲಾಗುವುದು ಎಂದು ಮುಖ್ಯಮಂತ್ರಿ ತಿಳಿಸಿದ್ದಾರೆ.

## ಹನ್ನೊಂದನೇ ವರ್ಷದ ಚಿರಸ್ಮರಣೆ



**ದಿ. ಶ್ರೀ ಬಳ್ಳೇಕಟ್ಟೆ ಚಂದ್ರಪ್ಪ**

ವಿಜಯ ಬ್ಯಾಂಕ್ ನಿವೃತ್ತ ನೌಕರರು

ನೀವು ನಮ್ಮನ್ನಗಲಿ ಇಂದಿಗೆ ಹನ್ನೊಂದು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿ, ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದ್ದೇವೆ....

ಪತ್ನಿ : ಶ್ರೀಮತಿ ನಾಗರತ್ನಮ್ಮ ಚಂದ್ರಪ್ಪ
ಶ್ರೀಮತಿ ಶ್ರೀ ಹೇಮಾವತಿ ಎ.ಜೆ. ಸಂತೋಷ್ ಕುಮಾರ್ ಬಿ.ಸಿ.
ಶ್ರೀಮತಿ ಶ್ರೀ ಸವಿತಾ ಬಿ.ಸಿ. ಡಾ|| ಶಿವಯೋಗಿ ಎಲಿ
ಚಿ|| ಕಲ್ಪದ್ರುವ, ಚಿ|| ಯುವರಾಜ್ ಎಲಿ
ಲೋಕಿಕೆರೆ, ತ್ಯಾವಣಿಗೆ ವಂಶಸ್ಥರು, ಬಳ್ಳೇಕಟ್ಟೆ ನಾರಜ್ಜಿ ವಂಶಸ್ಥರು
ಸಂದೀಪ್ ಸಿ.ಯು., ಕಲ್ಪದ್ರುವ ಎಂಟರ್‌ಪ್ರೈಸಸ್
ವಿಜಯ ಬ್ಯಾಂಕ್ - ವಿಜಯ ಬಳಗದ ಸ್ನೇಹಿತರು, ಬಂಧು - ಮಿತ್ರರು.

## ಎರಡನೇ ವರ್ಷದ ಪುಣ್ಯಸ್ಮರಣೆ



**ದಿ|| ಶ್ರೀ ಎಸ್.ಎಸ್. ಜಯಣ್ಣನವರು**

ಜನನ : 12.02.1945 ಲಿಂಗೈಕ್ಯ : 30.01.2023

ನೀವು ನಮ್ಮನ್ನಗಲಿ ಎರಡು ವರ್ಷಗಳಾದವು... ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲೇ ಮುನ್ನಡೆಯುತ್ತಾ ಸದಾ ನಿಮ್ಮ ಸ್ಮರಣೆಯಲ್ಲಿರುವ...

ದಿ|| ಆಲೂರು ಬಸವರಾಜಪ್ಪ ಮತ್ತು ಮಕ್ಕಳು ಹಾಗೂ ಮೊಮ್ಮಕ್ಕಳು, ದಾವಣಗೆರೆ.


Inauguration
of
SUPERMAX
COMPONENTS PVT. LTD.

MANUFACTURERS OF
SMART ENERGY METERS

30TH JANUARY 2025

WITH THE BLESSINGS OF
SRI SHAMANUR SHIVASHANKARAPPA
MLA, DAVANAGERE SOUTH CONSTITUENCY
HON'BLE SECRETARY, BAPUJI EDUCATION ASSOCIATION

353/364 Old PB Road
Chetana Concrete Products Premises Avaragere Davangere

With Best Compliments from:
I. P. Mallok Aradhya • Roopa Aradhya
Avinash Aradhya • Deepti Aradhya • Shonairra • Miraya
Ārik Aradhya Bahadur • Rohit Bahadur • Anjoo Aradhya Bahadur


## ಜನ್ಮ ದಿನದ ಶುಭಾಶಯಗಳು...



ದಿ|| ಜಗಳೂರು ಮಹಾಲಿಂಗಪ್ಪ ದಿ|| ಬಸಮ್ಮನವರ ಮರಿಮೊಮ್ಮಗ
ಶ್ರೀ ಬಸವರಾಜಪ್ಪ ದಿ|| ಚನ್ನವೀರಮ್ಮನವರ ಮೊಮ್ಮಗ
ಶ್ರೀ ರುದ್ರಮುನಿ ಜಗಳೂರು ಶ್ರೀಮತಿ ದ್ರಾಕ್ಷಾಯಣಮ್ಮ
ಇವರ ಜೇಷ್ಠ ಪುತ್ರ, ಜಗಳೂರು.

ರೈಸ್‌ಮಿಲ್ ಮಾಲೀಕರಾದ

**ಶ್ರೀ ಆರ್. ಆದರ್ಶ ಜಗಳೂರು**

ತಮ್ಮ 30ನೇ ವರ್ಷದ ಹುಟ್ಟುಹಬ್ಬವನ್ನು ಆಚರಿಸಿಕೊಳ್ಳುತ್ತಿರುವ

ಇವರಿಗೆ ಶುಭ ಕೋರುವವರು...

| | | |
|---|---|---|
| ಬಾಬು | ಹನುಮಂತ | ಅಂಜಿನಿ |
| ನಿಂಗಪ್ಪ | ಮಹಾದೇವಪ್ಪ | ಸಾಗರ್ |
| ಮಂಜುನಾಥ ಎಂ. | ಬಾಬಣ್ಣ | ಮಂಜಣ್ಣ |
| ಕರೀಂಭಾಷಾ | ಗುಡ್ಡಪ್ಪ | ರಾಜನಾಯ್ಕ |
| ಕಂಡಪ್ಪ | ಮಂಜು | ಸರೋಜಮ್ಮ |
| ಮೂರ್ತಿ | ಮೋಹನ್ | ಮಹೇಶ |
| ಜಂಗ್ಲಿ ಮಂಜು | ರೇಣುಕಮ್ಮ | ಮೂಗಪ್ಪ |
| ದಾದು | ಸಂತೋಷ್ | ದಾದುಪೀರ್ |
| ಸಂಗೀತಮ್ಮ | ಮೂರ್ತಿನಾಯ್ಕ | ಭಾಷಾರ್ ದಾ |
| ಹನುಮಂತಪ್ಪ | ಮಂಜು | ಸುನೀಲ್ |
| ನಾಗಣ್ಣ | ಸಿದ್ದರಾಮಯ್ಯಸ್ವಾಮಿ | |

ಸಿಬ್ಬಂದಿ ವರ್ಗ, ಜಗಳೂರು ರೈಸ್‌ಮಿಲ್ ಹಾಗೂ ಜಗಳೂರು ಮಹಾಲಿಂಗಪ್ಪ ಎಂಟರ್‌ಪ್ರೈಸಸ್, ಶ್ರೀ ಮೈಲಾರ ಲಿಂಗೇಶ್ವರ ರೈಸ್ ಇಂಡಸ್ಟ್ರೀಸ್, ಭಾರತ್ ಕಾಲೋನಿ, ದಾವಣಗೆರೆ.

## ಶ್ರೀಮತಿ ಮಂಜುಳ ನಿಧನ



ದಾವಣಗೆರೆ ಸಿಟಿ ಬಂಬೂಬಜಾರ್ ವಾಸಿ ಮೇದಾರ ಚಾಕಣಿ ತಿಪ್ಪಣ್ಣನವರ ಮಗನಾದ ಟಿ. ರಾಜಣ್ಣ ಅವರ ಧರ್ಮಪತ್ನಿ

**ಶ್ರೀಮತಿ ಮಂಜುಳ**

ಅವರು ದಿನಾಂಕ 29-1-2025ರ ಬುಧವಾರ ರಾತ್ರಿ 9.40 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 42 ವರ್ಷ ವಯಸ್ಸಾಗಿತ್ತು. ಪತಿ, ಇಬ್ಬರು ಪುತ್ರಿಯರು, ಇಬ್ಬರು ಪುತ್ರರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 30-1-2025ರ ಗುರುವಾರ ಮಧ್ಯಾಹ್ನ 3.30ಕ್ಕೆ ನೆರವೇರಿಸಲಾಗುವುದು.

ಇಂತಿ ದುಃಖತಪ್ತರು : ಶ್ರೀಮತಿ ಭರಮಕ್ಕ, ಶ್ರೀ ಚಾಕಣಿ ಎಂ. ತಿಪ್ಪಣ್ಣ ಮತ್ತು ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.

ಮೊಬೈಲ್ : 94481 55249, 98440 11455






KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas